RNI:KARKAN/2021/85750 KPL/L/RNP/02/24-26

# ಕರುನಾಡ ಕಂದ

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

Volume 4 ಸಂಪುಟ 4 | Issue 18 ಸಂಚಿಕೆ 18 | Date 01-08-2025 | Page 16 ಪುಟ 16 | ಬೆಲೆ: 20/-

FORTNIGHTLY ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ
ಫೋ.ನಂ: 9986366909

## ಕರುನಾಡ ಕಂದ ವರದಿಯ ಫಲಶ್ರುತಿ
## ಅಧಿಕಾರಿಗಳ ಭೇಟಿ, ಸಮಸ್ಯೆಗೆ ಪೂರ್ಣವಿರಾಮ.







## ಕಾಣದಂತೆ ಮಾಯವಾದ ಮತ ಭಿಕ್ಷೆಗೆ ಬಂದ ನಾಯಕರು

## ಮಿತಿಮೀರಿದ ನಕಲಿ ವೈದ್ಯರ ಹಾವಳಿ



## ಸೋರುತಿಹುದು ತಹಶೀಲ್ದಾರ್ ಕಛೇರಿ



## ಸಮಸ್ಯೆಗಳ ಸುಳಿಯಲ್ಲಿ ತಾಲ್ಲೂಕು ಆಸ್ಪತ್ರೆ !?




## ನಿಮ್ಮ ಬರಹಕ್ಕೆ ಪುಸ್ತಕಗಳ ಉಡುಗೊರೆ

### ಅಥಣಿ ಪುರಸಭೆ ಅಧಿಕಾರಿಗಳೇ ಎಲ್ಲಿದ್ದೀರಿ ?
## ಅನಾಹುತಕ್ಕೂ ಮುನ್ನ ಎಚ್ಚರಗೊಳ್ಳಿ



## ಚಾರ್ವಾಕ...!?



## ಮುಂದಾಗುವ ಅನಾಹುತಕ್ಕೆ ಅಧಿಕಾರಿಗಳೇ ನೇರ ಹೊಣೆ !?



ಕರುನಾಡ ಕಂದ
ಸಂಪುಟ 04 | ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ಎಸ್.ಐ.ಟಿ ತನಿಖೆಗೆ ಸಂಪೂರ್ಣ ಅಧಿಕಾರ ನೀಡುವಂತೆ ಒತ್ತಾಯಿಸಿ ಕ.ರ.ವೇ ಹೋರಾಟ






ಬಾಗಲಕೋಟೆ :ಧರ್ಮಸ್ಥಳದ ವ್ಯಾಪ್ತಿಯ ಪ್ರದೇಶದಲ್ಲಿ ಸೌಜನ್ಯ ಎಂಬ ಬಾಲಕಿಯ ಅತ್ಯಾಚಾರ ಮತ್ತು ಕೊಲೆಯ ದುರ್ಘಟನೆಯ ನಂತರ ಹಾಗೂ ಅದಕ್ಕೂ ಪೂರ್ವದಲ್ಲಿ ಹಲವಾರು ಅಮಾಯಕ ಮಹಿಳೆಯರ ಅತ್ಯಾಚಾರ ಮತ್ತು ಕೊಲೆ ಹಾಗೂ ಪುರುಷರ ಕೊಲೆ ಪ್ರಕರಣಗಳು ನಡೆದಿವೆ ಎಂಬ ಆರೋಪವು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಸಧ್ಯ ಎಸ್.ಐ.ಟಿ ತನಿಖೆಗೆ ನೀಡಿರುವ ಪೊಲೀಸ್ ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ಮತ್ತು ಸಹಕಾರ ನೀಡುವಂತೆ ಆಗ್ರಹಿಸಿ ಇತ್ತೀಚೆಗೆ ಬಾಗಲಕೋಟೆಯ ಜಿಲ್ಲಾಡಳಿತ ಭವನದ ಮುಂದೆ ಹೆಚ್. ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಬಾಗಲಕೋಟೆ ಜಿಲ್ಲಾಧ್ಯಕ್ಷ ಬಸವರಾಜ ಧರ್ಮಂತಿ ನೇತೃತ್ವದಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ಉದ್ದೇಶಿಸಿ ಜಿಲ್ಲಾಧ್ಯಕ್ಷ ಬಸವರಾಜ ಧರ್ಮಂತಿ ಮಾತನಾಡಿ ಕರ್ನಾಟಕದ ಧರ್ಮಸ್ಥಳ ಕ್ಷೇತ್ರವು ಅಸಂಖ್ಯಾತ ಭಕ್ತರು ಆರಾಧಿಸುವ, ಪೂಜಿಸುವ ಧಾರ್ಮಿಕ ಸುಕ್ಷೇತ್ರ ಹಾಗೂ ಪ್ರವಾಸಿಗರನ್ನು ಸೆಳೆಯುವ ಅತ್ಯಂತ ಸುಂದರವಾದ ನಿಸರ್ಗ ಪ್ರದೇಶವಾಗಿದೆ, ಇಂತಹ ಪ್ರದೇಶದಲ್ಲಿ ಸೌಜನ್ಯ ಎಂಬ ಬಾಲಕಿಯ ಅತ್ಯಾಚಾರ ಮತ್ತು ಕೊಲೆಯ ದುರ್ಘಟನೆಯ ನಂತರ ಅದಕ್ಕೂ ಪೂರ್ವದಲ್ಲಿ ಹಲವಾರು ಅಮಾಯಕ ಮಹಿಳೆಯರ ಅತ್ಯಾಚಾರ ಮತ್ತು ಕೊಲೆ ಹಾಗೂ ಪುರುಷರ ಕೊಲೆ ಪ್ರಕರಣಗಳು ನಡೆದಿವೆ ಎಂಬ ಆರೋಪವು ಕೇಳಿ ಬಂದಿದ್ದು 1994 ರಿಂದ 2014 ರವರೆಗೆ ಸದರಿ ಪುಣ್ಯಕ್ಷೇತ್ರದ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿದ್ದೆ ಎಂದು ಹೇಳಿಕೊಳ್ಳುತ್ತಿರುವ ವ್ಯಕ್ತಿಯು ತಾನು ಕಾರ್ಯ ನಿರ್ವಹಿಸಿದ ಅವಧಿಯಲ್ಲಿ ನೂರಾರು ಶವಗಳನ್ನು ಗ್ರಾಮದ ವ್ಯಾಪ್ತಿಯಲ್ಲಿ ಹೂತು ಹಾಕಿದ್ದೇನೆ ಸರಕಾರ ಮತ್ತು ನ್ಯಾಯಾಂಗ ನನಗೆ ರಕ್ಷಣೆ ನೀಡಿದರೆ ಸಂಬಂಧಪಟ್ಟ ಇಲಾಖೆಯ ಸಮಕ್ಷಮ ಶವಗಳನ್ನು ಹೂತಿಟ್ಟ ಜಾಗಗಳನ್ನು ತೋರಿಸುತ್ತೇನೆ ಎಂದು ಗೌರವಾನ್ವಿತ ನ್ಯಾಯಾಧೀಶರ ಸಮ್ಮುಖದಲ್ಲಿ ಕಲಂ 164 ರ ಅಡಿ ಸಾಕ್ಷಿ ದೂರುದಾರನಾಗಿ ಹೇಳಿಕೆ ನೀಡಿದ್ದಾನೆ.ಈ ವಿಷಯ ದೇಶದ ಜನತೆಯ ಮನಸ್ಸಿನಲ್ಲಿ ಅನೇಕ ಊಹಾಪೋಹಗಳಿಗೆ ಎಡೆ ಮಾಡಿಕೊಟ್ಟಂತಿದೆ ಆ ವ್ಯಕ್ತಿ ಹಲವಾರು ವರ್ಷಗಳ ಕಾಲ ಸ್ವಚ್ಛತಾ ಕಾರ್ಮಿಕನಾಗಿ ಕಾರ್ಯ ನಿರ್ವಹಿಸಿದ್ದಾನೆ, ಸದರಿ ಸಾಕ್ಷಿ ದೂರುದಾರ ದಕ್ಷಿಣ ಕನ್ನಡ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಲಿಖಿತ ದೂರು ಸಲ್ಲಿಸಿ ಮತ್ತು ಕಲಂ 164 ರ ಅಡಿ ಗೌರವಾನ್ವಿತ ನ್ಯಾಯಾಧೀಶರ ಸಮ್ಮುಖದಲ್ಲಿ ಹೇಳಿಕೆ ನೀಡಿ ಬಹುತೇಕ ಒಂದು ತಿಂಗಳಾದರೂ ಇವತ್ತಿನವರೆಗೆ ಸಾಕ್ಷಿ ದೂರುದಾರನನ್ನು ಕರೆದುಕೊಂಡು ಶವಗಳನ್ನು ಹೂತಿಟ್ಟ ಜಾಗಗಳನ್ನು ಪರಿಶೀಲನೆ ಅಥವಾ ಪಂಚನಾಮೆ ಮಾಡದೇ ಇರುವುದು ನೋಡಿದರೆ ದಕ್ಷಿಣ ಕನ್ನಡ ಜಿಲ್ಲಾ ಪೋಲಿಸ್ ಇಲಾಖೆಯ ಕಾರ್ಯವೈಖರಿ ಬಗ್ಗೆ ದಟ್ಟ ಅನುಮಾನಕ್ಕೆ ಎಡೆ ಮಾಡಿಕೊಟ್ಟಂತಿದೆ. ಈ ಎಲ್ಲಾ ಆಘಾತಕಾರಿ ಬೆಳವಣಿಗೆಗಳನ್ನು ಕಂಡು ರಾಜ್ಯದ ಜನತೆಯ ಆಕ್ರೋಶ ಇಮ್ಮಡಿಯಾಗುತ್ತಿದೆ ಇದನ್ನೆಲ್ಲಾ ಮನಗಂಡ ರಾಜ್ಯ ಸರಕಾರ ಅತ್ತ ಕಡೆ ಪ್ರಭಾವಿಗಳಿಗೂ ನೋವಾಗದಂತೆ ಇತ್ತ ಜನತೆಯ ಆಕ್ರೋಶಕ್ಕೂ ತಾತ್ಕಾಲಿಕ ಮುಲಾಮು ಸವರಿದಂತೆ ರಾಜಕೀಯ ಜಾಣ್ಮೆ ಪ್ರದರ್ಶಿಸುತ್ತಿದೆ ಸಂಪೂರ್ಣ ಸ್ವಾತಂತ್ರ್ಯವಿಲ್ಲದಂತಹ, ಮಾನ್ಯ ನ್ಯಾಯಾಲಯಕ್ಕೆ ವರದಿ ಸಲ್ಲಿಸುವ ಅಧಿಕಾರವಿಲ್ಲದಂತಹ ವಿಶೇಷ ತನಿಖಾ ತಂಡ (ಎಸ್.ಐ.ಟಿ.) ರಚಿಸುವ ಮೂಲಕ ತೋ-ರಿಸಿದೆ.ಎಂದು ಹೇಳುತ್ತಾ ರಾಜ್ಯ ಸರಕಾರ ರಚಿಸಿರುವ ವಿಶೇಷ ತನಿಖಾ ತಂಡ (ಎಸ್.ಐ.ಟಿ.) ಯು ಯಾವುದೇ ಪ್ರಭಾವಕ್ಕೂ ಒಳಗಾಗದೆ ಪಾರದರ್ಶಕ ತನಿಖೆ ನಡೆಸಿ ಅವಶ್ಯಕ ಅಧಿಕಾರ ಮತ್ತು ಮಾನ್ಯ ನ್ಯಾಯಾಲಯಕ್ಕೆ ವರದಿ ಸಲ್ಲಿಸುವ ಅಧಿಕಾರವನ್ನು ನೀಡುವಂತೆ ಗೌರವಾನ್ವಿತ ರಾಜ್ಯಪಾಲರು ಹಾಗೂ ಗೌರವಾನ್ವಿತ ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶಿಸಿ ರಾಜ್ಯ ಸರ್ಕಾರಕ್ಕೆ ಒತ್ತಡ ಹೇರಬೇಕು ಮತ್ತು ಯಾವುದೇ ಹತ್ಯಾಕಾಂಡಕ್ಕಿಂತಲೂ ಕಡಿಮೆಯಿಲ್ಲ ಎಂಬಂತೆ ಕೇಳಿ ಬರುತ್ತಿರುವ ಸದರಿ ಪ್ರಕರಣದಲ್ಲಿ ಯಾವುದೇ ಪ್ರಭಾವಕ್ಕೂ ಒಳಗಾಗದ ಉನ್ನತ ಮಟ್ಟದ ತನಿಖೆ ಮಾಡಿ ನಿಜವಾದ ಅಪರಾಧಿಗಳಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಆಗ್ರಹಪಡಿಸಿದರು.

ಇದೇ ಸಮಯದಲ್ಲಿ ಬಾಗಲಕೋಟೆಯ ಜಿಲ್ಲಾಧಿಕಾ-ರಿಯವರ ಮುಖಾಂತರ ಗೌರವಾನ್ವಿತ ರಾಜ್ಯಪಾಲರಿಗೆ ಹಾಗೂ ಪ್ರಧಾನ ಮಂತ್ರಿಗಳಿಗೆ ಮನವಿಪತ್ರ ರವಾನಿಸಿದರು.

ಪ್ರತಿಭಟನೆಯಲ್ಲಿ ಹೆಚ್. ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳಾದ ಸಂಜೀವ ಡಿಗ್ಗಿ, ಪರಶುರಾಮ ಬುಳ್ಳಾಪೂರ, ಸಂತೋಷ ಚಿನಿವಾಲ, ಗಣೇಶ ನಾಯಕ, ನಿಂಬಯ್ಯ ಕುಲಕರ್ಣಿ, ತಿಮ್ಮಣ್ಣ ಕುರುಬರ, ಸಂತೋಷ ಚಿನಿವಾಲ, ರವಿ ಅಂಬಿಗೇರ, ಸ್ಪಂದನಾ ಮಾಚಾ, ಶರಣು ಗಾಣಿಗೇರ, ಮಲ್ಲು ಅಂಗಡಿ, ಮಂಜುಳಾ ಅಂಗಡಿ, ಶಾಂತಾ ಬಾವಿಕಟ್ಟಿ, ಕಸ್ತೂರಿಬಾಯಿ ಮೆಹರವಾಡೆ, ಶಬಾನಾ ಲಿಂಗಸೂರ, ಈಶ್ವರ ದೊಡಮನಿ, ಆನಂದ ಹಳ್ಳದಮನಿ, ಸಾಧಿಕ್ ತಾಳಿಕೋಟಿ, ಅಬ್ದುಲ್ ಗಬ್ಬೂರ, ಪರಶುರಾಮ ಭಜಂತ್ರಿ, ಪರಶುರಾಮ ಕಲಾದಗಿ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ವರದಿ : ನಿಂಬಯ್ಯ ಕುಲಕರ್ಣಿ

# ಸೋರುತಿಹುದು ತಹಶೀಲ್ದಾರ್ ಕಛೇರಿ







**ಬಾಗಲಕೋಟೆ/ ಬಾದಾಮಿ:** ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಾ ದಂಡಾಧಿಕಾರಿಗಳ ಕಛೇರಿ ಮಳೆಯಿಂದ ಸೋರುತ್ತಿದ್ದು ಅಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ನೆಲದ ಮೇಲೆ ಹಾಗೂ ಟೇಬಲ್ ಮೇಲುಗಡೆ ಗೋಣಿ ಚೀಲ ಹಾಕಿ ಕೆಲಸ ನಿರ್ವಹಿಸುತ್ತಿರುವುದನ್ನು ದೃಶ್ಯದಲ್ಲಿ ಗಮನಿಸಬಹುದು.

ತಾಲೂಕಾ ಆಡಳಿತ ಭವನ /ಮಿನಿ ವಿಧಾನಸೌಧದಲ್ಲೇ ಈ ಪರಿಸ್ಥಿತಿಯಾದರೆ ಇದೆಂತಹ ನಿರ್ಲಕ್ಷ್ಯ? ಕಚೇರಿಯಲ್ಲಿ ಗಣಕ ಯಂತ್ರಗಳು, ಅಮೂಲ್ಯ ಕಾಗದಪತ್ರಗಳು ಇರುವ ಹಾಗೂ ಸಿಬ್ಬಂದಿಗಳು ಕೆಲಸ ಮಾಡುವ ಜಾಗವೇ ಮಳೆಯಿಂದ ಸೋರುತ್ತಿದೆ ಎಂದಾದರೆ ಎಂತಹ ವಿಪರ್ಯಾಸ !.

ಈ ಬಗ್ಗೆ ಬಾದಾಮಿ ತಾಲೂಕಾ ದಂಡಾಧಿಕಾ-ರಿಯವರ ಗಮನಕ್ಕೆ ಬಂದಿಲ್ಲವೇ ಅಥವಾ ಸಿಬ್ಬಂದಿ ವರ್ಗದವರು ಕೆಲಸ ಮಾಡುವ ವಿಭಾಗಕ್ಕೆ ಬಾದಾಮಿ ತಹಶೀಲ್ದಾರ್ ಹೋಗಿಲ್ಲವೇ ? ತಾವಾಯಿತು ತಮ್ಮ ಚೇಂಬರ್ ಆಯಿತು ಎಂದು ಕರ್ತವ್ಯಕ್ಕೆ ಹಾಜರಾಗಿ ಹೋಗುತ್ತಿರುವರೆ ಎನ್ನುವ ರೀತಿ ಸಾಕಷ್ಟು ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಮೂಡುತ್ತಿವೆ ಬಾದಾಮಿ ಶಾಸಕರೇ ನೋಡಿ ಇದು ತಾಲೂಕಾ ಆಡಳಿತ ಭವನ ಕಟ್ಟಡದ ಪರಿಸ್ಥಿತಿ ಇನ್ನಾದರೂ ಸೋರುತ್ತಿರುವ ಕಟ್ಟಡವನ್ನು ರಿಪೇರಿ ಮಾಡಿಸಲಿ ಎನ್ನುವುದು " ಕರುನಾಡ ಕಂದ ಪತ್ರಿಕೆ" ಯ ಕಳಕಳಿ.

ವರದಿ: ನಿಂಬಯ್ಯ ಕುಲಕರ್ಣಿ




# ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಸಮಾರಂಭ ಕಾರ್ಯಕ್ರಮ



ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಹಳ್ಳಿಯೊಂದರ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಸಮಾರಂಭ ಕಾರ್ಯಕ್ರಮದಲ್ಲಿ ಪೂಜ್ಯರು ನೇರವಾಗಿ ಮಾತಾನಾಡಿದ್ದು, ತಾವುಗಳು ಅಂದು ಶ್ರೀಗಳು ಎಂದು ಗೌರವಯುತವಾಗಿ ಟೀಕೆ ಮಾಡಿದ್ದಿರಿ ಇಂದು ಅವರಿಗೆ ನೇರವಾಗಿ ಮಾತಾಡಿದ್ದೀರಿ ಇದುವರೆಗೂ ಮಾನ್ಯ ಸಿದ್ದರಾಮಯ್ಯನವರು ಒಬ್ಬರೆ ಈ ಅಹಿಂದ ವರ್ಗದ ಬಗ್ಗೆ ಮಾತಾಡುತಿದ್ದರು ಇಂದು ಪೂಜ್ಯರು ಧ್ವನಿಗೂಡಿಸಿರುವುದು ರಾಜ್ಯದಲ್ಲಿ ಮತ್ತು ದೆಹಲಿಯಲ್ಲಿ ನಡೆದ ಸಭೆಯಲ್ಲಿ ದೇಶಕ್ಕೆ ಓ.ಬಿ.ಸಿ ಐಕಾನ್ ಸಿದ್ದರಾಮಯ್ಯ ಎಂದು ಘೋಷಣೆಯಾಗಿದೆ ಅಂದರೆ ಇಂದು ಪೂಜ್ಯ ಶ್ರೀ ಈಶ್ವರಾನಂದಪುರಿ ಸ್ವಾಮೀಜಿಗಳು ಸರಿಯಾದ ಸಮಯದಲ್ಲಿ ನೇರವಾಗಿ ಎಚ್ಚರಿಸಿದ್ದಾರೆ ಇಂದು ಅಹಿಂದ ಸಂಘಟನೆಗೆ ಬಲ ಹೆಚ್ಚಾಗಿದೆ ಅಹಿಂದ ವರ್ಗದವರ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಒಂದಾಗಿ ಈ ದೇಶದ ಮುಖ್ಯ ವಾಹಿನಿಯಲ್ಲಿ ನಾವುಗಳು ಇದ್ದೇವೆ ಎಂದು ಸಾಬೀತು ಮಾಡುವ ಕಾಲ ಬಂದಿದೆ ಎಂದು ಕಾರ್ಯಕ್ರಮಕ್ಕೆ ಆಗಮಿಸಿದ್ದ ಗಣ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

- ಅಬ್ದುಲಸಾಬ ನಾಯ್ಕರ

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01–08–2025 ಪುಟಗಳು:16

# ಕಾಣದಂತೆ ಮಾಯವಾದ ಮತ ಭಿಕ್ಷೆಗೆ ಬಂದ ನಾಯಕರು

## ಇಂದೋ ನಾಳೆಯೋ ಬೀಳುವಂತಹ ಮನೆಯಲ್ಲಿ ವಾಸ :ನೊಂದವರ ಆಕ್ರೋಶ





ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಕಾರ್ಯಮೊಳ, ಚೆನ್ನಿಕಟ್ಟೆ, ಮದ್ದೂರು ಕಾಲೋನಿಯಲ್ಲಿ ಬೆಟ್ಟ ಕುರುಬ ಸೋಲಿಗರು ಈ ಹಾಡಿಗಳಲ್ಲಿ ವಾಸವಾಗಿರುವ ಮನೆಗಳು ಯಾವಾಗ ಕುಸಿದು ಬೀಳುತ್ತವೆಯೋ ಎಂಬ ಭಯದಿಂದಲೇ ದಿನದೂಡುವಂತಾಗಿದೆ ವಾಸ ಮಾಡಲು ಯೋಗ್ಯ ಮನೆಗಳಿಲ್ಲ, ಮೂಲಭೂತ ಸೌಕರ್ಯಗಳು ಸಹ ಇವರಿಗೆ ಯಾವುದೂ ದೊರಕುತ್ತಿಲ್ಲ. ಚುನಾವಣೆ ಸಮಯದಲ್ಲಿ ಮಾತ್ರ ಮತ ಭಿಕ್ಷೆಗಾಗಿ ಬಂದು ಆಶ್ವಾಸನೆಗಳನ್ನು ಕೊಟ್ಟು ಮತ ಭಿಕ್ಷೆ ಪಡೆದು ನಮ್ಮ ಜನಾಂಗವನ್ನು ಮರೆತೇ ಬಿಟ್ಟಿದ್ದಾರೆ ಇಲ್ಲಿಯವರೆಗೆ ನಮಗೆ ಸರಕಾರದ ಯಾವುದೇ ಯೋಜನೆಗಳಿಂದ ಮನೆಗಳು ದೊರೆತಿಲ್ಲ, ನಾವು ಬರೀ ಮತ ಹಾಕಲು ಮಾತ್ರ ಬೇಕಾ, ಅವರುಗಳನ್ನು ತಂದು ಇಂತಹ ಮನೆಗಳಲ್ಲಿ ಇಟ್ಟರೆ ಇರುತ್ತಾರಾ? ಭಾಷಣಗಳಲ್ಲಿ ಮಾತ್ರ ಕೋಟಿಗಳ ಲೆಕ್ಕದಲ್ಲಿ ನಮ್ಮ ಜನಾಂಗಕ್ಕೆ ಏನೇನೋ ಅನುಕೂಲ ಮಾಡಿಕೊಟ್ಟಿದ್ದೀವಿ ಎಂದು ಬೊಂಬಡೆ ಹೊಡೆಯುವ ಅವರುಗಳು ಒಮ್ಮೆಯೂ ನಮ್ಮ ಸಮಸ್ಯೆ ಕೇಳಿಲ್ಲ, ಮತದಾನ ನಮ್ಮ ಹಕ್ಕು ಎಂದಾದರೆ ಮೂಲಭೂತ ಸೌಕರ್ಯ ಕೇಳುವ ಹಕ್ಕು ನಮಗಿಲ್ಲವೇ ಎಂದು ಸ್ಥಳೀಯ ರಾಜಕೀಯ ನಾಯಕರು ಹಾಗೂ ಅಧಿಕಾರಿಗಳ ಕುರಿತು ಅಸಮಾಧಾನ ವ್ಯಕ್ತಪಡಿಸುತ್ತಾ ಇವರ ಬಗ್ಗೆ ಸರಕಾರ ಆದಷ್ಟು ಬೇಗ ಗಮನಕ್ಕೆ ತೆಗೆದುಕೊಂಡು ಈ ಸಮಸ್ಯೆ ಬಗೆಹರಿಸಬೇಕೆಂದು ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ತು (ರಿ.) ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮನವಿ ಮಾಡಿಕೊಳ್ಳುತ್ತಿದ್ದಾರೆ.

## ಸ್ವಯಂ ಚಾಲಿತ ಚಾಲನಾ ಪಥಕ್ಕೆ ಚಾಲನೆ



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಪಟ್ಟಣದ ಹೊರವಲಯದ ದೇವಲಾಪುರ ರಸ್ತೆಯಲ್ಲಿರುವ ಸಹಾಯಕ ಪ್ರಾದೇಶಿಕ ಸಾರಿಗೆ ಇಲಾಖೆಯ ಅವರಣದಲ್ಲಿ 5.50 ಕೋಟಿ ರೂಪಾಯಿ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸ್ವಯಂ ಚಾಲಿತ ಚಾಲನಾ ಪಥವನ್ನು ಸಾರಿಗೆ ಹಾಗೂ ಮುಜರಾಯಿ ಇಲಾಖೆ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರಿಬ್ಬನ್ ಕತ್ತರಿಸುವ ಮೂಲಕ ಚಾಲನೆ ನೀಡಿದರು.

ಇದೆ ವೇಳೆ ಬೈಲಹೊಂಗಲ ಮತಕ್ಷೇತ್ರದ ಶಾಸಕರಾದ ಶ್ರೀ ಮಹಾಂತೇಶ ಕೌಜಲಗಿ, ಪುರಸಭೆಯ ಅಧ್ಯಕ್ಷರಾದ ಶ್ರೀ ವಿಜಯ ಶ್ರೀಶೈಲ ಬೋಳನ್ನವರ, ಅಪರ ಸಾರಿಗೆ ಆಯುಕ್ತ ಶ್ರೀ ಬಿ.ಪಿ. ಉಮಾಶಂಕರ್, ತಹಶೀಲ್ದಾರರಾದ ಶ್ರೀ ಶ್ರೀಕಾಂತ ಸಿರಹಟ್ಟಿ, ಬೈಲಹೊಂಗಲ ತಾಲೂಕಿನ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯ ಶ್ರೀ ಜೆ ಬಿ ನರಸಣ್ಣವರ ಸೇರಿದಂತೆ ಇನ್ನೂ ಹಲವಾರು ಗಣ್ಯರು ಭಾಗವಹಿಸಿ ಕಾರ್ಯಕ್ರಮವನ್ನು ಅದ್ದೂರಿಯಾಗಿ ನೆರವೇ–ರಿಸಿಕೊಟ್ಟರು.

**ವರದಿ ಮಂಜು. ಎಂ. ಚಿಕ್ಕಣ್ಣವರ**


## ಎಚ್ಚರ : ಸಂಚಾರಿ ನಿಯಮ ಉಲ್ಲಂಘಿಸಿದವರ ಮನೆ ಮನೆಗೆ ಬರಲಿದೆ ದಂಡ




ಬಾಗಲಕೋಟೆ ಜಿಲ್ಲೆಯ ಬಾದಾಮಿ ಪೊಲೀಸ್ ಠಾಣೆಯ ಸಿ. ಪಿ. ಐ ಕರಿಯಪ್ಪ ಬನ್ನೇ ಹಾಗೂ ಪಿ.ಎಸ್. ಐ. ವಿಠಲ್ ನಾಯಕ ನೇತೃತ್ವದಲ್ಲಿ ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಆದೇಶದಂತೆ ಹೆಲ್ಮೆಟ್ ಹಾಕದೆ ಇನ್ನು ಮುಂದೆ ದ್ವಿಚಕ್ರ ವಾಹನ ಸಂಚಾರ ಮಾಡಿದರೆ ಸ್ಥಳದಲ್ಲಿಯೇ ಜಿ.ಪಿ.ಎಸ್. ಲೊಕೇಶನ್ ಸಹಿತ ಫೋಟೋ ತೆಗೆದು ಇಲಾಖೆಗೆ ಕಳಿಸಿ ವಾಹನದ ನಂಬರ್ ಮೂಲಕ ವಾಹನ ಮಾಲಿಕರ ಮನೆಗೆ ದಂಡದ ರಸೀದಿ ಬಂದು ತಲುಪುತ್ತದೆ, ಈಗಾಗಲೇ ಬಾಗಲಕೋಟೆ ನಗರದಲ್ಲಿ ಈ ನಿಯಮ ಚಾಲನೆಯಲ್ಲಿದ್ದು ಸಂಚಾರಿ ನಿಯಮ ಉಲ್ಲಂಘಿಸಿದವರಿಗೆ ಸ್ಥಳದಲ್ಲಿಯೇ ಕ್ಯಾಮೆರಾಗಳು ಫೋಟೋ ಕ್ಲಿಕ್ಕಿಸಿ ದಂಡ ವಿಧಿಸುವ ಕ್ರಮ ಜಾರಿಯಲ್ಲಿದ್ದು ಇನ್ನು ಮುಂದೆ ಬಾದಾಮಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಚಾರಿ ನಿಯಮ ಉಲ್ಲಂಘಿಸುವವರಿಗೆ ಮನೆ ಮನೆಗೆ ದಂಡ ತಲುಪಿಸುವ ಕ್ರಮ ಜಾರಿಯಾಗಿದೆ ಎಂದು ಜಾಗೃತಿ ಮೂಡಿಸಿದರು.

ಈ ಬಗ್ಗೆ ಸಾರ್ವಜನಿಕರು ಹಾಗೂ ದ್ವಿಚಕ್ರ ವಾಹನ ಸವಾರರು " ನಮ್ಮ ಜೀವ ಉಳಿಸುವ ಈ ಹೆಲ್ಮೆಟ್ ಧರಿಸದವರಿಗೆ ದಂಡ ವಿಧಿಸುವ ಕ್ರಮ ತಂದಿರುವುದು ಜನರ ಪ್ರಾಣ ರಕ್ಷಣೆ ಮಾಡಿದಂತಾಗುತ್ತದೆ " ಎಂದು ಪೊಲೀಸ್ ಇಲಾಖೆಯ ಈ ಕ್ರಮಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು.

**ವರದಿ:ನಿಂಬಯ್ಯ ಕುಲಕರ್ಣಿ**




ಬೆಳಗಾವಿ ಜಿಲ್ಲೆಯ ಜಿಲ್ಲೆಯ ಬೈಲಹೊಂಗಲ ತಾಲೂಕಿನ ತಹಶೀಲ್ದಾರ ಕಾರ್ಯಾಲಯದ ಶಿರಸ್ತೇದಾರರಾದ ಶ್ರೀ ಜಿತೇಂದ್ರ ವ. ನಿಡೋಣಿ ಅವರೊಂದಿಗೆ " ಕರುನಾಡ ಕಂದ ".

## ನಾಲ್ಕನೇ ಬಾರಿ ಕೋಡಿ ಬೀಳುವತ್ತ ವಿ.ವಿ ಸಾಗರ ಜಲಾಶಯ


ಚಿತ್ರದುರ್ಗ/ ಹಿರಿಯೂರು : ವಾಣಿ ವಿಲಾಸ ಸಾಗರ ಜಲಾಶಯ ಭರ್ತಿಯಾಗುವತ್ತಾ ಸಾಗಿದೆ. ಭದ್ರಾ ಮೇಲ್ದಂಡೆ ಯೋಜನೆಯಿಂದಾಗಿ ವಿ. ವಿ ಸಾಗರಕ್ಕೆ ನೀರು ಹರಿಯಲಿದ್ದು ವಿ.ವಿ ಸಾಗರ ಜಲಾಶಯ 4ನೇ ಬಾರಿ ಭರ್ತಿಯಾಗುವ ಭರವಸೆ ಮೂಡಿದೆ. ಜುಲೈ 27ರಿಂದ 4 ತಿಂಗಳವರೆಗೆ ನೀರು ಬರುವ ಕಾರಣ ವರ್ಷದಲ್ಲಿ ಎರಡನೇ ಬಾರಿ ಜಲಾಶಯ ತುಂಬಿ ಕೋಡಿ ಬೀಳುವ ನಿರೀಕ್ಷೆ ಗೋಚರಿಸಿದೆ. ಜಲಾಶಯ ಈವರೆಗೆ ಮೂರು ಬಾರಿ ಕೋಡಿ ಬಿದ್ದಿದ್ದು ಇದೀಗ ಜಲಾಶಯ ತುಂಬಲು 6.20 ಅಡಿ ನೀರು ಬೇಕಿದ್ದು ಮತ್ತೊಮ್ಮೆ ಕೋಡಿ ಬೀಳುವ ಸಾಧ್ಯತೆ ಹೆಚ್ಚಿದೆ.

ಜಲಾಶಯ ನಿರ್ಮಾಣವಾಗಿ 89 ವರ್ಷದ ನಂತರ 2022ನೇ ಸೆಪ್ಟೆಂಬರ್ 2 ರಂದು ಜಲಾಶಯ ಇತಿಹಾಸದಲ್ಲಿ ಎರಡು ಬಾರಿ ತುಂಬಿ ಕೋಡಿ ಬಿದ್ದಿತ್ತು. 2025ರ ಜ. 12ರಂದು ಮೂರನೇ ಬಾರಿ ಕೋಡಿ ಬಿದ್ದಿತ್ತು. ಆಗ ಸಿದ್ದರಾಮಯ್ಯ ಜಲಾಶಯಕ್ಕೆ ಬಾಗಿನವನ್ನು ಅರ್ಪಿಸಿದರು. ಇದರ ಎತ್ತರ 50 ಮೀಟರ್ ಉದ್ದ 405 ಮೀಟರ್ ಗಳು, 135 ಮೀಟರ್ ರವರೆಗೆ ನೀರನ್ನು ಸಂಗ್ರಹಿಸಬಹುದಾಗಿದೆ.

**ವಿ. ವಿ ಸಾಗರಕ್ಕೆ ಹೆಚ್ಚು ನೀರು ಸಂಗ್ರಹವಾದ ವರ್ಷ**

1917 ರಲ್ಲಿ 120.6 ಅಡಿ
1918 ರಲ್ಲಿ 121.30 ಅಡಿ
1919 ರಲ್ಲಿ 128.30 ಅಡಿ
1920 ರಲ್ಲಿ 125.50 ಅಡಿ,
1935 ರಲ್ಲಿ 123.22 ಅಡಿ
1956 ರಲ್ಲಿ 125. ಅಡಿ
1958 ರಲ್ಲಿ 124.50 ಅಡಿ
2000ರಲ್ಲಿ 122.50 ಅಡಿ
2022 ರಲ್ಲಿ 135 ಅಡಿ

ಭರ್ತಿಯಾಗುವ ನಿರೀಕ್ಷೆಯಲ್ಲಿ ವಿ. ವಿ ಸಾಗರ ಅಣೆಕಟ್ಟು



ಹಿರಿಯೂರು ತಾಲೂಕಿನ ಸುಮಾರು 1/3 ರಷ್ಟು.( ಹತ್ತು ಸಾವಿರ ಹೆಕ್ಟರ್ ಪ್ರದೇಶಕ್ಕೆ ) ನೀರುಣಿಸುವುದಲ್ಲದೆ ಹಿರಿಯೂರು ಮತ್ತು ಚಿತ್ರದುರ್ಗ ನಗರಗಳಿಗೆ ಕುಡಿಯುವ ನೀರನ್ನು ಒದಗಿಸುತ್ತದೆ. ಹಿರಿಯೂರು ತಾಲೂಕಿನಲ್ಲಿ ನೀರಿನ ಅಭಾವ ಸೃಷ್ಟಿಯಾಗಿದ್ದರಿಂದಾಗಿ ಈ ಭಾಗದ ಅಚ್ಚು ಕಟ್ಟು ಪ್ರದೇಶದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ 1907ರಲ್ಲಿ ವೇದಾವತಿ ನದಿಗೆ ಅಡ್ಡಲಾಗಿ ವಿ.ವಿ ಸಾಗರ ಡ್ಯಾಮ್ ಅನ್ನು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ಕಟ್ಟಿಸಿದರು. ಜಲಾಶಯ ಈಗ ಮತ್ತೆ ಮತ್ತೆ ತುಂಬುತ್ತಿದ್ದು ಮತ್ತೆ ಜಿಲ್ಲೆಯ ರೈತರಲ್ಲಿ ಸಂತಸ ಮೂಡಿದೆ.

**ವರದಿ : ಎಂ. ಚಂದ್ರಶೇಖರ ಚಾರಿ , ಚಿತ್ರದುರ್ಗ.**

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01–08–2025 ಪುಟಗಳು:16

# ರಸಗೊಬ್ಬರ ವಿಷಯದಲ್ಲಿ ರಾಜಕೀಯ ಮಾಡದೆ ಸರಿಯಾದ ವಿತರಣೆಗೆ ಕ್ರಮ ಕೈಗೊಳ್ಳಿ :ರಾಜ್ಯಸಭಾ ಸಂಸದ ಈರಣ್ಣ ಕಡಾಡಿ



**ಬೆಳಗಾವಿ:** ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರಾದ ಶ್ರೀ ಜೆ.ಪಿ. ನಡ್ಡಾ ಅವರನ್ನು ಕರ್ನಾಟಕ ಬಿಜೆಪಿ ಸಂಸದರ ನಿಯೋಗದೊಂದಿಗೆ ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಭೇಟಿಯಾಗಿ ರಾಜ್ಯದಲ್ಲಿ ರಸಗೊಬ್ಬರದ ವಿತರಣೆಯಲ್ಲಿ ಆಗಿರುವ ಗೊಂದಲ ಕುರಿತು ಸಚಿವರೊಂದಿಗೆ ಚರ್ಚಿಸಿದರು.

ನವದೆಹಲಿಯಲ್ಲಿ ಪತ್ರಿಕಾ ಹೇಳಿಕೆ ನೀಡಿದ ರಾಜ್ಯ ಸಭಾ ಸಂಸದ ಈರಣ್ಣ ಕಡಾಡಿ ಅವರು ಖಾರಿಫ್ ಋತುವಿಗೆ ಕರ್ನಾಟಕ ರಾಜ್ಯಕ್ಕೆ 6.30 ಲಕ್ಷ ಮೆಟ್ರಿಕ್ ಟನ್ ಯೂರಿಯಾ ಪೂರೈಸಲು ಕೋರಲಾಗಿತ್ತು. ರಾಜ್ಯದ ರೈತರ ಹಿತದೃಷ್ಟಿಯಿಂದ ಕೇಂದ್ರ ರಸಗೊಬ್ಬರ ಇಲಾಖೆ ಜುಲೈ ಅಂತ್ಯಕ್ಕೆ 8.73 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆ ಮಾಡಲಾಗಿದೆ. ರಾಜ್ಯದಲ್ಲಿ ಇಲ್ಲಿಯವರೆಗೆ 7.08 ಲಕ್ಷ ಮೆಟ್ರಿಕ್ ಟನ್ ಯೂರಿಯಾ ಮಾರಾಟವಾಗಿದೆ. 1.65 ಲಕ್ಷ ಮೆಟ್ರಿಕ್ ಟನ್ ಯೂರಿಯಾ ರಾಜ್ಯದ ಗೋದಾಮಿನಲ್ಲಿ ದಾಸ್ತಾನು ಇರುವುದಾಗಿ ಮಾಹಿತಿ ನೀಡಿದರು ಜೊತೆಗೆ ಈಗಾಗಲೇ ಸುಮಾರು 16 ಸಾವಿರ ಟನ್ ರಸಗೊಬ್ಬರವನ್ನು ರಾಜ್ಯಕ್ಕೆ ಕಳುಹಿಸಿ ಕೊಡುತ್ತಿದ್ದೇವೆ ಎಂದು ಸಚಿವರು ನಮ್ಮ ನಿಯೋಗಕ್ಕೆ ವಿವರ ನೀಡಿದ್ದಾರೆ, ಕರ್ನಾಟಕ ರಾಜ್ಯದ ಕಲಬುರ್ಗಿ, ಕೊಪ್ಪಳ, ಶಿವಮೊಗ್ಗ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಯೂರಿಯಾ ಕೊರತೆ ಉಂಟಾಗಿದ್ದು, ರಾಜ್ಯ ಸರ್ಕಾರ ತನ್ನ ಬಳಿ ಇರುವ 1.65 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರವನ್ನು ಸರಿಯಾಗಿ ವಿತರಣೆ ಮಾಡುವ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಬೇಕಾದ ಅವಶ್ಯಕತೆ ಇದೆ ಎಂದು ಮನವರಿಕೆ ಮಾಡಿದ ನಂತರ ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ಉಂಟಾಗಿರುವ ಅಧಿಕಾರ ಹಂಚಿಕೆಯ ಗಲಾಟೆಯಲ್ಲಿ ರಸಗೊಬ್ಬರ ವಿತರಣೆಗೆ ಅಗತ್ಯ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದು ಮುಕ್ತ ಮಾರುಕಟ್ಟೆಯಲ್ಲಿ ಏಜೆಂಟರು ಯೂರಿಯಾ ರಸಗೊಬ್ಬರದ ದುರ್ಬಳಕೆ ಮಾಡಿಕೊಂಡಿದ್ದು ಅಂತವರಿಗೆ ಅವಕಾಶ ನೀಡಿ ರೈತರನ್ನು ಬೀದಿಗೆ ತಳ್ಳಿ ಕೇಂದ್ರ ಸರ್ಕಾರದ ಕಡೆಗೆ ಬೆರಳು ತೋರಿಸುವುದು ಎಷ್ಟು ಸರಿ ? ರೈತರ ರಸಗೊಬ್ಬರ ವಿಷಯದಲ್ಲಿ ರಾಜಕೀಯ ಮಾಡಲಾರದೇ ಸರಿಯಾದ ವಿತರಣೆಗೆ ಕ್ರಮ ಕೈಗೊಂಡು ರೈತರ ನೆರವಿಗೆ ಧಾವಿಸಬೇಕಾದ ಅವಶ್ಯಕತೆ ಇದೆ ಎಂದರು. ಈ ನಿಯೋಗದಲ್ಲಿ ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಹ್ಲಾದ ಜೋಶಿ, ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ, ಸಂಸದರಾದ ಜಗದೀಶ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ, ಪಿ.ಸಿ ಗದ್ದಿಗೌಡರ, ರಮೇಶ ಜಿಗಜಿಣಗಿ, ಡಾ. ಕೆ. ಸುಧಾರಕರ, ಕ್ಯಾಪ್ಟನ್ ಬ್ರಿಜೇಶ್ ಚೌಟ ಉಪಸ್ಥಿತರಿದ್ದರು.

ವರದಿ ಮಂಜು .ಎಮ್. ಚಿಕ್ಕಣ್ಣವರ

# ಮನೆ ಮನೆಗೆ ಪೊಲೀಸ್




" ಮನೆ ಮನೆಗೆ ಪೊಲೀಸ್ " ಎಂಬ ವಿನೂತನ ಕಾರ್ಯಕ್ರಮವು ಮೇಲಾಧಿಕಾರಿಗಳ ಆದೇಶದ ಮೇರೆಗೆ ಬಾಗಲಕೋಟೆ ಜಿಲ್ಲೆ ಬಾದಾಮಿ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಂದ ಬಾದಾಮಿ ಠಾಣಾ ವ್ಯಾಪ್ತಿಯಲ್ಲಿನ ಆಲದಕಟ್ಟಿ ಗ್ರಾಮದಲ್ಲಿ ಅಭೂತಪೂರ್ವವಾಗಿ ಪ್ರಾರಂಭವಾಯಿತು.

ಗ್ರಾಮದ ಪ್ರತಿ ಮನೆ ಮನೆಗೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸಿದರು ಹಾಗೂ ಸ್ಥಳದಲ್ಲಿಯೇ ಬಗೆ ಹರಿಯುವಂತಹ ಸಮಸ್ಯೆಗಳನ್ನು ಬಗೆಹರಿಸಿದ್ದನ್ನು ನೋಡಿ ಸಾರ್ವಜನಿಕರು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾನ್ಯ ಸಿ. ಪಿ. ಐ ಬಾದಾಮಿ ಶ್ರೀ ಕರಿಯಪ್ಪ ಬನ್ನೆ ರವರು ಮತ್ತು ಪಿಎಸ್ಐ ಶ್ರೀ ವಿಠ್ಠಲ ನಾಯಕ್ ರವರು, ಎ ಎಸ್ ಐ ಆದ ಶ್ರೀ ಡಿ ಜೆ ಶಿವಪುರ, ಶ್ರೀ ಎಂ ವಾಯ್ ಯಾಳವರ, ಬೀಟ್ ಸಿಬ್ಬಂದಿಯಾದ ಶ್ರೀ ಜಿ ಎಸ್ ಸುನಗದ, ಬಾದಾಮಿ ಠಾಣೆಯ ಸಿಬ್ಬಂದಿ ವರ್ಗದವರು , ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಜು ಮುಗುಳ್ಕೋಡ್ ರವರು, ಗ್ರಾಮ ಲೆಕ್ಕಾಧಿಕಾರಿಗಳಾದ ಶ್ರೀ ಪ್ರಭುಕುಮಾರ ಕುಂಬಾರ ರವರು ಹಾಗೂ ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯರಾದ ಶ್ರೀಮತಿ ಹುಲ್ಲಿಕೇರಿ, ಅಂಗನವಾಡಿ ಶಿಕ್ಷಕಿಯರು, ಆಶಾ ಕಾರ್ಯಕರ್ತೆಯರು, ಗ್ರಾಮದ ಗ್ರಾಮ ಪಂಚಾಯತ್ ಸದಸ್ಯರು, ಗ್ರಾಮದ ಮುಖಂಡರು ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ವರದಿ :ನಿಂಬಯ್ಯ ಕುಲಕರ್ಣಿ

# ಜೆ.ಡಿ.ಎಸ್. ಕಾರ್ಯಕರ್ತರ ಸಮಾವೇಶ ಹಾಗೂ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ




**ಬಾಗಲಕೋಟೆ :** ಜಿಲ್ಲೆಯ ಬಾದಾಮಿ ಮತಕ್ಷೇತ್ರದ ಜನತಾದಳ (ಜಾತ್ಯಾತೀತ) ಕಾರ್ಯಕರ್ತರ ಸಮಾವೇಶ ಹಾಗೂ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಲು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷರಾದ ಶ್ರೀ ನಿಖಿಲ್ ಕುಮಾರಸ್ವಾಮಿಯವರು ದಿ. 17 ಜುಲೈ 2025 ರಂದು ಬಾದಾಮಿ ಮತಕ್ಷೇತ್ರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಕಾರ್ಯಕ್ರಮ ಯಶಸ್ವಿಗೊಳಿಸುವ ಪ್ರಯುಕ್ತ ಬಾದಾಮಿ ತಾಲೂಕ ಜನತಾದಳ (ಜಾತ್ಯತೀತ) ಪಕ್ಷದ ವತಿಯಿಂದ ಪಕ್ಷದ ಎಲ್ಲಾ ಮುಖಂಡರು, ಪಕ್ಷದ ಮಹಿಳಾ ಕಾರ್ಯಕರ್ತರು, ಯುವ ಕಾರ್ಯಕರ್ತರು, ಪಕ್ಷದ ಅಭಿಮಾನಿಗಳು ಶ್ರೀ ನಿಖಿಲ್ ಕುಮಾರಸ್ವಾಮಿಯವರಿಗೆ ಸ್ವಾಗತ ಕೋರಿದರು.

ವರದಿ : ನಿಂಬಯ್ಯ ಕುಲಕರ್ಣಿ

# ಆರೋಗ್ಯ ಶಿಬಿರಕ್ಕೆ ಚಾಲನೆ ನೀಡಿದ ರಾಯಬಾಗ ಮತಕ್ಷೇತ್ರದ ಶಾಸಕ ಐಹೊಳೆ



**ಬೆಳಗಾವಿ/ರಾಯಬಾಗ:** ರಾಷ್ಟ್ರೀಯ ಬಾಯಿ ಆರೋಗ್ಯ ಅಭಿಯಾನ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಬೆಳಗಾವಿ, ಅಪರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಚಿಕ್ಕೋಡಿ, ಸಹಯೋಗದಲ್ಲಿ ರಾಯಬಾಗ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ, ಉಚಿತ ಬಾಯಿ, ದಂತ ತಪಾಸಣೆ ಹಾಗೂ ದಂತ ಪಂಕ್ತಿ ಉಚಿತ ಚಿಕಿತ್ಸೆ ಶಿಬಿರಕ್ಕೆ ಶಾಸಕ ದುರ್ಯೋಧನ ಐಹೊಳೆ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವೈದ್ಯಾಧಿಕಾ–ರಿಗಳು, ಪಕ್ಷದ ಮುಖಂಡರು, ಕಾರ್ಯಕರ್ತರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವರದಿ :ಸಂಗಮೇಶ ಕಾಂಬಳೆ

# ವೀಲ್ ಚೇರ್‌ಗಳ ಕೊಡುಗೆ



**ಮಂಗಳೂರು:** ಶ್ರೀಶಾ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯ ವತಿಯಿಂದ ತನ್ನ 6 ನೆಯ ವರ್ಷದ ಸ್ಥಾಪನಾ ದಿನದ ಅಂಗವಾಗಿ ಮಂಗಳೂರು ತಾಲೂಕಿನ ಆರ್ಥಿಕವಾಗಿ ಹಿಂದುಳಿದ, ಸ್ವತಂತ್ರವಾಗಿ ನಡೆದಾಡಲೂ ತೀವ್ರ ತೊಂದರೆ ಅನುಭವಿಸುತ್ತಿರುವ ಹಾಗೂ ಸ್ವಂತ ಹಣದಲ್ಲಿ ಕೊಳ್ಳಲು ಅಶಕ್ತರಾಗಿರುವವರಿಗೆ ವೀಲ್ ಚೇರ್ ಗಳನ್ನು ನೀಡುತ್ತಿದೆ.

ಮೊದಲು ನೋಂದಾಯಿಸಿದವ–ರಿಗೆ ಮೊದಲ ಆದ್ಯತೆ. ಅವಶ್ಯಕತೆ ಇದ್ದವರು ಆಗಸ್ಟ್ 15 ರೊಳಗೆ ಸೊಸೈಟಿಯನ್ನು ಸಂಪರ್ಕಿಸಬಹುದು.

M.S. ಗುರುರಾಜ್ ಅಧ್ಯಕ್ಷರು, ಶ್ರೀಶಾ ಸೌಹಾರ್ದ ಸೊಸೈಟಿ ಪೋ: 9845032598

ವರದಿ: ಕೊಡಕ್ಕಲ್ ಶಿವಪ್ರಸಾದ್

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ಮುಂದಾಗುವ ಅನಾಹುತಕ್ಕೆ ಅಧಿಕಾರಿಗಳೇ ನೇರ ಹೊಣೆ !?



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಕೆಂಗಾನೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರವಳಿ ಲಿಂಗದಳ್ಳಿ ರಸ್ತೆ ತುಂಬಾ ಹದಿಗೆಟ್ಟು ರಸ್ತೆ ಮಧ್ಯದಲ್ಲಿ ದೊಡ್ಡ ದೊಡ್ಡ ಗುಂಡಿಗಳು ಬಿದ್ದಿವೆ ಈ ವಿಷಯವಾಗಿ " ಕರುನಾಡ ಕಂದ ಪತ್ರಿಕೆ " ಯಲ್ಲಿ ಎರಡು ಸಲ ವರದಿ ಮಾಡಿ, ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು ಪಂಚಾಯತ್ ರಾಜ್ ಇಲಾಖೆ ಉಪವಿಭಾಗ ಬೈಲಹೊಂಗಲ ಇವರ ಗಮನಕ್ಕೆ ತಂದು, ಅರ್ಜಿ ಸಲ್ಲಿಸಿ, ನೇರಾ ನೇರ ಭೇಟಿಯಾಗಿ ವಿಷಯ ಪ್ರಸ್ತಾಪ ಮಾಡಿದರೂ ಯಾವುದೇ ರೀತಿ ಸ್ಪಂದನೆ ನೀಡುತ್ತಿಲ್ಲ ಹೀಗಿರುವಾಗ ಮಕ್ಕಳಿಗೆ ಪಾಠ ಹೇಳಲು ಈ ದಾರಿಯಲ್ಲಿ ಬರುವ ಸರ್ಕಾರಿ ಶಿಕ್ಷಕರು ಕೂಡಾ ಭಯದಲ್ಲಿ ಓಡಾಡೋ ಪರಿಸ್ಥಿತಿ ಎದುರಾಗಿದೆ ಆದ್ದರಿಂದ ರಸ್ತೆ ಡಾಂಬರೀಕರಣ ಆದೇಶವಾಗಿ ಬರುವವರೆಗೆ ಬಿದ್ದಿರುವ ಗುಂಡಿಗಳನ್ನು ತಕ್ಷಣ ಮುಚ್ಚಿ ಸರಿಪಡಿಸಬೇಕೆನ್ನುವುದು ಗ್ರಾಮಸ್ಥರ ಕೋರಿಕೆಯಾಗಿದೆ.

ಒಂದು ವೇಳೆ ಇನ್ನು ಮುಂದೆಯೂ ಕಾಲಹರಣ ಮಾಡಿದಲ್ಲಿ ಮುಂದಾಗುವ ಸಮಸ್ಯೆಗಳಿಗೆ ಈ ಇಲಾಖೆಯ ಅಧಿಕಾರಿಗಳೇ ನೇರ ಹೊಣೆ ಎಂದು ಆಕ್ರೋಶವನ್ನೂ ಕೂಡಾ ವ್ಯಕ್ತಪಡಿಸಿದ್ದಾರೆ.

**ವರದಿ ಮಂಜು.ಎಮ್.ಚಿಕ್ಕಣ್ಣವರ**

# ಆದೇಶ ಹೊರಡಿಸಿದರೂ ತೆರವಾಗದ ಸರ್ಕಾರಿ ಆಸ್ತಿಗಳು



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕ ಪಂಚಾಯಿತಿ ವ್ಯಾಪ್ತಿಯ ಬೆಳವಡಿ ಗ್ರಾಮ ಪಂಚಾಯಿತಿಯ 50 ಕ್ಕೂ ಹೆಚ್ಚು ಸರ್ಕಾರಿ ಕಟ್ಟಡ, ಖಾಲಿ ಜಾಗಗಳನ್ನು ಮತ್ತು ಉಡಿಕೇರಿ ರಸ್ತೆಯ ಸರ್ವೆ ನಂಬರ 76/1 ರಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಮೀಸಲಿರಿಸಿದ ಜಾಗೆಯನ್ನು ಖಾಸಗಿ ಬಡಾವಣೆ ಮಾಲಿಕರು ಮೂಲ ವಿನ್ಯಾಸ ನಕ್ಷೆ ತಿರುಚಿ ಮಾರಾಟ ಮಾಡಿ ಸರ್ಕಾರಕ್ಕೆ ಕೊಟ್ಯಾಂತರ ರೂಪಾಯಿ ನಷ್ಟ ಮಾಡಿರುತ್ತಾರೆ ಬೆಳವಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೊಟ್ಯಾಂತರ ರೂಪಾಯಿ ಮೌಲ್ಯದ ಸರ್ಕಾರಿ ಆಸ್ತಿಗಳು ತೆರವಾಗದೆ ಇರುವುದು ಅತೀ ದೊಡ್ಡ ದುರಂತ, ಸರ್ಕಾರದ ಖಾಲಿ ಜಾಗೆಗಳು ಈಗಲೂ ಕಬಳಿಕೆ ಆಗುತ್ತಲೇ ಇವೆ ಇನ್ನು ಮುಂದೆ ಈ ಆಸ್ತಿಗಳು ತೆರವಾಗಿ ಪಂಚಾಯತಿ ವಶಕ್ಕೆ ಪಡೆದುಕೊಳ್ಳುವುದನ್ನು ಬೆಳವಡಿ ಗ್ರಾಮದ ಜನತೆ ನಿರೀಕ್ಷಿಸುತ್ತಿದ್ದಾರೆ.

**ವರದಿ ಮಂಜು.ಎಮ್.ಚಿಕ್ಕಣ್ಣವರ**

# ಪದಾಧಿಕಾರಿಗಳ ಆಯ್ಕೆ



**ಬಾಗಲಕೋಟೆ/ಇಲಕಲ್ಲ:** ಹೆಚ್. ಶಿವರಾಮೇ ಗೌಡರ ಕರ್ನಾಟಕ ರಕ್ಷಣಾ ವೇದಿಕೆಯ ಹೋರಾಟ ಮತ್ತು ಸಿದ್ಧಾಂತಗಳನ್ನು ಮೆಚ್ಚಿ ಬಾಗಲಕೋಟೆ ಜಿಲ್ಲಾಧ್ಯಕ್ಷರಾದ ಬಸವರಾಜ ಧರ್ಮಂತಿ ನೇತೃತ್ವದಲ್ಲಿ ಇಳಕಲ್ಲ ತಾಲೂಕಿನ ಮಹಿಳೆಯರು ಇಳಕಲ್ಲ ನಗರದ ಮಹಾಂತಸ್ವಾಮಿಗಳ ಗದ್ದುಗೆ ಆವರಣದಲ್ಲಿ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ತಾಲ್ಲೂಕು ಮತ್ತು ಮಹಿಳಾ ಘಟಕದ ತಾಲೂಕು ಗೌರವಾಧ್ಯಕ್ಷರಾಗಿ ಕಸ್ತೂರಿ ಬಾಯಿ ಮೆಹರವಾಡೆ, ತಾಲ್ಲೂಕು ಅಧ್ಯಕ್ಷರಾಗಿ ಮಂಜುಳಾ ಅಂಗಡಿ, ಉಪಾಧ್ಯಕ್ಷರಾಗಿ ಶಬಾನಾ ಲಿಂಗಸೂರ, ಪ್ರಧಾನ ಕಾರ್ಯದರ್ಶಿಯಾಗಿ ಮಮ್ತಾಜ್ ಮಕಾನದಾರ, ನಗರ ಮಹಿಳಾ ಘಟಕದ ಗೌರವಾಧ್ಯಕ್ಷರಾಗಿ ಶಂಕ್ರಮ್ಮ ಕೊಪ್ಪರದ, ತಾಲ್ಲೂಕು ಉಪಾಧ್ಯಕ್ಷರಾಗಿ ಸುಮಿತ್ರಾ ಶಿರೂರ, ತಾಲ್ಲೂಕು ಕಾರ್ಯದರ್ಶಿಯಾಗಿ ನೀಲಮ್ಮ ನಾಗಲೀಕರ ಹಾಗೂ ಇನ್ನಿತರ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಸಂಚಾಲಕರಾದ ಗಣೇಶ ನಾಯಕ, ಹುನಗುಂದ ತಾಲ್ಲೂಕು ಅಧ್ಯಕ್ಷರಾದ ಶರಣು ಗಾಣಿಗೇರ, ತಾಲ್ಲೂಕು ಗೌರವಾಧ್ಯಕ್ಷರಾದ ಶ್ರೀನಿವಾಸ ಮಾರಾ, ಇಳಕಲ್ಲ ಚಾಲಕ ಘಟಕದ ನಗರ ಅಧ್ಯಕ್ಷರಾದ ಮಲ್ಲು ಅಂಗಡಿ, ಸೋಹೈಲ್ ಸುತಾರ, ಮಳೇಂದ್ರಗೌಡ ಗೌಡರ, ಭೀಮಶಿ ಬೀಳಗಿ, ಮಹಿಬೂಬ ಅಳ್ಳೊಳ್ಳಿ ಹಾಗೂ ಮುಖಂಡರು, ಮಹಿಳೆಯರು ಉಪಸ್ಥಿತರಿದ್ದರು.

**ವರದಿ ನಿಂಬಯ್ಯ ಕುಲಕರ್ಣಿ**


# ನೂತನ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಸಿದ್ಧಾರ್ಥ ಗೋಯಲ್ ಅವರಿಗೆ ಸ್ವಾಗತಿಸಿದ ಕ.ರ.ವೇ



ಬಾಗಲಕೋಟೆ ಜಿಲ್ಲೆಗೆ ನೂತನ ಪೋಲಿಸ್ ವರಿಷ್ಠಾಧಿಕಾರಿಗಳಾಗಿ ಆಗಮಿಸಿದ ಶ್ರೀ ಸಿದ್ಧಾರ್ಥ ಗೋಯಲ್ ರವರನ್ನು ಹೆಚ್. ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ, ಬಾಗಲಕೋಟೆ ಜಿಲ್ಲಾ ಘಟಕದ ವತಿಯಿಂದ ಕನ್ನಡದ ಶಾಲು ಹೊದಿಸಿ ಹಾಗೂ ಹೂಗುಚ್ಛ ನೀಡಿ ಹೃತ್ಪೂರ್ವಕವಾಗಿ ಸ್ವಾಗತಿಸಲಾಯಿತು.

ಈ ಸಂದರ್ಭದಲ್ಲಿ ಬಿ. ಎಂ. ಪಾಟೀಲ ರಾಜ್ಯ ವಕ್ತಾರರು, ಬಸವರಾಜ ಧರ್ಮಂತಿ ಜಿಲ್ಲಾಧ್ಯಕ್ಷರು , ಪ್ರಶಾಂತ ಭಾವಿಕಟ್ಟಿ ಜಿಲ್ಲಾ ಕಾರ್ಯಾಧ್ಯಕ್ಷರು, ಗಣೇಶ ನಾಯಕ ಜಿಲ್ಲಾ ಪ್ರಧಾನ ಸಂಚಾಲಕ , ಪರಶುರಾಮ ಬುಳ್ಳಾಪುರ ಜಿಲ್ಲಾಧ್ಯಕ್ಷರು ಕಾರ್ಮಿಕ ಘಟಕ, ಸಂತೋಷ ಚಿನಿವಾಲ ಜಿಲ್ಲಾ ಕಾರ್ಯದರ್ಶಿ, ತಿಮ್ಮಣ್ಣ ಕುರುಬರ ಜಿಲ್ಲಾ ಉಪಾಧ್ಯಕ್ಷ ಕಾರ್ಮಿಕ ಘಟಕ, ವಿಷ್ಣು ಬಾರಕೇರ ಜಿಲ್ಲಾಧ್ಯಕ್ಷರು ಚಾಲಕ ಘಟಕ, ಸಾದಿಕ್ ತಾಲೂಕು ಅಧ್ಯಕ್ಷರು, ರವಿ ಅಂಬಿಗೇರ ನಗರ ಅಧ್ಯಕ್ಷ ಚಾಲಕ ಘಟಕ ಕಲೀಮ್ ರೋಣ ಜಿಲ್ಲಾ ಮುಖಂಡರು ಅಬ್ದುಲ್ ಜಿ. ತಾಲೂಕು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ವರದಿ : ನಿಂಬಯ್ಯ ಕುಲಕರ್ಣಿ**




ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಾ ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ)
ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ
ಶ್ರೀ ಡಾ. ಎಂ. ಬಿ. ಸಜ್ಜನ ಅವರೊಂದಿಗೆ ಕರುನಾಡ ಕಂದ.




ಯಾದಗಿರಿ ಜಿಲ್ಲೆಯ ಗುರುಮಠಕಲ್ ಮತ ಕ್ಷೇತ್ರದ
ಶಾಸಕರಾದ ಶ್ರೀ ಯುತ ಶರಣಗೌಡ ಕಂದಕೂರ ಅವರು
" ಕರುನಾಡ ಕಂದ ಪತ್ರಿಕೆ "ಗೆ
ಶುಭ ಕೋರಿದ ಸಂದರ್ಭ.


ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01–08–2025 ಪುಟಗಳು:16

# ನಿಮ್ಮ ಬರಹಕ್ಕೆ ಪುಸ್ತಕಗಳ ಉಡುಗೊರೆ

ಈ ಯುಗದಲ್ಲಿ ಸೋಷಿಯಲ್ ಮೀಡಿಯಾ ಅಂದರೆ ಎಲ್ಲರಿಗೂ ಕ್ರೇಜ್. ದೊಡ್ಡವರೇ ಇರಲಿ ಚಿಕ್ಕವರೇ ಇರಲಿ ಎಲ್ಲರೂ ಸಕ್ರಿಯರಾಗಿದ್ದಾರೆ, ಕೆಲವರಿಗೆ ಜೀವನದ ಒಂದು ಭಾಗವೇ ಆಗಿದೆ. ಕೆಲವರಿಗೆ ಮನರಂಜಿಸಲು, ಹಣ ಸಂಪಾದನೆ ಮಾಡಲು ಇನ್ನೂ ಕೆಲವರಂತೂ ಅದರಿಂದ ತುಂಬಾ ತೊಂದರೆ ಅನುಭವಿಸಿದವರು ಇದ್ದಾರೆ. ಹಾಗೆಯೇ ಕೆಲವರು ಸೋಷಿಯಲ್ ಮೀಡಿಯಾದಿಂದ ಸಮಾಜಕ್ಕೆ ಕೊಡುಗೆಯಾಗಿ ಬಳಸಿಕೊಂಡವರೂ ಇದ್ದಾರೆ.

ಇನ್ಸ್ಟಾಗ್ರಾಮ್ ಒಂದು ಅಮೆರಿಕದ ಸಾಮಾಜಿಕ ಜಾಲತಾಣದ ವೇದಿಕೆಯಾಗಿದೆ. ಇನ್ಸ್ಟಾಗ್ರಾಮ್ ಬಗ್ಗೆ ಯಾಕೆ ಹೇಳುತ್ತಾ ಇದ್ದೇನೆ ಅಂತಾ ಯೋಚಿಸತ್ತಾ ಇದ್ದೀರಾ ಇನ್ಸ್ಟಾಗ್ರಾಮ್ ಅಲ್ಲಿ ಕರ್ನಾಟಕದವರು ಕನ್ನಡದವರು (karnatakadavaru kannadavaru) ಅಂತಾ ಒಂದು ಪೇಜ್ ಇದೆ, ಈ ಪೇಜ್ ಹೆಸರಲ್ಲಿಯೇ ಕರ್ನಾಟಕ, ಕನ್ನಡದ ಮೇಲಿನ ಪ್ರೇಮವೇ ಕಾಣುತ್ತದೆ. ಕನ್ನಡ ಸಾಹಿತ್ಯವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ “ ಕನ್ನಡದವರು ಕರ್ನಾಟಕದವರು “ ಅನ್ನುವ ಹೆಸರಲ್ಲಿ 26 ಜುಲೈ 2018 ಖಾತೆಯನ್ನು ಓಪನ್ ಮಾಡಿ ಬರೆಯುವ ಅನೇಕರರಿಗೆ ವೇದಿಕೆಯಾಗಿ ಮಾಡಿಕೊಟ್ಟು ಅವರ ಬರಹವನ್ನು ಪ್ರಕಟಿಸುತ್ತಾ ಬರಹಗಾರರಿಗೆ ಅನೇಕ ಕವನ ಸ್ಪರ್ಧೆಯನ್ನು ಏರ್ಪಡಿಸಿ ಸ್ಪರ್ಧೆಗಳಲ್ಲಿ ವಿಜೇತರಾದವರಿಗೂ ತುಂಬಾ ಲೈಕ್ಸ್ ಪಡೆದ ಬರಹಗಾರರಿಗೂ, ಉತ್ತಮ ಬರಹಗಾರರಿಗೂ ಬಹುಮಾನ ರೂಪವಾಗಿ ಪುಸ್ತಕಗಳನ್ನು ನೀಡುತ್ತಿದ್ದಾರೆ.

ಚಾಣಕ್ಯರ ಪ್ರಕಾರ, ದಾನವೆಂದರೆ ಕೇವಲ ಹಣವನ್ನು ಸಹಾಯ ರೂಪದಲ್ಲಿ ನೀಡುವುದು ಮಾತ್ರವಲ್ಲ, ದಾನದ ನಿಜವಾದ ಅರ್ಥವೆಂದರೆ ಸೇವೆಗೆ ತನ್ನ ಶಕ್ತಿ, ಸಮಯ ಮತ್ತು ಸಂಪನ್ಮೂಲಗಳನ್ನು ನಿಸ್ವಾರ್ಥವಾಗಿ ಕೊಡುಗೆ ನೀಡುವುದಾಗಿದೆ. ದಾನ ಮಾಡುವುದರಿಂದ ಆತ್ಮದ




ಶುದ್ಧೀಕರಣ ಮತ್ತು ಸಂಪತ್ತಿನ ಜೊತೆಗೆ ಸಂತೋಷವನ್ನು ಪಡೆಯಬಹುದು ಎಂದು ಚಾಣಕ್ಯರು ಹೇಳಿದ್ದಾರೆ.

ಅನ್ನದಾನ, ವಿದ್ಯಾದಾನದ ಹಾಗೆಯೇ ಪುಸ್ತಕ ದಾನವೂ ಶ್ರೇಷ್ಠವಾದ ದಾನ. ಕೆಲವರು ಚಿಕ್ಕ ಸಹಾಯ ಮಾಡಿದರೂ ಎಲ್ಲರಿಗೂ ಹೇಳುತ್ತಾರೆ ಯಾರಿಗೂ ಹೇಳದೇ ಯಾರಿಂದಲೂ ಹಣವನ್ನು ಪಡೆಯದೆ “ ಕರ್ನಾಟಕದವರು ಕನ್ನಡದವರು “ ಪೇಜ್ ನ ಮೂಲಕ ಬರಹಗಾರರ ಬರಹವನ್ನು ಪ್ರಕಟಿಸಿ ಪುಸ್ತಕದ ಉಡುಗೊರೆ ನೀಡುತ್ತಿರುವುದು ಶ್ಲಾಘನೀಯ, ಪುಸ್ತಕ ಪಡೆದುಕೊಂಡ ಬರಹಗಾರರು ಅಂಜಲಿ ಶ್ರೀನಿವಾಸ, ಪಲ್ಲವಿ ಚೆನ್ನಬಸಪ್ಪ , ಪೂರ್ಣಿಮಾ, ನವೀನ್ ಹೂಗಾರ್, ಧನು ಪೂಜಾರಿ ,ಹರ್ಷ ಹೀಗೆ ಬರೀತಾ ಹೋದರೆ ಪಟ್ಟಿ ದೊಡ್ಡದಾಗುತ್ತಾ ಹೋಗುತ್ತದೆ ಅಂತೂ ತುಂಬಾ ಬರಹಗಾರರು ಪುಸ್ತಕಗಳನ್ನು ಪಡೆದುಕೊಂಡಿದ್ದಾರೆ. ಪುಸ್ತಕಗಳಿಲ್ಲದ ಕೋಣೆ ಆತ್ಮವಿಲ್ಲದ ಶರೀರದಂತೆ ಪುಸ್ತಕದ ಮೌಲ್ಯ ಮತ್ತು ಸಾರ್ಥಕತೆಯನ್ನು ತಿಳಿಸಿಕೊಡುವಲ್ಲಿ ಹಾಗೆಯೇ ಜೀವನದ ಬಗ್ಗೆ ಭರವಸೆ ಮೂಡಿಸುವಲ್ಲಿ ಪುಸ್ತಕದ ಪಾತ್ರ ದೊಡ್ಡದು. ಪುಸ್ತಕ ನಮ್ಮ ಜ್ಞಾನ ವಿಕಾಸಕ್ಕೆ ದಾರಿದೀಪವಾಗಿದೆ. ಪುಸ್ತಕಗಳು ನಮ್ಮ ಬದುಕು ಬೆಳಗುತ್ತದೆ. ಹಾಗೆಯೇ ಜ್ಞಾನವನ್ನು ಹೆಚ್ಚಿಸುತ್ತದೆ. ಪುಸ್ತಕಗಳು ಮನುಷ್ಯನಿಗೆ ಜ್ಞಾನದ ಜೊತೆ ವ್ಯಕ್ತಿತ್ವವನ್ನು ಅರಳಿಸುತ್ತದೆ.

ಯೋಚನಾ ಶಕ್ತಿ ಕಲಾತ್ಮಕತೆ ಮನಸ್ಸಿನ ಭಾವನೆಗಳು ವ್ಯಕ್ತಿತ್ವ ಹಾಗೂ ಸಂಸ್ಕಾರಗಳನ್ನು ಒರೆಗೆ ಹಚ್ಚಿ ಅವನನ್ನು ಸುಸಂಸ್ಕೃತ ಹಾಗೂ ಸಮಾಜಕ್ಕೆ ಯೋಗ್ಯ ವ್ಯಕ್ತಿಯನ್ನಾಗಿ ರೂಪಿಸುತ್ತದೆ. ಬರಹಗಾರರ ಬರಹವನ್ನು ಪ್ರಕಟಿಸಿ ಪ್ರೋತ್ಸಾಹಿಸುವುದು ಮಾತ್ರವಲ್ಲದೇ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸುತ್ತಿದ್ದಾರೆ ಇವರು ಮಾಡಿದ ಸಣ್ಣ ಸೇವೆ ಮರೆಯಾದರೂ ಎಂದೋ ಒಂದು ದಿನ ಯಾರೋ ಒಬ್ಬರ ಬದುಕಿನಲ್ಲಿ ದೊಡ್ಡ ಬದಲಾವಣೆ ತರಬಹುದು.

ಒಬ್ಬ ಬರಹಗಾರರಿಗೆ ಮತ್ತೊಬ್ಬರನ್ನು ಬೆಳೆಸಬೇಕೆಂಬ ವಿಶಾಲ ಮನಸ್ಸು ಎಲ್ಲರಲ್ಲೂ ಬರೋದಿಲ್ಲ ಮೊದಲು ಶುರು ಮಾಡಿದ ಕೂಡಲೇ ಕೊನೆಗೊಳಿಸುವವರು ಇದ್ದಾರೆ ಇವರು ಸತತವಾಗಿ ಏಳು ವರ್ಷಗಳಾದರೂ ಇನ್ನೂ ಈ ಕಾರ್ಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ನೀವು ನೀಡುವ ಕೊಡುಗೆ ಕನ್ನಡ ಸಾಹಿತ್ಯಕ್ಕೆ ಅಧ್ಭುತ ಬರಹಗಾರನ್ನು ತರಲಿ ಇದರ ಸದುಪಯೋಗವನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪಡೆಯಲಿ ನಿಮ್ಮ ಸೇವೆ ಹೀಗೆ ಮುಂದುವರಿಯಲಿ...

**– ರೇಷ್ಮಾ ಶೆಟ್ಟಿ, ಕುಂದಾಪುರ**

# 18ನೇ ವರ್ಷ 18 ದಿನಗಳ ಕಾಲ ನಡೆಯಲಿದೆ ಹಿಂದೂ ಮಹಾಗಣಪತಿ ಉತ್ಸವ

## ದಕ್ಷಿಣ ಭಾರತದ ಅತಿ ಹೆಚ್ಚು ಜನ ಸೇರುವ ಖ್ಯಾತಿ ಪಡೆದಿರುವ ಚಿತ್ರದುರ್ಗ ಹಿಂದೂ ಮಹಾ ಗಣಪತಿ ಮಹೋತ್ಸವ.

**ವಿಶೇಷ ವರದಿ : ಎಂ. ಚಂದ್ರಶೇಖರ ಚಾರಿ**

**ಚಿತ್ರದುರ್ಗ** : ನಗರದಲ್ಲಿ ಈ ಬಾರಿಯ ಹಿಂದೂ ಗಣಪತಿ ಹಬ್ಬ 18ನೇ ವರ್ಷಕ್ಕೆ ಕಾಲಿಡುತ್ತಿದೆ. ಆಗಸ್ಟ್ 27ರಂದು ಗಣೇಶ ಪ್ರತಿಷ್ಠಾಪನೆಯಾಗಿ 18 ದಿವಸಗಳ ಕಾಲ ಗಣೇಶೋತ್ಸವ ನಡೆಯಲಿದ್ದು ಸೆಪ್ಟೆಂಬರ್ 13ರಂದು ಶೋಭಾ ಯಾತ್ರೆ ನಡೆಯಲಿದೆ.

ಈ ಬಾರಿ ಹಿಂದೂ ಮಹಾ ಗಣಪತಿ ಉತ್ಸವ ಸಮಿತಿ ಅಧ್ಯಕ್ಷರಾಗಿ ಹೋಟೆಲ್ ಉದ್ಯಮಿ ಶರಣ್ ಕುಮಾರ್ ಆಯ್ಕೆಯಾಗಿದ್ದಾರೆ. ವಿಶ್ವ ಹಿಂದೂ ಪರಿಷತ್ ಇಡೀ ಗಣೇಶೋತ್ಸವದ ಜವಾಬ್ದಾರಿ ಹೊತ್ತಿದೆ ಎಂದು ವಿಶ್ವ ಹಿಂದೂ ಪರಿಷತ್ತಿನ ಪ್ರಾಂತ್ಯ ಕಾರ್ಯದರ್ಶಿ ಶರಣ್ ಪಂಪವಲ್ ತಿಳಿಸಿ 1863 ರಲ್ಲಿ ಬಾಲಗಂಗಾಧರ ತಿಲಕ್ ಅವರು ಮೊದಲು ಗಣೇಶ ಉತ್ಸವ ಪ್ರಾರಂಭ ಮಾಡಿದರು. ಅಂದಿನಿಂದ ಇಂದಿನವರೆಗೂ ಗಣೇಶ ಹಬ್ಬವನ್ನು ದೇಶದ ಪ್ರತಿಯೊಂದು ಹಳ್ಳಿಯಲ್ಲಿಯೂ ಸಂಭ್ರಮಿಸಲಾಗುತ್ತಿದೆ ಎಂದರು.

ಚಿತ್ರದುರ್ಗ ಹಿಂದೂ ಮಹಾಗಣಪತಿ ಉತ್ಸವವು 2007ರಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ನೇತೃತ್ವದಲ್ಲಿ ಆರಂಭವಾಯಿತು. 17 ವರ್ಷಗಳಿಂದ ವಿಜೃಂಭಣೆಯಿಂದ ಆಚರಿಸಿಕೊಂಡು ಬಂದಿದ್ದೇವೆ. ಒಂದು ತಿಂಗಳು ನಡೆಯುವ ಈ ಉತ್ಸವ ಇಡೀ ದೇಶ್ಯಾದ್ಯಂತ ಪ್ರಸಿದ್ಧಿ ಪಡೆದಿದೆ ಎಂದು ತಿಳಿಸಿದರು.

ಉತ್ಸವಕ್ಕೆ ಕೇವಲ ಚಿತ್ರದುರ್ಗದ ಜನತೆಗೆ ಅಷ್ಟೇ ಅಲ್ಲದೆ ದೇಶ ವಿದೇಶಗಳಿಂದ ಕಾರ್ಯಕರ್ತರು ಭಾಗವಹಿಸುತ್ತಾರೆ. ಶೋಭಾ ಯಾತ್ರೆಯು ದಕ್ಷಿಣ ಭಾರತದಲ್ಲಿ ಅತೀ ಹೆಚ್ಚು ಜನ ಸೇರುವ ಖ್ಯಾತಿ ಪಡೆದಿದೆ, ಚಿತ್ರದುರ್ಗದಲ್ಲಿ ನಡೆಯುವಂತಹ ಹಿಂದೂ ಮಹಾ ಗಣಪತಿ ಸಂಘ ಹಾಗೂ ವಿಶ್ವ ಹಿಂದೂ ಪರಿಷತ್ತಿಗೆ ಹೆಚ್ಚು ಬಲ ತಂದಂತಹ ಕಾರ್ಯಕ್ರಮವಾಗಿದೆ ನಾವು ದೇಶದ ವಿವಿಧಡೆಗೆ ನಡೆಯುವಂತಹ ಬೈಟೆಕ್ ಗಳಲ್ಲಿ ಪ್ರಸ್ತಾಪ ಮಾಡುತ್ತೇವೆ ಎಂದು ತಿಳಿಸಿದರು. ಜಿಲ್ಲಾಧ್ಯಕ್ಷ ಷಡಕ್ಷರಯ್ಯ,



ದಕ್ಷಿಣ ಪ್ರಾಂತ್ಯ ಉಪಾಧ್ಯಕ್ಷ ಡಾ. ಮಂಜುನಾಥ್, ವಿಭಾಗದ ಕಾರ್ಯದರ್ಶಿ ಚಂದ್ರಶೇಖರ್, ಚಿತ್ರದುರ್ಗ ಕಾರ್ಯದರ್ಶಿ ಕೇಶವ ಉಪಸ್ಥಿತರಿದ್ದರು.

**ಲೆಕ್ಕಪತ್ರ ಬಹಿರಂಗ ಇಲ್ಲ :**

ಉತ್ಸವ ಮುಗಿದ ನಂತರ ನಡೆಯುವಂತ ಸಭೆಯಲ್ಲಿ ಸಮಿತಿಯು ಲೆಕ್ಕಪತ್ರವನ್ನು ನೀಡುತ್ತಾರೆ. ಲೆಕ್ಕ ಪತ್ರವನ್ನು ಬಹಿರಂಗಪಡಿಸುವ ಪದ್ಧತಿ ಪರಿಷತ್ತಿನಲ್ಲಿ ಇಲ್ಲ. ಯಾರಿಗಾದರೂ ಮಾಹಿತಿ ಬೇಕಾದರೆ ಪರಿಷತ್ತನ್ನು ಸಂಪರ್ಕಿಸಿದರೆ ಒದಗಿಸುತ್ತೇವೆ ಎಂದು ಶರಣ ಪಂಪವಲ್ ತಿಳಿಸಿದರು.

ನಮ್ಮ ಸಮಿತಿ ಮೇಲೆ ಹಿಂದಿನ ವರ್ಷ ಆರೋಪಗಳು ಬಂದಿರುವುದು ನಿಜ. ಕಳೆದ ಬಾರಿಯ ಲೆಕ್ಕ ಪತ್ರವನ್ನು ಮಂಡಿಸಿದಾಗ ನಾನೂ ಇದ್ದೆ. ಅದರ ಬಗ್ಗೆ ಪರಿಶೀಲನೆ ಸಹ ಮಾಡಿದ್ದೇವೆ. ಯಾವ ಅವ್ಯವಹಾರ ಕಂಡು ಬಂದಿಲ್ಲ ಅವರ ಆರೋಪಗಳು ಕೇವಲ ಸುಳ್ಳು ಎಂದರು.

ಕರುನಾಡ ಕಂದ

ಸಂಪುಟ 04 । ಸಂಚಿಕೆ 18

ದಿನಾಂಕ: 01–08–2025 ಪುಟಗಳು:16

# ಮನುಷ್ಯನಿಗೆ ಧರ್ಮದ ಮಾರ್ಗ ಬಹಳ ಮುಖ್ಯ: ಡಾ.ಅಭಿನವ ಶ್ರೀ



**ಬೀದರ್/ಬಸವಕಲ್ಯಾಣ** : ಮನುಷ್ಯನೇ ಒಂದು ವೇಳೆ ಧರ್ಮಾಚರಣೆಯನ್ನು ಮಾಡದೆ ಹೋದರೆ ಅವನು ಪಶುಗಳಿಗೆ ಸಮಾನನಾಗುತ್ತಾನೆ ಎಂದು ನಗರದ ಸಂಸ್ಥಾನ ಗವಿಮಠದ ಪೂಜ್ಯಶ್ರೀ ಷ. ಬ್ರ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಪವಿತ್ರ ಶ್ರಾವಣ ಮಾಸ ನಿಮಿತ್ಯ ಪ್ರತಿ ವರ್ಷದಂತೆ ನಗರದ ಇತಿಹಾಸ ಪ್ರಸಿದ್ಧ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ವಿಶೇಷ ಉಪನ್ಯಾಸ ಮಾಲೆಯ ಮೊದಲನೇ ಸೋಮವಾರದಂದು ನಡೆದ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಶ್ರೀಗಳು ಧರ್ಮಾಚರಣೆಯನ್ನು ಮಾಡದಿರುವ ಮನುಷ್ಯನು ಆಕಾರದಲ್ಲಿ ಮನುಷ್ಯನಂತೆ ತೋರುತ್ತಿದ್ದರೂ ಆತನನ್ನು ಪಶುವೆಂದೇ ಭಾವಿಸಬೇಕು, ಮನುಷ್ಯನು ಇಹಲೋಕ ಯಾತ್ರೆಯನ್ನು ಮುಗಿಸಿ ಪರಲೋಕಕ್ಕೆ ತೆರಳುವಾಗ ಅವನ ಜೊತೆಗೆ ಹೋಗುವಂತದ್ದೆಂದರೆ ಅವನು ಸಂಪಾದಿಸಿದ ಧರ್ಮವೊಂದೇ ಎಂದು ಆಶೀರ್ವಚನ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಕೃಷಿ ಅಧಿಕಾರಿಗಳಾದ ಶ್ರೀ ಬಸವಂತಪ್ಪ ಲವಾರೆ ಅವರು ಮಾತನಾಡುತ್ತಾ ಕುಟುಂಬದಲ್ಲಿ ತಂದೆ ತಾಯಿಗಳ ಪಾತ್ರ, ಗುರುವಿನ ಮಹತ್ವ ಇಲ್ಲದಂತೆ ಆಗಿದೆ ಇದಕ್ಕೆ ತಂದೆ–ತಾಯಿಯರಲ್ಲಿ ಸಂಸ್ಕಾರವಿಲ್ಲದೆ ಅನೇಕ ಕುಟುಂಬಗಳು ವಾಮ ಮಾರ್ಗಕ್ಕೆ ಹೋಗುತ್ತಿವೆ ಎಂದು ದುಃಖ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಯಾಗಿ ಶ್ರೀ ಓಂಕಾರ್ ಪಾಟೀಲ ಗಾರಂಪಲ್ಲಿ ಭಾಗವಹಿಸಿದ್ದರು. ಅತಿಥಿಯಾಗಿ ಸತೀಶ ನೀಲಮಠ ಬಸವಕಲ್ಯಾಣ ವೇದಿಕೆ ಮೇಲೆ ಉಪಸ್ಥಿತರಿದ್ದರು. ಶಿಕ್ಷಕ ಮಲ್ಲಿಕಾರ್ಜುನ ಅಲುಗುಡೆ ಸಂಚಾಲನೆ ಮಾಡಿದರು. ವಿವೇಕ ವಸ್ತ್ರದ ಪ್ರಾರ್ಥನಾ ಗೀತೆ ಹಾಡಿದರು. ಶ್ರೀಮತಿ ಕಲ್ಪನಾ ದಯಾನಂದ ಶೀಲವಂತ ಸ್ವಾಗತಿಸಿದರು. ಯದಲಾಪುರ ಸದ್ಭಕ್ತರಿಂದ ಭಜನೆ ಸೇವೆ ನಡೆಯಿತು.

ಈ ಸಂದರ್ಭದಲ್ಲಿ ಶ್ರೀಮತಿ ವಿಮಲಾಬಾಯಿ ಮಾಣಿಕಪ್ಪ ಬಿರಾದಾರ, ಶ್ರೀಮತಿ ಸವಿತಾ ರಮೇಶ ಸ್ವಾಮಿ, ರಾಕೇಶ ಪುರವಂತ, ವಿಜಯಕುಮಾರ ಪಾಟೀಲ ಸುಂಠಾನ, ಬಾಬುರಾವ ಚಳಕಾಪುರೆ, ಶ್ರೀಮತಿ ಸರಸ್ವತಿ ಬೆಂಬಳ್ಗೆ, ಸಂತೋಷ ಬಿರಾದಾರ, ರುದ್ರಮುನಿ ಹಿರೇಮಠ, ಸಾಗರ ಮಾಲಗರ, ವೀರಶೆಟ್ಟಿ ಪಾಟೀಲ, ಗೊವಿಂದ ರೆಡ್ಡಿ ಕೊತಂಪಲ್ಲಿ, ವಿಠ್ಠಲ ರಾಯಪ್ಪನೋರ, ರಮೇಶ ತೊಗರಖೇಡೆ ಇನ್ನಿತರರು ಉಪಸ್ಥಿತರಿದ್ದರು.

**ವರದಿ : ಶ್ರೀನಿವಾಸ ಬಿರಾದಾರ**

## ವಿಶೇಷ ಸನ್ಮಾನ :

**ಭಾರತೀಯ ಸೈನ್ಯದಲ್ಲಿ ಸೇವೆಯನ್ನು ಸಲ್ಲಿಸಿ ಆಪರೇಷನ್ ಸಿಂಧೂರ್ ಯುದ್ಧದಲ್ಲಿ ಭಾಗವಹಿಸಿ ಸಾಹಸ ಮೆರೆದು ಪರಮ ಪೂಜ್ಯರಿಂದ ವಿಶೇಷ ಸನ್ಮಾನ ಸ್ವೀಕರಿಸಿ ಮಾತನಾಡಿದ ವೀರ ಯೋಧ ಶ್ರೀ ಮಲ್ಲಪ್ಪ ಬರಗಾಲೆ ಯದಲಾಪೂರ ಮಾತನಾಡುತ್ತಾ ಪೂಜ್ಯರ ಸನ್ಮಾನದಿಂದ ನನಗೆ ದೇಶದ ಸೇವೆಯನ್ನು ಮಾಡಲಿಕ್ಕೆ ಮತ್ತಷ್ಟು ಶಕ್ತಿ ಬಂದಿದೆ ಎಂದು ಸಂತಸದಿಂದ ನುಡಿದರು.**

# ತಾಲೂಕು ಮಟ್ಟದ ಬಣಜಿಗ ಸಮಾವೇಶ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟನೆ

**ಬಾಗಲಕೋಟೆ/ ಬಾದಾಮಿ:** ಮುಂದಿನ ಅಸ್ತಿತ್ವ ಹಾಗೂ ಅಧಿಕಾರಕ್ಕಾಗಿ ಎಲ್ಲರೂ ಬಣಜಿಗ ಸಮಾಜದ ಸಂಘಟನೆ ಮಾಡುವ ಅಗತ್ಯವಿದೆ ಎಂದು ಮಾಜಿ ಶಾಸಕ ಎಂ. ಕೆ. ಪಟ್ಟಣಶೆಟ್ಟಿ ಹೇಳಿದರು.

ಅವರು ಇತ್ತೀಚಿಗೆ ನಗರದ ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಬಸವಭವನದಲ್ಲಿ ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ (ರಿ.) ದ ತಾಲೂಕಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ " ಬಣಜಿಗ ಸಮಾಜದ ತಾಲೂಕಾ ಬೃಹತ್ ಸಮಾವೇಶ ಹಾಗೂ ನಗರ ಘಟಕ ಉದ್ಘಾಟನಾ ಸಮಾರಂಭ ಪ್ರತಿಭಾ ಪುರಸ್ಕಾರ ಹಾಗೂ ಗಣ್ಯರಿಗೆ ಸನ್ಮಾನ ಕಾರ್ಯಕ್ರಮ" ವನ್ನು ಉದ್ದೇಶಿಸಿ ಮಾತನಾಡಿ ಸಮಾಜ ಬಂದಾಗ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಬಣಜಿಗ ಸಮಾಜದ ಬಾಂಧವರು ಮೂಲಕ ಉದ್ಯೋಗದ ಜೊತೆಗೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಐಎಎಸ್, ಐಪಿಎಸ್, ಕೆಎಎಸ್ ಹುದ್ದೆಗೆ ಪ್ರಯತ್ನ ಮಾಡಿಸಬೇಕು, ಮುಂಬರುವ ಜಿ. ಪಂ, ತಾ. ಪಂ. ಚುನಾವಣೆಯಲ್ಲಿ ಸಮಾಜ ಬಾಂಧವರು ಸ್ಪರ್ಧೆ ಮಾಡಿ ಅಧಿಕಾರ ಪಡೆಯಬೇಕು ಎಂದು ಸಲಹೆ ನೀಡಿದರು.

ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಚೇರಮನ್ ಎ. ಸಿ. ಪಟ್ಟಣದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ಇಂದು ಜಾತಿಗೊಂದು ಸಂಘಟನೆ ನಡೆಯುತ್ತಿದೆ. ಇದು ಬಹಳ ಬೇಸರ ತಂದಿದೆ. ಇಂದು ಹಿರಿಯ ಮಾರ್ಗದರ್ಶನದಂತೆ ಎಲ್ಲರೂ ಸಂಘಟಿತರಾಗಿ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪೂರ ಮಾತನಾಡಿ ಲಿಂಗಾಯತ ಸಮಾಜದಲ್ಲಿಯೇ ಬಣಜಿಗ ಶ್ರೇಷ್ಟವಾಗಿದ್ದು ಎಲ್ಲರೂ ಸಂಸ್ಕಾರದ ಜೀವನ, ಸೌಹಾರ್ದತೆ, ಅನ್ಯ ವರ್ಗದವರೊಡನೆ ಉತ್ತಮ ಸಂಬಂಧದೊಂದಿಗೆ ಎಲ್ಲರೂ ಸಂಘಟಿತರಾಗಬೇಕಿದೆ ವೀರಶೈವ ಲಿಂಗಾಯತ ಸಮಾಜ ರಾಜ್ಯ, ದೇಶ ಆಳುವ ಯೋಗ್ಯತೆ ಇದೆ ಆದರೆ ಒಗ್ಗಟ್ಟಿನ ಕೊರತೆ ಇದೆ ಎಂದು ಹೇಳಿದರು.



ಶ್ರೀ ರಾಮಾರೂಢ ಮಠ, ಶಿರೋಳ ಇವರು ಸಾನಿಧ್ಯ ವಹಿಸಿ ಮಾತನಾಡಿದರು. ತಾಲೂಕಾ ಬಣಜಿಗ ಸಮಾಜದ ಅಧ್ಯಕ್ಷ ಡಾ. ಅವಿನಾಶ ಜೆ. ಮಮದಾಪೂರ ಅಧ್ಯಕ್ಷತೆ ವಹಿಸಿ ಮಾತನಾಡಿ ಬಣಜಿಗ ಸಮಾಜಕ್ಕೆ ಶಿಕ್ಷಣಕ್ಕಾಗಿ 2ಎ ಹಾಗೂ ನೌಕರಿಗಾಗಿ 3ಎ ಮೀಸಲಾತಿ ಇತ್ತು. ಏಪ್ರಿಲ್ 2025 ರಲ್ಲಿ ಶಿಕ್ಷಣಕ್ಕಾಗಿ 2ಎ ಮೀಸಲಾತಿ ಅಮಾನ್ಯ ಮಾಡಿದೆ. ಇದಕ್ಕಾಗಿ ಎಲ್ಲರೂ ಅಸ್ತಿತ್ವ ಹಾಗೂ ಮುಂದಿನ ಅಧಿಕಾರಕ್ಕಾಗಿ ಎಲ್ಲರೂ ಸಂಘಟಿತರಾಗಿ ಹೋರಾಟ ಮಾಡಬೇಕಾಗಿದೆ ಎಂದರು ಹೇಳಿದರು. ಸಂಸ್ಥೆಯ ನಿರ್ದೇಶಕ ಜಯದೇವ ಎಸ್. ಮಮದಾಪೂರ ಮಾತನಾಡಿದರು. ವೇದಿಕೆಯ ಮೇಲೆ ತಾಲೂಕಾ ಬಣಜಿಗ ಸಮಾಜದ ಗೌರವಾಧ್ಯಕ್ಷ ಸಿದ್ದಣ್ಣ ಆರ್. ಟೆಂಗಿನಕಾಯಿ, ಕೆರೂರ ಘಟಕದ ಬಣಜಿಗ ಸಮಾಜದ ಅಧ್ಯಕ್ಷ ಚನ್ನಮಲ್ಲಪ್ಪ ಎಂ. ಘಟ್ಟದ ಹಾಜರಿದ್ದರು.

ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ರೈತರಿಗೆ, ಸಾಧನೆ ಮಾಡಿದ ಗಣ್ಯರಿಗೆ ಸನ್ಮಾನಿಸಿ ಗೌರವಿಸಲಾಯಿತು. ರಾಚಣ್ಣ ಪಟ್ಟಣದ ಸ್ವಾಗತಿಸಿದರು. ಬಿ.ಸಿ.ಪ್ಯಾಟಿ, ಎಸ್.ಕೆ.ಜವಳಗದ್ದಿ ಕಾರ್ಯಕ್ರಮವನ್ನು ನಿರೂಪಿಸಿದರು. ವಿ.ಎಸ್.ಶೆಟ್ಟರ ವಂದಿಸಿದರು. ಕಾರ್ಯಕ್ರಮದಲ್ಲಿ ತಾಲೂಕಿನ ವಿವಿಧ ಭಾಗಗಳಿಂದ ಸಹಸ್ರಾರು ಬಣಜಿಗ ಸಮಾಜದ ಮುಖಂಡರು, ಯುವಕರು, ಮಹಿಳೆಯರು ಭಾಗವಹಿಸಿದ್ದರು.

**ವರದಿ : ನಿಂಬಯ್ಯ ಕುಲಕರ್ಣಿ**

## ತಾಲೂಕು ವೈದ್ಯಾಧಿಕಾರಿಗಳಿಗೆ ಶ್ರೀಗಳಿಂದ ವಿಶೇಷ ಸನ್ಮಾನ

**ಬೀದರ್/ ಬಸವಕಲ್ಯಾಣ** : ಶ್ರಾವಣ ಮಾಸದ ಅಂಗವಾಗಿ ವಿಶೇಷ ಉಪನ್ಯಾಸ ಮಾಲೆ ಉದ್ಘಾಟನಾ ಸಮಾರಂಭದಲ್ಲಿ ಡಾ. ಯುವರಾಜ ಮಾಣಿಕಪ್ಪ ಬಿರಾದಾರ ತಾಲೂಕಾ ವೈದ್ಯಾಧಿಕಾರಿಗಳಾಗಿ ನೇಮಕಗೊಂಡಿರುವ ಪ್ರಯುಕ್ತ ಪೂಜ್ಯ ಷ.ಬ್ರ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಗವಿಮಠದಲ್ಲಿ ವಿಶೇಷ ಸನ್ಮಾನ ಮಾಡಲಾಯಿತು.

**ವರದಿ : ಶ್ರೀನಿವಾಸ ಬಿರಾದಾರ**





ಕರುನಾಡ ಕಂದ
ಸಂಪುಟ 04 | ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

## ಗವಿಮಠದಲ್ಲಿ ಶ್ರಾವಣ ಉದ್ಘಾಟನೆ

# "ಶ್ರಾವಣ ಶ್ರೇಷ್ಠ ಮಾಸ" : ಡಾ.ಅಭಿನವ ಶ್ರೀ



**ಬೀದರ/ ಬಸವಕಲ್ಯಾಣ :** ಹನ್ನೆರಡು ಮಾಸಗಳಲ್ಲಿ ಶ್ರಾವಣ ಮಾಸ ಶ್ರೇಷ್ಠ ಹಾಗೂ ಪವಿತ್ರ ಮಾಸ ಎಂದು ನಗರದ ಸಂಸ್ಥಾನ ಗವಿಮಠದ ಪೂಜ್ಯಶ್ರೀ ಷ. ಬ್ರ. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಪವಿತ್ರ ಶ್ರಾವಣ ಮಾಸ ನಿಮಿತ್ಯ ಪ್ರತಿ ವರ್ಷದಂತೆ ನಗರದ ಇತಿಹಾಸ ಪ್ರಸಿದ್ಧ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ವತಿಯಿಂದ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆಯ ಉದ್ಘಾಟನೆ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಶ್ರೀಗಳು ಶ್ರವಣ ಎಂದರೆ ಕೇಳುವುದು, ಅಂದರೆ ದೇವರ ನಾಮಸ್ಮರಣೆಯನ್ನು ಕೇಳುವ ಶ್ರೇಷ್ಠ ಹಾಗೂ ಪವಿತ್ರ ಮಾಸವೇ ಶ್ರಾವಣ ಮಾಸ ಎಂದು ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಹಾಗೂ ಶ್ರೀ ಬಸವಾದಿ ಶಿವಶರಣರು ಹೇಳಿದ್ದನ್ನು ನಾವು ನೆನಪಿಟ್ಟುಕೊಂಡು ಪಾಲಿಸಬೇಕು, ಶಿವಶರಣರು ನುಡಿದಂತೆ ನಡೆದರು. ಭಕ್ತರ ಧನ ಸೇವೆಯಿಂದ ಗವಿಮಠದ ಅಭಿವೃದ್ಧಿ ಮಾಡಿದ್ದೇವೆ. ಅಲ್ಲದೆ ಇವತ್ತಿನ ಸಮಾರಂಭದ ಮುಖ್ಯ ಅತಿಥಿಗಳಾಗಿ ವಿಶೇಷ ಸನ್ಮಾನಕ್ಕೆ ಪಾತ್ರರಾದ ನಮ್ಮ ಒಬ್ಬ ಪರಮ ಭಕ್ತರಾದ ಡಾ ಟಟ ಯುವರಾಜ ಮಾಣಿಕಪ್ಪ ಬಿರಾದಾರ ಅವರು ಶ್ರದ್ಧೆಯಿಂದ ವೈದ್ಯಕೀಯ ಅಧ್ಯಯನ ಮಾಡಿ, ವೈದ್ಯರಾಗಿ ಸೇವೆಗೈದು ಇಂದು ಬಸವಕಲ್ಯಾಣ ತಾಲೂಕಾ ವೈದ್ಯಾಧಿಕಾರಿಯಾಗಿ ಉನ್ನತ ಮಟ್ಟಕ್ಕೆ ಏರಿದ್ದು ಒಂದು ಸಾಧನೆ. ಅವರ ಕುಟುಂಬದ ವಿಶೇಷ ಸೇವೆ ನಮ್ಮ ಗವಿಮಠಕ್ಕೆ ನಿರಂತರವಾಗಿದೆ ಎಂದು ಸಂತಸ ವ್ಯಕ್ತಪಡಿಸಿ ಅವರನ್ನು ವಿಶೇಷ ಸನ್ಮಾನಗೈದು, ಆಶೀರ್ವದಿಸಿ, ಶುಭ ಕೋರಿದರು.

ಹಾಗೆಯೇ ಅತಿಥಿಗಳಾಗಿ ಪಾಲ್ಗೊಂಡಿದ್ದ ನಗರದ ಬಸವೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಹಾಗೂ ಕ. ಸಾ. ಪ ತಾಲೂಕಾ ಅಧ್ಯಕ್ಷ ಡಾ. ರುದ್ರಮಣಿ ಮಠಪತಿ ಅವರ ಕನ್ನಡ ಸೇವೆ ಹಾಗೂ ನಗರದ ಪಂಚಾಯತ ರಾಜ್ ಪದವಿ ಕಾಲೇಜಿನ ಅಧ್ಯಕ್ಷ ಶ್ರೀ ಸಿದ್ಧಾರ್ಥ ಭಾವಿದೊಡ್ಡಿ ಅವರ ಶಿಕ್ಷಣ ಸೇವೆ ಹೀಗೆ ಮುಂದುವರಿಯಲಿ ಎಂದು ಆಶೀರ್ವದಿಸಿದರು.

ವಿಶೇಷ ಸನ್ಮಾನ ಸ್ವೀಕರಿಸಿದ ಬಸವಕಲ್ಯಾಣ ತಾಲೂಕಾ ವೈದ್ಯಾಧಿಕಾರಿ ಡಾ. ಯುವರಾಜ ಮಾಣಿಕಪ್ಪ ಬಿರಾದಾರ ಅವರು ಪೂಜ್ಯ ಅಭಿನವ ಗುರುಗಳನ್ನು ಚಿಕ್ಕವರಿದ್ದಾಗಿನಿಂದ ಹತ್ತಿರದಿಂದ ಬಲ್ಲವರಾಗಿದ್ದು ಚಿಕ್ಕ ವಯಸ್ಸಿನಲ್ಲಿಯೇ ಅವರು ನಮ್ಮ ಈ ಗವಿಮಠಕ್ಕೆ ಗುರುಗಳಾಗಿ ಬಂದು ಕೆಲವೇ ವರ್ಷಗಳಲ್ಲಿ ನಮ್ಮ ಈ ಗವಿಮಠವನ್ನು ಅಭಿವೃದ್ಧಿ ಮಾಡಿದ್ದು ನಿಜವಾದ ಸಾಧನೆ ಎಂದು ಸಂತಸದಿಂದ ನುಡಿದರು.

ಅತಿಥಿಯಾಗಿ ನಗರದ ಬಸವೇಶ್ವರ ಪದವಿ ಪೂರ್ವ ಮಹಾವಿದ್ಯಾಲಯ ಪ್ರಾಚಾರ್ಯ ಹಾಗೂ ತಾಲೂಕಾ ಕಸಾಪ ಅಧ್ಯಕ್ಷ ಡಾ. ರುದ್ರಮಣಿ ಮಠಪತಿ ಪೂಜ್ಯ ಅಭಿನವ ಗುರುಗಳು ಕನ್ನಡ ನಾಡು, ನುಡಿಗಾಗಿ ಸದಾ ನಮಗೆ ಮಾರ್ಗದರ್ಶನ ಮಾಡುತ್ತಾ ಪ್ರೋತ್ಸಾಹಿಸುತ್ತ ಕನ್ನಡ ನುಡಿ ಸೇವೆ ಮುನ್ನಡೆಸುತ್ತಿರುವುದು ಸಂತಸದ ಸಂಗತಿಯಾಗಿದ್ದು ಅವರ ಆಶೀರ್ವಾದ ಸದಾ ಇರಲೆಂದು ಪ್ರಾರ್ಥಿಸಿದರು.

ಇನ್ನೋರ್ವ ಅತಿಥಿ ನಗರದ ಪಂಚಾಯತ್ ರಾಜ್ ಪದವಿ ಕಾಲೇಜಿನ ಅಧ್ಯಕ್ಷ ಶ್ರೀ ಸಿದ್ಧಾರ್ಥ ಭಾವಿದೊಡ್ಡಿ ನನ್ನ ಶಿಕ್ಷಣ ಹಾಗೂ ಸಾಮಾಜಿಕ ಸೇವೆಗೆ ಪೂಜ್ಯ ಅಭಿನವ ಗುರುಗಳೆ ಪ್ರೇರಣೆಯಾಗಿದ್ದು, ಅವರ ಆಶೀರ್ವಾದ ಸದಾ ನನ್ನ ಮೇಲಿರಲಿ ಎಂದು ಪ್ರಾರ್ಥಿಸಿ, ಅವರ ಸಾಮಾಜಿಕ, ಧಾರ್ಮಿಕ ಸೇವೆಯಲ್ಲಿ ಸದಾ ಪೂಜ್ಯ ಗುರುಗಳ ಜೊತೆಗಿದ್ದು ಸೇವೆ ಗೈಯುವೆ ಎಂದು ನುಡಿದರು.

ನಗರದ ಬಸವ ಬೆರಳಚ್ಚು ಸಂಸ್ಥೆಯ ಪ್ರಾಚಾರ್ಯ ಶ್ರೀ ಎ. ಜಿ. ಪಾಟೀಲ ಅಧ್ಯಕ್ಷತೆ ವಹಿಸಿ ಅನೇಕ ವರ್ಷಗಳಿಂದ ನಾವು ಈ ಗವಿಮಠದ ಭಕ್ತರಾಗಿ ಶ್ರದ್ಧೆಯಿಂದ ನಡೆದುಕೊಂಡದ್ದರಿಂದ ನಮಗೆ ಸದಾ ಗುರುಗಳ ಆಶೀರ್ವಾದದಿಂದ ಒಳ್ಳೆಯದಾಗಿದೆ. ಭಕ್ತಿಯಿಂದ ನಡೆದುಕೊಂಡವರಿಗೆ ಪೂಜ್ಯ ಗುರುಗಳ ಆಶೀರ್ವಾದ ಇಲ್ಲಿ ದೊರೆಯುತ್ತದೆ. ಇದೇ ಸಮಯದಲ್ಲಿ ವಿಶೇಷ ಸನ್ಮಾನ ಸ್ವೀಕರಿಸಿದ ಡಾ. ಯುವರಾಜ ಮಾಣಿಕಪ್ಪ ಬಿರಾದಾರ ಅವರಿಂದ ತಮಗಾದ ಸಹಾಯವನ್ನು ಸ್ಮರಿಸಿ ಅಭಿನಂದಿಸಿದರು.

ಪ್ರೊ. ರುದ್ರೇಶ್ವರ ವಿರೂಪಾಕ್ಷಸ್ವಾಮಿ ಸಂಚಾಲನೆ ಮಾಡಿದರು. ಶ್ರೀಮತಿ ಶಕುಂತಲಾ ಮಠ ಪ್ರಾರ್ಥನಾ ಗೀತೆ ಹಾಡಿದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಸ್ವಾಗತಿಸಿದರು. ವಿಮಲಾಬಾಯಿ ಮಾಣಿಕಪ್ಪ ಬಿರಾದಾರ, ಸವಿತಾ ರಮೇಶ ಸ್ವಾಮಿ, ರಾಕೇಶ ಪುರವಂತ, ಲಕ್ಷ್ಮಿಪುತ್ರ ನಿಂಬಾಳ್ಕರ್, ಗೋವಿಂದರೆಡ್ಡಿ ಕೋತಾಪಲ್ಲೇ, ಪ್ರೊ. ರವಿ ಡಿಗ್ಗಿಕರ್, ರುದ್ರಮುನಿ ಹಿರೇಮಠ, ರಮೇಶ ರಾಜೋಳೆ, ಮಲ್ಲಿಕಾರ್ಜುನ ಅಲಗುಡೆ ಮೊದಲಾದ ಭಕ್ತರು ಪಾಲ್ಗೊಂಡಿದ್ದರು.

ವರದಿ :ಶ್ರೀನಿವಾಸ ಬಿರಾದಾರ

# ವಿಕಲಚೇತನರ ರೈಲ್ವೆ ರಿಯಾಯತಿಯಲ್ಲಿ ತಾರತಮ್ಯದ ಕುರಿತು ಶಾಸಕರಿಗೆ ಮನವಿ

**ಬೆಂಗಳೂರು:** ಭಾರತೀಯ ರೈಲ್ವೆಯು ವಿಕಲಚೇತನರ ರೈಲ್ವೆ ರಿಯಾಯತಿ ಪಾಸು ವಿತರಿಸುವಲ್ಲಿ ತಾರತಮ್ಯ ಧೋರಣೆ ನಡೆಸುತ್ತಿದ್ದು ಅದನ್ನು ಸರಿಪಡಿಸಿ ವಿಕಲಚೇತನರಿಗೆ ನ್ಯಾಯ ಒದಗಿಸಲು ಕೇಂದ್ರ ರೈಲ್ವೇ ರಾಜ್ಯ ಸಚಿವ ಶ್ರೀ ವಿ. ಸೋಮಣ್ಣ ಅವರೊಂದಿಗೆ ಚರ್ಚಿಸಿ ಅಂಗವಿಕಲರ ಮಸೂದೆಯಲ್ಲಿ ಗುರುತಿಸಲ್ಪಟ್ಟಿರುವ ಎಲ್ಲಾ ತರಹದ ವಿಕಲಚೇತನರಿಗೆ ರೈಲ್ವೆ ರಿಯಾಯತಿ ಪಾಸು ಸಿಗಲು ಸಹಾಯ ಮಾಡಬೇಕೆಂದು ಶಿವಮೊಗ್ಗ ಶಾಸಕ ಶ್ರೀ ಎಸ್ ಎನ್ ಚನ್ನಬಸಪ್ಪ ಅವರಿಗೆ ಇಂಡಿಯನ್ ದಿವ್ಯಾಂಗ್ ಎಂಪವರ್ಮೆಂಟ್ ಅಸೋಸಿಯೇಷನ್ ಅಧ್ಯಕ್ಷ ಶ್ರೀ ಕೊಡಕ್ಕಲ್ ಶಿವಪ್ರಸಾದ್ ಅವರು ಮನವಿ ಮಾಡಿದರು.



ಬೆಂಗಳೂರಿನ ಶಾಸಕರ ಭವನದ ಅವರ ಕಚೇರಿಯಲ್ಲಿ ಇತ್ತೀಚೆಗೆ ಭೇಟಿ ಮಾಡಿ ಅಂಗವಿಕಲರ ಮುಖ್ಯ ಆಯುಕ್ತರ ನ್ಯಾಯಾಲಯವು ರೈಲ್ವೆ ಇಲಾಖೆಯ ತಾರತಮ್ಯ ಧೋರಣೆಯನ್ನು ಪ್ರಶ್ನಿಸಿ ಆನ್ಲೈನ್ ಕೋರ್ಟ್ ವಿಚಾರಣೆ ನಡೆಸಿದ್ದು ಎಲ್ಲಾ ವಿಧದ ವಿಕಲಚೇತನರಿಗೆ ತಾರತಮ್ಯ ತೋರದೆ ರಿಯಾಯತಿ ಪಾಸ್ ವಿತರಿಸಬೇಕೆಂದು ಕೋರ್ಟ್ ಆದೇಶ ನೀಡಿದ್ದರೂ ಸರಕಾರದಿಂದ ಅನುದಾನ ಬಾರದಿರುವುದರಿಂದ ತೊಂದರೆಯಾಗಿದೆ ಎಂಬ ಕಾರಣವನ್ನು ಮುಂದಿಟ್ಟು ಹಠ ಮಾರಿ ಧೋರಣೆ ತಳೆದಿದೆ ಎಂದು ವಿವರಿಸಿದರು.

ಮನವಿಯನ್ನು ಮುತುವರ್ಜಿಯಿಂದ ಆಲಿಸಿದ ಶಾಸಕರು ಈ ಬಗ್ಗೆ ಕೇಂದ್ರ ರೈಲ್ವೇ ಮಂತ್ರಿ ಶ್ರೀ ವಿ. ಸೋಮಣ್ಣ ಅವರಲ್ಲಿ ಚರ್ಚಿಸಿ ಸಮಸ್ಯೆ ಸರಿಪಡಿಸಲು ಪ್ರಯತ್ನಿಸುವೆ ಎಂದು ಭರವಸೆ ನೀಡಿದರು.

– ಕರುನಾಡ ಕಂದ

## ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಕ್ರಾಂತಿಕಾರಿ ಬಣದ ಗುರುಮಠಕಲ್ ತಾಲೂಕಿನ ಪದಾಧಿಕಾರಿಗಳ ಆಯ್ಕೆ



**ಯಾದಗಿರಿ/ಗುರುಮಠಕಲ್:** ತಾಲೂಕಿನ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳ ಆಯ್ಕೆಯು ಜುಲೈ 27 ರಂದು ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಸಂಘಟನಾ ಚಾಲಕರಾದ ಮಲ್ಲಿಕಾರ್ಜುನ್ ಕ್ರಾಂತಿಕಾರಿ ಅವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ದಲಿತ ಚಳುವಳಿಯ ಬೆನ್ನೆಲುಬು ಹಾಗೂ ನಿವೃತ್ತ ಪ್ರೊಫೆಸರ್ ಮಾನು ಹರಿಕಾರ, ರಾಜ್ಯ ಸಮಿತಿ ಜಿಲ್ಲಾ ಮುಖಂಡರಾದ ಮಲ್ಲಿಕಾರ್ಜುನ್ ತಳ್ಳಳ್ಳಿ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿ ತಾಲೂಕಿನ ಪದಾಧಿಕಾರಿಗಳ ಆಯ್ಕೆ ಮಾಡಿದರು. ತಾಲೂಕಿನ ಸಂಚಾಲಕರಾಗಿ ಆನಂದ ಭಜಂತ್ರಿ ಗೋಪಾಲಾಪುರ, ಸಹ ಸಂಚಾಲಕರಾಗಿ ಅಂಜನೇಯ ಯಲ್ಹೇರಿ, ರಘು ಪರಮೇಶ್ ಪಲ್ಲಿ, ವೆಂಕಟೇಶ್ ಜೈ ಗ್ರಾಮ, ಕಾಶೀನಾಥ್ ಪರಮೇಶ್ ಪಲ್ಲಿ, ಇನ್ನು ಖಜಾಂಚಿಯಾಗಿ ಮೌನೇಶ್ ಗೋಪಾಲಪುರ ಅವರಿಗೆ ಜವಾಬ್ದಾರಿ ನೀಡಲಾಯಿತು. ಈ ಸಂದರ್ಭದಲ್ಲಿ ರವಿಚಂದ್ರ ಬಮ್ಮನಹಳ್ಳಿ, ಭೀಮಣ್ಣ ಪೂಜಾರಿ, ರಂಗಸ್ವಾಮಿ, ನಾಗಪ್ಪ ಅರಿಕೇರಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವರದಿ: ಜಗದೀಶ್ ಕುಮಾರ್ ಭೂಮಾ

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ಗಂಗಾವತಿ ದರೋಜಿ ಮಧ್ಯೆ ನಾಲ್ಕು ಸ್ಟೇಷನ್‌ಗಳ ಪಟ್ಟಿ ವೈರಲ್

**ಬಳ್ಳಾರಿ/ ಕಂಪ್ಲಿ:** ಗಂಗಾವತಿಯಿಂದ ಕಂಪ್ಲಿ ಮೂಲಕ ದರೋಜಿಗೆ ಬ್ರಾಡ್‌ಗೇಜ್ ರೈಲ್ವೆ ಸಂಪರ್ಕಕ್ಕಾಗಿ ಸಮೀಕ್ಷೆ ಮುಗಿದಿದ್ದು, ಇದೀಗ ರೈಲ್ವೆ ಸ್ಟೇಷನ್ ಮಾಹಿತಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು ವೈರಲ್ ಆಗಿದೆ ಒಟ್ಟಾರೆ ಆರು ಸ್ಟೇಷನ್‌ಗಳ ಮಾಹಿತಿ ಇದೆ.

ಗಂಗಾವತಿ ರೈಲ್ವೆ ನಿಲ್ದಾಣದಿಂದ ಕಂಪ್ಲಿ ಮೂಲಕ ದರೋಜಿ ರೈಲ್ವೆ ನಿಲ್ದಾಣಕ್ಕೆ ಒಟ್ಟು 31.30 ಕಿ.ಮೀ. ಗಳಷ್ಟಿದ್ದು ಮಧ್ಯದಲ್ಲಿ ಒಟ್ಟಾರೆ ನಾಲ್ಕು ಸ್ಟೇಷನ್‌ಗಳು ಬರುತ್ತವೆ. ಗಂಗಾವತಿಯಿಂದ 10.77 ಕಿ.ಮೀ. ಅಂತರದಲ್ಲಿ ಕಂಪ್ಲಿಯಲ್ಲಿ, ಇಲ್ಲಿಂದ 3.22ಕಿ.ಮೀ. ಅಂತರ ದೇವಸಮುದ್ರದಲ್ಲಿ ಹಾಲ್ಟ್, 4.70ಕಿ.ಮೀ. ಅಂತರದ ಜವುಕಿನಲ್ಲಿ ಸ್ಟೇಷನ್, 5ಕಿ.ಮೀ. ಅಂತರದಲ್ಲಿ ಸುಗ್ಗೇನಹಳ್ಳಿಯಲ್ಲಿ ಹಾಲ್ಟ್, ಅಲ್ಲಿಂದ 7.60ಕಿ.ಮೀ.ಅಂತರದ ದರೋಜಿಗೆ ಸಂಪರ್ಕ ಸೇರುತ್ತದೆ.

ಈಗಾಗಲೇ ಗಂಗಾವತಿ-ದರೋಜಿ ಬ್ರಾಡ್‌ಗೇಜ್ ರೈಲ್ವೆ ಸಂಪರ್ಕ ಕಾಮಗಾರಿಗಾಗಿ ಸಮೀಕ್ಷೆ ಪೂರ್ಣಗೊಂಡಿದ್ದು, 919.49 ಕೋಟಿ ರೂಪಾಯಿಗಳನ್ನು ಅಂದಾಜಿಸಿದೆ. ಅನುದಾನ

RAILWAY STATIONS & YARDS:

There are 06 No. Stations between Gangavathi - Daroji stations. The facilities provided in each station are as detailed below:- @Ballari Jn. Rail Info

| Sl.No | Name of Station | Type | Proposed Kilometer | Inter Distance |
|---|---|---|---|---|
| 1 | Gangavathi | Exg. X-ing | 0.00 | 0.00 |
| 2 | Kampli | Pro. X-ing | 10.77 | 10.77 |
| 3 | Devasamudra | Pro. Halt | 14.00 | 3.22 |
| 4 | Jowku | Pro. X-ing | 18.70 | 4.70 |
| 5 | Sughinahalli | Pro. Halt | 23.70 | 5.00 |
| 6 | Daroji | Exg. X-ing | 31.30 | 7.60 |

ಬಿಡುಗಡೆಗೊಳಿಸಿ ಕಾಮಗಾರಿ ಆರಂಭಿಸುವಂತೆ ಈಗಾಗಲೇ ಹಲವು ಬಾರಿ ನಿಯೋಗ ಮೂಲಕ ತೆರಳಿ ರೈಲ್ವೆ ಸಚಿವ ವಿ. ಸೋಮಣ್ಣ ಸೇರಿ ಸಂಬಂಧಿಸಿದ ರೈಲ್ವೆ ಅಧಿಕಾರಿಗಳಿಗೆ, ಶಾಸಕ, ಸಂಸದರಿಗೆ ಮನವಿ ಸಲ್ಲಿಸಿದೆ. ರೈಲ್ವೆಕಾಮಗಾರಿ ಆರಂಭಕ್ಕೆ ಅನುದಾನ ಬಿಡುಗಡೆಗೊಳ್ಳಬೇಕಿದೆ ಎಂದು ಕಂಪ್ಲಿ ತಾಲೂಕು ರೈಲ್ವೆ ಮಾರ್ಗಕ್ಕಾಗಿ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಎಂ. ಹೇಮಯ್ಯಸ್ವಾಮಿ ಒತ್ತಾಯಿಸಿದ್ದಾರೆ.

ಕಂಪ್ಲಿ ಮೂಲಕ ಗಂಗಾವತಿ-ದರೋಜಿ ಬ್ರಾಡ್‌ಗೇಜ್ ರೈಲ್ವೆ ಸಂಪರ್ಕ ಸಮೀಕ್ಷೆಯಲ್ಲಿ 10ಕ್ಕೆ 6.50 ಅಂಕಗಳಿಸಿ ಲಾಭದಾಯಕವಾಗಿದೆ. ರಾಸಾಯನಿಕ, ಸಿಮೆಂಟ್, ಸ್ಟೀಲ್, ಭತ್ತ, ಕಚ್ಚಾವಸ್ತು ಸೇರಿ ನಾನಾ ಸರಕುಗಳ ಸಾಗಣೆಗೆ ಅನುಕೂಲವಾಗಲಿದೆ. ಗಂಗಾವತಿ-ದರೋಜಿ ರೈಲ್ವೆ ಸಂಪರ್ಕ ಕಾಮಗಾರಿಗೆ ಉಭಯ ಸರ್ಕಾರಗಳು ಅನುದಾನ ಬಿಡುಗಡೆಗೊಳಿಸಬೇಕೆಂದು ಹುಬ್ಬಳ್ಳಿ ವಿಭಾಗದ ನೈರುತ್ಯ ರೈಲ್ವೆ ಬಳಕೆದಾರರ ಸಲಹಾ ಸಮಿತಿ ಸದಸ್ಯ ಗಂಗಾವತಿಯ ಅಶೋಕಸ್ವಾಮಿ ಹೇರೂರು ಒತ್ತಾಯಿಸಿದ್ದಾರೆ.

**ಟಿಪ್ಪಣಿ:** ಕ್ರಿಂಗ್ ಎಂದರೆ ಸ್ಟೇಷನ್ ಮಾಸ್ಟರ್, ಸಿಬ್ಬಂದಿ, ಲೂಪ್ ಲೀನ್‌ಗಳು, ಕಂಟ್ರೋಲಿಂಗ್ ಸಿಗ್ನಲ್‌ಗಳು. ಹಾಲ್ಟ್ ಎಂದರೆ ಕೇವಲ ಯಾವುದೇ ಸ್ಟೇಷನ್ ಮಾಸ್ಟರ್ ಮತ್ತು ಸಿಬ್ಬಂದಿ ಇಲ್ಲ, ಟಿಕೆಟ್ ಕೌಂಟರ್‌ಗೆ ಒಬ್ಬ ವ್ಯಕ್ತಿ ಇರುತ್ತಾನೆ, ಸಿಗ್ನಲ್ ನಿಯಂತ್ರಣವಿಲ್ಲ. ಉದಾಹರಣೆಗೆ ಬಳ್ಳಾರಿ ಕಂಟೋನ್ಮೆಂಟ್ ಹಾಲ್ಟ್ ಸ್ಟೇಷನ್.

**ವರದಿ : ಜಿಲಾನಸಾಬ್ ಬಡಿಗೇರ**

# ವಿಕಲಚೇತನರ ಹಕ್ಕೊತ್ತಾಯ ಸಮಾವೇಶ ಹಾಗೂ ವಿಕಲಚೇತನ ಸಾಧಕರಿಗೆ ಸನ್ಮಾನ ಕಾರ್ಯಕ್ರಮ

**ಪ್ರತಿಯೊಬ್ಬ ವಿಕಲಾಂಗರಿಗೂ ಒಮ್ಮೆಯಾದರೂ ವಾಹನ ನೀಡುವ ಕುರಿತು ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡುವೆ : ಶಾಸಕ ಶರಣಗೌಡ ಕಂದಕೂರ.**

**ಯಾದಗಿರಿ/ ಗುರುಮಠಕಲ್:** ಪಟ್ಟಣದ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ಗುರುಮಠಕಲ್ ತಾಲೂಕ ಆರ್.ಪಿ.ಡಿ ಟಾಸ್ಕ್ ಫೋರ್ಸ್ ಮತ್ತು ಗ್ರಾಮೀಣ ಹಾಗೂ ನಗರ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಇವರುಗಳ ಸಂಯುಕ್ತ ಆಶ್ರಯದಲ್ಲಿ ವಿಕಲಚೇತನರ ಹಕ್ಕೊತ್ತಾಯ ಸಮಾವೇಶ ಹಾಗೂ ವಿಕಲಚೇತನ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದ ಸಾನಿಧ್ಯವನ್ನು ಗುರುಮಠಕಲ್ ಖಾಸಾಮಠದ ಶ್ರೀಗಳಾದ ಶಾಂತವೀರ ಮುರುಘರಾಜೇಂದ್ರ ಸ್ವಾಮಿಗಳು ವಹಿಸಿದ್ದರು, ಕಾರ್ಯಕ್ರಮದ ಉದ್ಘಾಟನೆಯನ್ನು ಗುರುಮಠಕಲ್ ಶಾಸಕರಾದ ಶರಣಗೌಡ ಕಂದಕೂರು ನೆರವೇ-ರಿಸಿದರು, ಅಧ್ಯಕ್ಷತೆ ಸಿದ್ದನಗೌಡ ಪಾಟೀಲ ಆರ್ ಪಿ ಡಿ ತಾಲೂಕ ಅಧ್ಯಕ್ಷರು ವಹಿಸಿದ್ದರು, ಪುರಸಭೆ ಅಧ್ಯಕ್ಷರಾದ ಜಯಶ್ರೀ ಪಾಟೀಲ, ಉಪಾಧ್ಯಕ್ಷೆ ರೇಣುಕಾ ಪಡಿಗೆ, ತಹಸೀಲ್ದಾರ್ ಶಾಂತಗೌಡ ಬಿರಾದಾರ, ಅಂಬರೀಷ ಪಾಟೀಲ ತಾ. ಪಂ. ಕಾರ್ಯ ನಿರ್ವಾಹಕ ಅಧಿಕಾರಿ, ಶರಣಪ್ಪ ಪಾಟೀಲ ಶಿಶು ಅಭಿವೃದ್ಧಿ ಯೋಜನಾಧಿಕಾ-ರಿಗಳು, ಹಣಮಂತ ರೆಡ್ಡಿ ತಾಲೂಕ ವೈದ್ಯಾಧಿಕಾರಿಗಳು, ಕು. ಉಮಾ ನಾಯಕ, ಸುಭಾಷ್ ಕಟಕಟಿ ವೇದಿಕೆಗೆ ಅತಿಥಿಗಳಾಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದರು.

20 ಹಕ್ಕುಗಳ ಕುರಿತು ಮನವಿ ಶಾಸಕರಿಗೆ ನೀಡಿ ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದ



ಸುರೇಶ್ ಭಂಡಾರಿ ರಾಜ್ಯಾಧ್ಯಕ್ಷರು ವಿಕಲಚೇತನರ ಕುಂದುಕೊರತೆಗಳು, ಅವರಿಗೆ ಮೀಸಲಿಟ್ಟಿರುವ ಅನುದಾನ ಪಡೆಯುವಲ್ಲಿ ಶಾಸಕಾಂಗ ಹಾಗೂ ಕಾರ್ಯಾಂಗ ಸಂಪೂರ್ಣ ಲಾಭ ಪಡೆಯುವಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಸಹಕಾರ ನೀಡಲು ಶಾಸಕರಲ್ಲಿ ಕೇಳಿದರು.

ತಾಲೂಕಿನ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 10 ಜನ ಸಾಧಾಕರನ್ನು ಸನ್ಮಾನಿಸಲಾಯಿತು. ತದ ನಂತರ ಮಾತಾನಾಡಿದ ಶಾಸಕರು ಸಿದ್ದಗಂಗಾ ಕಿರಿಯ ಶ್ರೀಗಳ ಜನ್ಮದಿನದ ಶುಭಾಶಯ ಕೋರಿ, ವಿಕಲ ಚೇತನರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳು ಕಲ್ಪಿಸುವ ನಿಟ್ಟಿನಲ್ಲಿ ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರ ಸ್ವಾಮಿಯವರು ಸುಮಾರು 7 ಸಾವಿರ ಉದ್ಯೋಗ ನೀಡಿ ಅವ-ರಿಗೆ ನೆರವಾಗಿದ್ದರು ಅವರ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಹೇಳಿ, ವಿಕಲ ಚೇತನರು ದೈಹಿಕವಾಗಿ ನ್ಯೂನತೆಗಳನ್ನು ಹೊಂದಿದ್ದರೂ ನಿಮ್ಮ ಸಾಧನೆಗೆ ವಿಕಲಾಂಗತೆ ಅಡ್ಡಿಯಾಗಬಾರದು, ಇಲ್ಲಿಯವರೆಗೆ ನನ್ನ ಅನುದಾನದಲ್ಲಿ ತ್ರಿಚಕ್ರ ವಾಹನ ಮಾತ್ರ ನೀಡುತ್ತಿದ್ದೆವು, ಈ ಬಾರಿ ಶಾಸಕರಿಗೆ ಇರುವ ಅನುದಾನದ 10% ಅಂದರೆ 20 ಲಕ್ಷ ರೂಪಾಯಿಗಳನ್ನು 21 ಬಗೆಯ ವಿಕಲಚೇತನ-ರಿಗೆ ಅವಶ್ಯವಿರುವ ಸಾಧನ ಸಲಕರಣೆಗಳನ್ನು ಒದಗಿಸಲು ಹಾಗೂ ವಿಧಾನಸೌಧದಲ್ಲಿ ನಿಮ್ಮ ಧ್ವನಿಯಾಗಿ ನಿಂತು ಸರಕಾರದ ಗಮನ ಸೆಳೆದು, ನಿಮ್ಮ ಅನುದಾನವನ್ನು ಸಮರ್ಪಕವಾಗಿ ಬಳಕೆ ತಮ್ಮ ಸಹಯೋಗದೊಂದಿಗೆ ಮಾಡುತ್ತೇನೆ ಎಂದು ಭರವಸೆ ನೀಡಿ, ತಾಲೂಕಿನಲ್ಲಿ ವಿಕಲ ಚೇತನರ ಸಮುದಾಯ ಭವನ ಹಾಗೂ ಗ್ರಂಥಾಲಯ, ಸ್ಥಳೀಯ ಸಂಸ್ಥೆಗಳಲ್ಲಿ ಅವರಿಗಾಗಿ ಮೀಸಲಿರುವ 5% ಮೀಸಲಾತಿ ಕುರಿತು ಪ್ರಗತಿ ಪರಿಶೀಲನೆ ಮಾಡುವುದಾಗಿ ತಿಳಿಸಿ, ಎಲ್ಲಾ ವಿಕಲಚೇತನರಿಗೆ ತಾವು ಹೋಗುವ ಯಾವುದೇ ಇಲಾಖೆಗಳಲ್ಲಿ ಅಧಿಕಾರಿಗಳಿಗೆ ಮನವಿ ಮಾಡುವುದನ್ನು ಬಿಟ್ಟು ನಿಮ್ಮ ಹಕ್ಕುಗಳ ಕೆಲಸಗಳಿಗಾಗಿ ಆಗ್ರಹ ಮಾಡಿ ಎಂದು ಹೇಳಿ ಎಲ್ಲರ ಮೆಚ್ಚುಗೆಗೆ ಪಾತ್ರವಾದರು.

ವಿಕಲ ಚೇತನರೊಂದಿಗೆ ಭೋಜನ ಮಾಡುತ್ತಾ ಅವರ ಕುಂದು ಕೊರತೆ ಆಲಿಸಿ, ಅವರಿಗೆ ಎಲ್ಲಾ ಅಧಿಕಾರಿಗಳಿಗೆ ತ್ವ-ರಿತ ಗತಿಯಲ್ಲಿ ವಿಕಲ ಚೇತನರ ಸಮಸ್ಯೆ ಬಗೆಹರಿಸಲು ಸೂಚನೆ ನೀಡಿದರು.

ಕಾರ್ಯಕ್ರಮದ ನಿರೂಪಣೆ ವಿರುಪಾಕ್ಷಪ್ಪಗೌಡ ಮಾಲಿಪಾಟೀಲ ಎಪಿಡಿ ತಾಲೂಕ ಸಂಯೋಜಕರು ನಿರ್ವಹಿಸಿದರು, ಕು. ಸಂಪ್ರೀತಾ ದೇವಪುತ್ರ, ನಾಗಪ್ಪ ಜಿ ಅವಂಟಿ, ರಮೇಶ್ ಮಾನೆ, ರಮೇಶ್ ಕಟ್ಟಮನಿ, ಹನಮಂತ, ಚಂದ್ರಪ್ಪ, ಹಣಮಂತ, ಮಂಗಮ್ಮ ಶ್ರೀದೇವಿ, ಶಿಲ್ಪಾ, ಗಂಗಪ್ಪ, ಎಂ.ರೇಷ್ಮಾ, ನಾಗಮಣಿ,ಗಂಗಪ್ಪ ಪಟ್ಟಣದ ಹಾಗೂ ತಾಲೂಕಿನ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ನೂರಾರು ವಿಕಲ ಚೇತನರು ಸೇರಿದಂತೆ ರಾಜಕೀಯ ಮುಖಂಡರು ಇನ್ನಿತರರು ಹಾಜರಿದ್ದರು.

**ವರದಿ: ಜಗದೀಶ್ ಕುಮಾರ್ ಭೂಮಾ**

# ಅಥಣಿಯಲ್ಲಿ ಸ್ವಾಭಿಮಾನಿ ಸಂಘರ್ಷ ಸಮಾವೇಶ

ಬೆಳಗಾವಿ: ದಿ. 13/07/2025 ರಂದು ಬೆಳಿಗ್ಗೆ 11:30ಕ್ಕೆ ಅಥಣಿ ನಗರದ ರಾಯಲ್ ಹಾಲ್ ನಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮವಾದ ರಾಜ್ಯ ಸಮಿತಿ ಬೆಂಗಳೂರು, ಚಿಕ್ಕೋಡಿ ಜಿಲ್ಲಾ ಹಾಗೂ ಅಥಣಿ ತಾಲೂಕ ಸಮಿತಿ ವತಿಯಿಂದ ಸಂಘರ್ಷ ರೂವಾರಿ , ದಲಿತ ಚಳುವಳಿಯ ಚೇತನ ಪ್ರೊ. ಬಿ ಕೃಷ್ಣಪ್ಪನವರ 87ನೇ ದಿನಾಚರಣೆಯ ಪ್ರಯುಕ್ತ ಅಥಣಿ ನಗರದ ರಾಯಲ್ ಹಾಲ್ ನಲ್ಲಿ ಸ್ವಾಭಿಮಾನಿ ಸಂಘರ್ಷ ಸಮಾವೇಶ ಏರ್ಪಡಿಸಲಾಗಿತ್ತು.



ದೀಪ ಬೆಳಗಿಸುವ ಮುಖಾಂತರ ಕಾರ್ಯಕ್ರಮಕ್ಕೆ ಗಣ್ಯ ವ್ಯಕ್ತಿಗಳು ಚಾಲನೆ ಕೊಟ್ಟರು. ಈ ಸಮಾವೇಶದ ದಿವ್ಯ ಸಾನಿಧ್ಯವನ್ನು ಜ್ಞಾನಜ್ಯೋತಿ ಬಂತೇಜಿ ಗೂಗವಾಡ ಇವರು ವಹಿಸಿಕೊಂಡಿದ್ದರು, ಅತಿಥಿಗಳಾಗಿ ಅಥಣಿಯ ಮಾಜಿ ಶಾಸಕರಾದ ಶಹಜಾನ್ ಡೂಂಗರಗಾವ್, ಗೌರವಾನ್ವಿತ ಅತಿಥಿಗಳಾದ ಹಾಗೂ ವಕೀಲರಾದ ಮಿತಿಷ್ ಪಟ್ಟಣ, ಪುರಸಭೆ ಸದಸ್ಯರಾದ ಕಲ್ಲೇಶ್ ಮಡ್ಡಿ, ರಾಜ-ಕೀಯ ಮುಖಂಡರಾದ ಅಸ್ಲಾಂ ನಾಲ್ಬಂದ್, ಬುದ್ಧ ವಿಹಾರ ಸಹ ಕಾರ್ಯದರ್ಶಿಗಳಾದ ಪರಶುರಾಮ್ ಚುಬಚಿ, ಅಥಣಿ ತಾಲೂಕ ಸಂಚಾಲಕರಾದ ಸಾಗರ್ ಕಾಂಬಳೆ, ಮಹಿಳಾ ಒಕ್ಕೂಟದ ಅಥಣಿ ತಾಲೂಕ ಸಂಚಾಲಕರಾದ ಗಂಗಾ ಮಾದರ, ಕಪಿಲ ಘಟಕಾಂಬಳೆ, ಸವಿತಾ ಐಹೊಳೆ, ರವಿ ಬನಸೋಡೆ, ಸಿದ್ಧಾರೂಢ ಕಾಂಬಳೆ, ನಿಂದು ಬನಸೋಡೆ, ಮಚ್ಚೇಂದ್ರ ಹದಗನೂರ್ ಸೇರಿದಂತೆ ಇನ್ನೂ ಅನೇಕ ದಲಿತ ಸಂಘರ್ಷ ಸಮಿತಿಯ ಸದಸ್ಯರು ಮತ್ತು ಅಪಾರ ಜನಸ್ತೋಮ ಪಾಲ್ಗೊಂಡಿತ್ತು.

**ವರದಿಗಾರರು ವಿಠ್ಠಲ ಖೋಕಾಟೆ, ಅಥಣಿ**




ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ತಿರುಳುಗನ್ನಡ ನಾಡು ಎಂದು ಪ್ರಖ್ಯಾತಿ ಪಡೆದ ಒಕ್ಕುಂದ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ವಿಜಯಲಕ್ಷ್ಮಿ ಎಚ್. ಆನಿಗೋಳ ಅವರೊಂದಿಗೆ ಕರುನಾಡ ಕಂದ

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ಮಿತಿಮೀರಿದ ನಕಲಿ ವೈದ್ಯರ ಹಾವಳಿ

## ಯಾರ್ ಬಂದ್ರೂ ನನ್ ಏನ್ ಮಾಡೋಕೂ ಆಗೊಲ್ಲ ಅನ್ನೋ ನಕಲಿ ವೈದ್ಯ : ಬನ್ನಿ ಇನ್ನಾದರೂ ಕ್ರಮ ಕೈಗೊಳ್ಳಿ ಅನ್ನೋ ಜನಸಾಮಾನ್ಯ...

**ವಿಜಯಪುರ/ ಇಂಡಿ:** ಪಟ್ಟಣ ಸೇರಿದಂತೆ ತಾಲ್ಲೂಕಿನಲ್ಲಿ ನಕಲಿ ವೈದ್ಯರು, ನಕಲಿ ಕ್ಲಿನಿಕ್‌ಗಳ ಹಾವಳಿ ಮಿತಿಮೀರಿದೆ. ಮುಗ್ಧ ರೋಗಿಗಳ ಪ್ರಾಣದ ಜತೆ ನಕಲಿ ವೈದ್ಯರು ಚೆಲ್ಲಾಟ ಆಡುತ್ತಿದ್ದರಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಜನ ಆಕ್ರೋಶಕ್ಕೆ ಕಾರಣವಾಗಿದೆ. ಪಟ್ಟಣ ಸೇರಿ ಮಾವಿನಹಳ್ಳಿ, ರೂಗಿ ಹಂಜಗಿ, ಸ್ಟೇಷನ್ ಇಂಗಳಗಿ, ನಿಂಬಾಳ ಸೇರಿದಂತೆ ಹಳ್ಳಿ ಹಳ್ಳಿಯಲ್ಲೂ ನೂರಾರು ಸಂಖ್ಯೆಯಲ್ಲಿ ನಕಲಿ ವೈದ್ಯರು ಇದ್ದಾರೆ. ಇನ್ನೂ ಕೆಲವರು ನಕಲಿ ಪ್ರಮಾಣ ಪತ್ರ ಇಟ್ಟುಕೊಂಡು ಜನರ ಪ್ರಾಣದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ಇಂಡಿ ಪಟ್ಟಣದ ಅಂಬೇಡ್ಕರ್ ಸರ್ಕಲ್ ಹತ್ತಿರದಲ್ಲಿರುವ ಡಿ. ಎಲ್. ಬಾಬರ್ ಹೆಸರಿನ ನಕಲಿ ವೈದ್ಯ ಸುಮಾರು ಜನಗಳಿಗೆ ಇಂಜೆಕ್ಷನ್ ಮಾಡಿದ್ದರಿಂದ ರಿಯಾಕ್ಷನ್ ಕೂಡಾ ಆಗಿವೆ.

ಈ ವಿಷಯಗಳನ್ನು ಕುರಿತು ಪತ್ರಕರ್ತರು ಕೇಳಲು ಹೋದಾಗ ನನ್ನ ಹತ್ತಿರ ಸುಮಾರು ಪತ್ರಕರ್ತರು ಬಂದು ಹೋಗಿದ್ದಾರೆ ಅವರು ಸುದ್ದಿ ಕೂಡಾ ಮಾಡಿದ್ದರು ಅವರ ಸುದ್ದಿಗಳಿಗೆ ಕ್ಯಾರೆ ಎನ್ನಲಿಲ್ಲ ನಾನು, ಏಕೆಂದರೆ ನನಗೆ ಡಿಎಚ್‌ಓ, ಟಿಎಚ್‌ಓ ಅವರು ಯಾರೇ ಬರಲಿ ನಿನ್ನ ಆಸ್ಪತ್ರೆಯನ್ನು ಮುಂದುವರೆಸು ಎಂದು ಹೇಳುವವರು ನನ್ನ ಹಿಂದೆ ಇದ್ದಾರೆ ಎಂದು ಆತ ಭಂಡ ಧೈರ್ಯದಿಂದ ಹೇಳುತ್ತಾನೆ. ಆದ-'ರೆ ಇತ್ತೀಚೆಗೆ ಬಂದಂತಹ ಆರೋಗ್ಯ ಅಧಿಕಾರಿಗಳಿಗೆ ನಾವು ಫೋನ್ ಮಾಡಿ ಕೊಟ್ಟಾಗ ಅವರು ಯಾರು ನಿನಗೆ ಪರ್ಮಿಷನ್ ಕೊಟ್ಟಿದ್ದಾರೆ ಎಂದು ಕೇಳಿದಾಗ ಮೊದಲು ಇದ್ದ ಟಿಎಚ್ ಓ ಮತ್ತು ಡಿಎಚ್‌ಓ ಅವರು ನನಗೆ ದವಾಖಾನೆ ಇಡಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಉಡಾಫೆ ಉತ್ತರ ನೀಡಿದ್ದಾನೆ ಇನ್ನು ಮುಂದೆ ನಿನ್ನ ಆಸ್ಪತ್ರೆಯನ್ನು ತೆರೆಯಬೇಡ ಎಂದು ಹೇಳಿದರೂ ಕೂಡಾ ಅವರ ಮಾತಿಗೆ ಬೆಲೆ ಇಲ್ಲದಂತೆ ಮತ್ತೆ ರಾಜಾರೋಷವಾಗಿ ಆಸ್ಪತ್ರೆಯನ್ನು ತೆರೆದು ಕೂತಿದ್ದಾನೆ ಇಂಥ ನಕಲಿ ವೈದ್ಯನಿಗೆ ಸಂಬಂಧ ಪಟ್ಟ ಅಧಿಕಾರಿಗಳು ಏನು ಮಾಡುತ್ತಾರೆ ಎಂದು ಕಾದು ನೋಡೋಣ...

ಇಂಥ ಘಟನೆಗಳು ತಾಲ್ಲೂಕಿನಲ್ಲಿ ಸಾಕಷ್ಟು ಇವೆ. ನಕಲಿ ವೈದ್ಯರು



ಕೇವಲ ರೋಗಿಗಳನ್ನು ಪರೀಕ್ಷೆ ಮಾಡದೇ ಆಪರೇಷನ್, ಭ್ರೂಣ ಹತ್ಯೆ ಮಾಡುತ್ತಿದ್ದರೂ ಆರೋಗ್ಯ ಇಲಾಖೆ ಅಧಿಕಾ-ರಿಗಳು ಮೌನಕ್ಕೆ ಶರಣಾರಾಗಿದ್ದಾರೆ ಎಂದು ಸಾರ್ವಜನಿಕರು ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಸಮಿತಿಯೂ ಮೌನ:**

ನಕಲಿ ವೈದ್ಯರನ್ನು ಪತ್ತೆ ಮಾಡಿ ಅವರ ವಿರುದ್ಧ ಕ್ರಮ ಜರುಗಿಸಲು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಕ್ಷಮ ಪ್ರಾಧಿಕಾರ ರಚನೆ ಮಾಡಲಾಗಿದೆ. ಜಿಲ್ಲಾ ಆರೋಗ್ಯಾಧಿಕಾರಿ, ಸದಸ್ಯ ಕಾರ್ಯದರ್ಶಿ, ಜಿಲ್ಲಾ ಆಯುಷ್ ಅಧಿಕಾರಿ, ಜಿಲ್ಲಾ ಐಎಂಎ ಅಧ್ಯಕ್ಷರು, ಸ್ವಯಂ

> " ನಕಲಿ ವೈದ್ಯರ ಬಗ್ಗೆ ಮಾಹಿತಿ ಕಲೆ ಹಾಕಿ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ವರದಿ ನೀಡಲಾಗುತ್ತಿದೆ. ಇಂಡಿ ತಾಲೂಕಿನಲ್ಲಿ ಆಗಲಿ ಸುತ್ತ ಮುತ್ತಲಿನ ಹಳ್ಳಿಗಳಲ್ಲಾಗಲೀ ದಾಳಿ ಮಾಡಿ ನಕಲಿ ವೈದ್ಯರ ಬಗ್ಗೆ ಕ್ರಮಕ್ಕೆ ಶಿಫಾರಸ್ಸು ಮಾಡಲಾಗಿತ್ತು ".
>
> **– ಡಾ. ಕೃಷ್ಣಕುಮಾರ್ ಜಾದವ್ , ತಾಲ್ಲೂಕು ಆರೋಗ್ಯಾಧಿಕಾರಿ ಇಂಡಿ.**

ಸೇವಾ ಸಂಸ್ಥೆಯವರು ಸದಸ್ಯರಾಗಿರುತ್ತಾರೆ. ಈ ಪ್ರಾಧಿಕಾರವು ಆಗಾಗ ಸಭೆ ಸೇರಿ ಇಂತಹ ನಕಲಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡುತ್ತದೆ ಆದರೆ ನಕಲಿ ವೈದ್ಯರ ಬಗ್ಗೆ ಸಮಿತಿಯೂ ಮೌನಕ್ಕೆ ಶರಣಾಗಿದೆ ಎನ್ನಲಾಗಿದೆ.

**ಬಾಡಿಗೆ ನೀಡುವ ಮಾಲೀಕರಿಗೆ ಸಂಕಷ್ಟ:**

ನಕಲಿ ವೈದ್ಯರಿಗೆ ಕೊಠಡಿ ಬಾಡಿಗೆ ನೀಡುವ ಮುನ್ನ, ಅವರ ವಿದ್ಯಾರ್ಹತೆ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಬೇಕು. ಆರೋಗ್ಯ ಇಲಾಖೆ ನಿಯಮಗಳ ಅನ್ವಯ ನೋಂದಣಿ ಆಗಿದೆಯಾ, ನೋಂದಣಿ ಸಂಖ್ಯೆ ಏನು, ಎಂಬುದನ್ನು ತಿಳಿದುಕೊಂಡು ಬಾಡಿಗೆ ನೀಡಬೇಕು. ಇಲ್ಲದಿದ್ದರೆ ಮಾಲೀಕರೂ ಕಷ್ಟದಲ್ಲಿ ಸಿಲುಕಬೇಕಾಗುತ್ತದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದೇ ಸಮಯದಲ್ಲಿ ಕರ್ನಾಟಕ ಖಾಸಗಿ ವೈದ್ಯಕೀಯ ಅಧಿನಿಯಮ 2007 ಹಾಗೂ ತಿದ್ದುಪಡಿ ನಿಯಮ 2017ರ ಅನ್ವಯ ಖಾಸಗಿ ಆರೋಗ್ಯ ಸಂಸ್ಥೆಗಳು ಕಡ್ಡಾಯವಾಗಿ ಕೆಪಿಎಂಇ ನಿಯಮಾನುಸಾರ ನೋಂದಣಿ ಆಗಿರಬೇಕಾಗುತ್ತದೆ. ವೈದ್ಯರಿಗೂ ನಿಯಮ ಅನ್ವಯವಾಗುತ್ತದೆ. ಅಲೋಪತಿ ಆಸ್ಪತ್ರೆಗಳ ಫಲಕ ನೀಲಿ ಬಣ್ಣ ಹಾಗೂ ಆಯುರ್ವೇದಿಕ್ ಆಸ್ಪತ್ರೆಗಳ ಫಲಕ ಹಸಿರು ಬಣ್ಣದಲ್ಲಿರಬೇಕು ಎಂದು ತಿಳಿಸಿದರು. ಆದರೆ ನಿಯಮಕ್ಕೂ ವಾಸ್ತವಕ್ಕೂ ಸಂಬಂಧವೇ ಇಲ್ಲದಂತಾಗಿದೆ ಎಂದು ಇಂಗಳಗಿ ಗ್ರಾಮದ ದಲಿತ ಮುಖಂಡ ಸುರೇಶ್ ಕಾಂಬಳೆ ಆರೋಪಿಸುತ್ತಾರೆ. 'ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಂಬಿಬಿಎಸ್ ಹಾಗೂ ಸೂಕ್ತ ವಿದ್ಯಾರ್ಹತೆಯುಳ್ಳ ವೈದ್ಯರ ಕೊರತೆ ಇರುವುದು ನಕಲಿ ವೈದ್ಯರಿಗೆ ಅನುಕೂಲ ಮಾಡಿಕೊಟ್ಟಂತಾಗಿದೆ. ಹೀಗಾಗಿ ಜನರು ಲಭ್ಯವಿರುವ ನಕಲಿ ವೈದ್ಯರ ಬಳಿ ಹೋಗುತ್ತಿದ್ದಾರೆ. ಎಲ್ಲಾ ಕಡೆಯೂ ನೋಂದಾಯಿತ ವೈದ್ಯರು ಇರುವಂತೆ ಆರೋಗ್ಯ ಇಲಾಖೆ ನೋಡಿಕೊಳ್ಳಬೇಕು ' ಎಂದು ದಲಿತ ಮುಖಂಡ ಸುರೇಶ ಕಾಂಬಳೆ ಆಗ್ರಹಿಸುತ್ತಿದ್ದಾರೆ.

ವರದಿ :ಅರವಿಂದ ಕಾಂಬಳೆ

## ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರಿಂದ ನೀರು ಸರಬರಾಜು ಪುನಶ್ಚೇತನ ಕಾಮಗಾರಿ ಭೂಮಿ ಪೂಜೆ



**ಬೆಳಗಾವಿ:** ಅಥಣಿ ತಾಲೂಕಿನ ಐಗಳಿ ಕ್ರಾಸ್ ನಲ್ಲಿ ಜಲ ಶುದ್ಧೀಕರಣ ಘಟಕದಲ್ಲಿ ನಡೆದ ಅಥಣಿ ತಾಲೂಕಿನ ಪೂರ್ವ ಭಾಗದ 14 ಗ್ರಾಮಗಳ ಅಂದಾಜು 24.98 ಕೋಟಿ ರೂ. ಗಳಲ್ಲಿ ಮಾಡಲಾಗುತ್ತಿರುವ ಕುಡಿಯುವ ನೀರು ಸರಬರಾಜು ಯೋಜನೆಯ ಪುನಶ್ಚೇತನ ಕಾಮಗಾರಿಯ ಭೂಮಿ ಪೂಜೆಯನ್ನು ಮಾಜಿ ಉಪ ಮುಖ್ಯಮಂತ್ರಿಗಳು, ಅಥಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಲಕ್ಷ್ಮಣ ಸವದಿಯವರು ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಮಾಜಿ ಜಿ. ಪಂ. ಸದಸ್ಯರಾದ ಶ್ರೀ ಸಿದ್ದರಾಯ ಯಲ್ಲಡಗಿ, ಶ್ರೀ ಶಾಮ ಪೂಜಾರಿ, ಶ್ರೀ ಗುರು ದಶ್ಯಾಳ, ಗ್ರಾ. ಪಂ. ಅಧ್ಯಕ್ಷರಾದ ಶ್ರೀಮತಿ ಶಕುಂತಲಾ ಪಾಟೀಲ, ಶ್ರೀ ಬಸವಂತ ಗುಡ್ಡಾಪುರ,ಅ-ಡಹಳ್ಳಿ ಹಿರಿಯ ಮುಖಂಡರಾದ ಶ್ರೀ ಶೇಖರ ನೇಮಗೌಡರ, ಶ್ರೀ ಶಿವು ತೇಲಿ, ಶ್ರೀಮತಿ ಶಾಂತಾಬಾಯಿ ಶೆಟ್ಟಿ, ಶ್ರೀ ನೂರಅಹಮದ್ ಡೋಂಗರಗಾವ, ಶ್ರೀ ಬಸನಗೌಡ ಬಿರಾದರ, ಶ್ರೀ ಪ್ರಹ್ಲಾದ ಪಾಟೀಲ, ಶ್ರೀ ಸುಶೀಲಕುಮಾರ ಪತ್ತಾರ, ಅಥಣಿ ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಶ್ರೀ ಶಿವಾನಂದ ಕಲ್ಲಾಪುರ, ಶ್ರೀ ರವೀಂದ್ರ ಮುರಗಾಲಿ ಎ. ಇ. ಇ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಹಾಗೂ ಕ್ಷೇತ್ರದ ಹಲವಾರು ಗ್ರಾಮಗಳ ಹಿರಿಯ ಮುಖಂಡರು ಮತ್ತು ರೈತರು ಹಾಗೂ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

ವರದಿ ವಿಠ್ಠಲ ಘೋಕಾಟೆ

## ಸಸಿ ನೆಡುವ ಹಾಗೂ ಛತ್ರಿ ವಿತರಣಾ ಕಾರ್ಯಕ್ರಮ



ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಮುರಗುಂಡಿ ಗ್ರಾಮದಲ್ಲಿ ಶಾಲಾ ಶಿಕ್ಷಣ ಇಲಾಖೆ, ಸರ್ಕಾರಿ ಪ್ರೌಢಶಾಲೆ ಮುರಗುಂಡಿ, ಪ್ರಾದೇಶಿಕ ಅರಣ್ಯ ವಲಯ ಅಥಣಿ, ಹಾಗೂ ಗ್ರಾಮ ಪಂಚಾಯತ ಮುರಗುಂಡಿಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾಲಾ ವನಮಹೋತ್ಸವ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳಿಗೆ ಛತ್ರಿ (ಕೊಡೆ) ವಿತರಣಾ ಕಾರ್ಯಕ್ರಮವನ್ನು ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಅಥಣಿಯ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಲಕ್ಷ್ಮಣ ಸವದಿ ಅವರು ಸಸಿಗೆ ನೀರುಣಿಸುವುದರ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಶ್ರೀಮತಿ ಅಶ್ವಿನಿ ಕಾಟಕರ ಗ್ರಾ. ಪಂ, ಅಧ್ಯಕ್ಷರು ಮುರಗುಂಡಿ, ಶ್ರೀ ಮಕಬುಲ ನದಾಫ್ ಅಧ್ಯಕ್ಷರು ಎಸ್, ಡಿ, ಎಂ, ಸಿ ಮುರಗುಂಡಿ, ಮಾಜಿ ಜಿ. ಪಂ. ಸದಸ್ಯರಾದ ಶ್ರೀ ವಿನಾಯಕ ಬಾಗಡಿ, ಶ್ರೀ ಬರಮಾ ಮಗಾಡಿ, ಶ್ರೀ ಮಹಾದೇವ ಕೋರಿ, ಶ್ರೀ ರಮೇಶ ಕುಸನಾಳೆ ಸದಸ್ಯರು ಗ್ರಾ.ಪಂ, ಮುರಗುಂಡಿ, ಶ್ರೀ ರಾಜು ಗುಡೂಡಗಿ ಅಥ-'ಣಿ ಪುರಸಬೆ ಸದಸ್ಯರು, ಕ್ಷೇತ್ರ ಶಿಕ್ಷಣಾಧಿಕಾ-ರಿಗಳಾದ ಶ್ರೀ ಮುಂಜೆ, ಅರಣ್ಯಾಧಿಕಾರಿಗಳಾದ ಶ್ರೀ ರಾಕೇಶ ಅರ್ಜುನವಾಡ, ಎಇಇ, ಜಿ.ಪಂ. ಅಧಿಕಾರಿಗಳಾದ ಶ್ರೀ ಈರಣ್ಣ ವಾಲಿ ಹಾಗೂ ಮತ್ತು ಶಾಲಾ ಶಿಕ್ಷಕರು, ಶಿಕ್ಷಕೀಯರು ಹಾಗೂ ಮುದ್ದು ವಿಧ್ಯಾರ್ಥಿಗಳು ಉಪಸ್ಥಿತರಿದ್ದರು.

ವರದಿ ವಿಠ್ಠಲ ಘೋಕಾಟೆ

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜೆ.ಎನ್.ಗಣೇಶ ಅವರಿಂದ ಅಡಿಗಲ್ಲು ಪೂಜೆ

**ಬಳ್ಳಾರಿ / ಕಂಪ್ಲಿ :** ಪಟ್ಟಣದ 3,5,9 ಮತ್ತು 12ನೇ ವಾರ್ಡಿನಲ್ಲಿ 2024-25ನೇ ಸಾಲಿನ ಕೆಕೆ ಆರ್ ಡಿಬಿ ಸಿಎಂಡಿಕ್ಯೂ 2515 ಯೋಜನೆಯಡಿ ತಲಾ 50 ಲಕ್ಷದಂತೆ ಸುಮಾರು 2ಕೋಟಿ ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕ ಜೆ.ಎನ್.ಗಣೇಶ ಇತ್ತೀಚೆಗೆ ಭೂಮಿ ಪೂಜೆ ಸಲ್ಲಿಸಿದರು.



ನಂತರ ಶಾಸಕ ಗಣೇಶ ಅವರು ಪತ್ರಕರ್ತರೊಂದಿಗೆ ಮಾತನಾಡಿ, 5ನೇ ವಾರ್ಡಿನಲ್ಲಿ ಸುಮಾರು 5 ಕೋಟಿಗೂ ಅಧಿಕ ವೆಚ್ಚದಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳಾಗಿವೆ. 7ನೇ ವಾರ್ಡಿನಲ್ಲಿಯೂ ಸಹ ಸುಮಾರು 1.50 ಕೋಟಿ ವೆಚ್ಚದಲ್ಲಿ ರಸ್ತೆ ಸೇರಿದಂತೆ ನಾನಾ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಯಿತು. ಪಟ್ಟಣದ ಕೆಲವೊಂದು ವಾರ್ಡಿನಲ್ಲಿ ಸಣ್ಣಪುಟ್ಟ ಅಭಿವೃದ್ಧಿ ಕಾಮಗಾರಿಗಳ ಅವಶ್ಯಕತೆ ಇದೆ, ಉಳಿದ ವಾರ್ಡ್ ಗಳಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿವೆ. ಸುಮಾರು 7.50 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಪುರಸಭೆ ಕಟ್ಟಡವಾಗಲಿದೆ. 2 ಕೋಟಿ ವೆಚ್ಚದಲ್ಲಿ ಹಳೆ ಬಸ್ ನಿಲ್ದಾಣ ಅಭಿವೃದ್ಧಿ ಪಡಿಸಲಾಗುವುದು. 3 ಕೋಟಿ ವೆಚ್ಚದಲ್ಲಿ ಅಗ್ನಿಶಾಮಕದಳ ಕಟ್ಟಡ ಕಾಮಗಾರಿಗೆ ಅತೀ ಶೀಘ್ರದಲ್ಲಿ ಭೂಮಿ ಪೂಜೆ ಸಲ್ಲಿಸಲಾಗುವುದು. ಸೋಮಪ್ಪ ಕೆರೆ ಅಭಿವೃದ್ಧಿ ಸುಮಾರು 5 ಕೋಟಿ ಅನುದಾನ ಬಂದಿದೆ. ಹೀಗೆ ಪಟ್ಟಣದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳೊಂದಿಗೆ ಜನತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ. ನಿವೇಶನ ನೀಡಬೇಕೆಂಬುದು ಬಹು ಬೇಡಿಕೆಯಾಗಿದ್ದು, ಜಮೀನು ಹುಡುಕಾಟ ನಡೆದಿದೆ, ಯಾರಾದರೂ ರೈತರು 10 ಎಕರೆ ಜಮೀನು ನೀಡಿದರೆ, ಸರ್ಕಾರದಿಂದ ಅನುದಾನ ಕೊಡಿಸಿ, ಬಡ ಹಾಗೂ ಮಧ್ಯಮವರ್ಗದ ಜನತೆಗೆ ನಿವೇಶನ ಹಂಚಿಕೆ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಭಟ್ಟ ಪ್ರಸಾದ್, ಉಪಾಧ್ಯಕ್ಷೆ ಸುಶೀಲಮ್ಮ, ಸದಸ್ಯರಾದ ಸಿ.ಆರ್.ಹನುಮಂತ, ಕೆ.ಎಸ್. ಚಾಂದ್ ಭಾಷಾ, ವಿ. ನಾಗಮ್ಮ ಸತ್ಯಪ್ಪ, ಗುಡುದಮ್ಮ ಶ್ರೀನಿವಾಸ, ಸುಮಾ ರಾಘು, ಮುಖ್ಯಾಧಿಕಾರಿ ಬಿ.ಮಲ್ಲಿಕಾರ್ಜುನ, ಜೆಇ ಆನಂದ, ಕಂಪ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಶ್ರೀನಿವಾಸರಾವ್, ಪ್ರಧಾನ ಕಾರ್ಯದರ್ಶಿ ರಘುನಾಯಕ, ಮುಖಂಡರಾದ ಕೆ.ಷಣ್ಮುಖಪ್ಪ, ಬಿ.ಸಿದ್ದಪ್ಪ, ವಿ.ಸತ್ಯಪ್ಪ, ಹೋಟಲ್ ಶೇಕ್ಷಾವಲಿ, ಪೇಂಟರ್ ಮಸ್ತಾನ್, ಆಟೋ ರಘು, ಶ್ರೀನಿವಾಸ, ನಾಗರಾಜ, ಡಿಎಸ್ ಪ್ರಸಾದ್, ಅತ್ತಾವುಲ್ಲಾ ರೆಹಮಾನ್, ಕೊಟ್ಟಾಲ್ ವಿರೇಶ, ಶಶಿಕುಮಾರ ಸೇರಿದಂತೆ ಕಾರ್ಯಕರ್ತರು ಪಾಲ್ಗೊಂಡಿದ್ದರು.

ನೆಲ್ಲುಡಿ ಗ್ರಾ. ಪಂ. ಯ ಬಳಿಯಲ್ಲಿರುವ ಹೊಸ ನೆಲ್ಲುಡಿ ರಸ್ತೆಯಲ್ಲಿ 2024-25ನೇ ಸಾಲಿನ ಕೆಕೆಆರ್‌ಡಿಬಿ ಸಿಎಂಡಿಕ್ಯೂ ಯೋಜನೆಯಡಿ ಸುಮಾರು 50 ಲಕ್ಷ ವೆಚ್ಚದಲ್ಲಿ ನಿರ್ಮಿಸಲಿರುವ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿ, ನಂ.10 ಮುದ್ದಾಪುರ ಗ್ರಾ. ಪಂ. ಯ ಪ್ರಭುಕ್ಯಾಂಪಿನಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿ, ಮೆಟ್ರಿ ಗ್ರಾ. ಪಂ. ಯ ಚಿನ್ನಾಪುರ ಗ್ರಾಮದಲ್ಲಿ ಸುಮಾರು 47 ಲಕ್ಷ ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿ ಮತ್ತು ಹಂಪಾದೇವನಹಳ್ಳಿ ಗ್ರಾ. ಪಂ. ಯ ಜವುಕು ಬಳಿಯ ಅಂಜನಾಪುರ ಗ್ರಾಮದಲ್ಲಿ ಸುಮಾರು 40 ಲಕ್ಷ ವೆಚ್ಚದ ಸಿ.ಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕ ಗಣೇಶ ಇವರು ಶಂಕುಸ್ಥಾಪನೆ ನೆರವೇರಿಸಿದರು.

ಈಗಾಗಲೇ ಬಹುತೇಕವಾಗಿ ರಸ್ತೆಗಳ ಅಭಿವೃದ್ಧಿ ಕಾರ್ಯ ಮುಕ್ತಾಯದ ಹಂತಕ್ಕೆ ಬಂದಿವೆ. ತುಂಗಭದ್ರಾ ಜಲಾಶಯದಲ್ಲಿ ಸದ್ಯ 80 ಟಿಎಂಸಿ ನೀರು ಸಂಗ್ರಹವಾಗಿದ್ದು, ಮುಂದಿನ ದಿನದಲ್ಲಿ ಮಳೆಯಾದರೆ, ಮತ್ತಷ್ಟು ನೀರು ಸಂಗ್ರಹವಾಗುವ ಸಾಧ್ಯತೆ ಇರುವುದ-ರಿಂದ ಎರಡನೇ ಬೆಳೆಗೆ ನೀರು ಒದಗಿಸಿದರೆ, ರೈತರಿಗೆ ಅನುಕೂಲವಾಗಲಿದೆ. ಮುಂದಿನ ವರ್ಷದ ಮಾರ್ಚ್ ಮತ್ತು ಎಪ್ರಿಲ್ ತಿಂಗಳೊಳಗೆ ಹೊಸ ಗೇಟ್ ಅಳವಡಿಸಿ, ಈ ಭಾಗದ ಜೀವನಾಡಿ ರೈತರ ಎರಡು ಬೆಳೆಗೆ ಸಂಪೂರ್ಣವಾಗಿ ನೀರು ಒದಗಿಸುವ ನಿಟ್ಟಿನಲ್ಲಿ ಕ್ರಮವಹಿಸಬೇಕು. ಎಮ್ಮಿಗನೂರು, ಕಂಪ್ಲಿ ಸೇರಿದಂತೆ ಇನ್ನಿತರ ಭಾಗದಲ್ಲಿ ಬೆಳೆದ ಜೋಳವನ್ನು ಪೂರ್ಣ ಪ್ರಮಾಣದಲ್ಲಿ ಖರೀದಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಮುಂದಾಗಬೇಕು ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಶ್ರೀನಿವಾಸರಾವ್, ಚನ್ನಬಸವರಾಜಗೌಡ, ನೆಲ್ಲುಡಿ ಗ್ರಾ. ಪಂ. ಪಿಡಿಒ ಶೇಷಗಿರಿ, ಮುಖಂಡರಾದ ಮಲ್ಲನಗೌಡ, ಸಣ್ಣ ಹುಲುಗಪ್ಪ, ಮಹಾಂತೇಶ, ಈರಣ್ಣ, ಸೋಮನಗೌಡ, ಪ್ರಭುಕ್ಯಾಂಪಿನ ಸದಸ್ಯ ತಿಮ್ಮಪ್ಪ, ಮುಖಂಡರಾದ ಡಿ.ಎಸ್ ಪ್ರಸಾದ್, ಮಲ್ಲಿಕಾರ್ಜುನ, ಹುಲುಗಪ್ಪ, ಮೆಟ್ರಿ ಗ್ರಾ. ಪಂ. ಅಧ್ಯಕ್ಷೆ ನಾಗಮ್ಮ, ಮುಖಂಡರಾದ ನಾಗರಾಜ, ಹೊನ್ನಳ್ಳಿ ಹಂಪಾರೆಡ್ಡಿ, ಜವುಕು ಗ್ರಾಮದ ಮುಖಂಡರಾದ ಮಲ್ಲಿಕಾರ್ಜುನ ಸೇರಿದಂತೆ ಕಾರ್ಯಕರ್ತರು ಪಾಲ್ಗೊಂಡಿದ್ದರು.

**ವರದಿ : ಜಿಲಾನಸಾಬ್ ಬಡಿಗೇರ**

---

# ವಲಸೆ ಕುರಿಗಾಹಿಗಳಿಗೆ ಗುರುತಿನ ಚೀಟಿ ವಿತರಣೆ-ಕುರಿಗಾಹಿಗಳಿಗೆ ಇದು ರಕ್ಷಾ ಕವಚ

**ಪಶು ಆಸ್ಪತ್ರೆಯಲ್ಲಿ ಪಶು ವೈದ್ಯರ ಅನುಪಸ್ಥಿತಿ ಸಲ್ಲದು, ಮಾನವೀಯತೆ ದೃಷ್ಟಿಯಿಂದ ಅವರಿಗೆ ಸವಲತ್ತು ನೀಡಿ-ಶರಣಗೌಡ ಕಂದಕೂರ.**

**ಯಾದಗಿರಿ/ಗುರುಮಠಕಲ್ :** ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಗುರುಮಠಕಲ್ ಪಟ್ಟಣದ ಪಶು ಆಸ್ಪತ್ರೆಯಲ್ಲಿ ತಾಲೂಕಿನ ವಲಸೆ ಕುರಿಗಾಹಿಗಳಿಗೆ ಶಾಸಕರಾದ ಶರಣಗೌಡ ಕಂದಕೂರ ಅವರು ಗುರುತಿನ ಚೀಟಿ ವಿತರಣೆ ಮಾಡಿದರು.



ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಉಪನಿರ್ದೇಶಕರಾದ ರಾಜಗೋಪಾಲ್ ದೇಶಮುಖ್ ಅವರು 20 ಕ್ಕಿಂತ ಹೆಚ್ಚು ಕುರಿಗಳನ್ನು ಹೊಂದಿದ್ದು, ಒಂದು ಕಡೆಯಿಂದ ಇನ್ನೊಂದು ಕಡೆ ವಲಸೆ ಹೋಗುವ ಕು-ರಿಗಾಹಿಗಳಿಗೆ, ಸರಕಾರದಿಂದ ನೀಡಲಾಗಿರುವ ಈ ಗುರುತಿನ ಚೀಟಿ ಕುರಿಗಳ ಆರೈಕೆ, ಲಸಿಕೆ ಹಾಗೂ ಅಪಘಾತಗಳು, ಕುರಿಗಳ ಕಳವು ಆದಾಗ ಕುರಿಗಾಹಿಗಳಿಗೆ ರಕ್ಷಾ ಕವಚವಾಗಿ ಅವರ ನೆರವಿಗೆ ಬರಲಿದೆ, ಅಷ್ಟೇ ಅಲ್ಲದೆ ಕುರಿಗಾಹಿಗಳ ಮಕ್ಕಳು ಓದಲು ವಸತಿ ಶಾಲೆಗಳಲ್ಲಿ 10 ಪ್ರತಿಶತ ಮೀಸಲಾತಿ ಸಿಗುವುದು, ಜಾನುವಾರು ಆಕಸ್ಮಿಕ ಸಾವು ಆದಾಗ ಮರಣೋತ್ತರ ಪರೀಕ್ಷೆ ಮಾಡಿ ಪರಿಹಾರವನ್ನು ಸಹ ಈ ಗುರುತಿನ ಚೀಟಿ ಹೊಂದಿರುವ ಕುರಿಗಾಹಿಗಳು ಪಡೆಯಬಹುದು, ತಾವು ಇರುವ ಸ್ಥಳದಲ್ಲಿಯೇ ಕುರಿಗಳಿಗೆ ಲಸಿಕೆ, ಅವುಗಳ ಆರೈಕೆ, ವನ್ಯಜೀವಿಗಳಿಂದ, ಕಳ್ಳರಿಂದ ಕುರಿಗಳ ರಕ್ಷಣೆಗೆ ಬಂದೂಕು ಸಹ ವಿತರಿಸಲಾಗುವುದು ಎಂದು ವಿವರಿಸಿದರು.

113 ಕುರಿಗಾಹಿಗಳಿಗೆ ಗುರುತಿನ ಚೀಟಿ ವಿತರಿಸಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶಾಸಕರು ಗ್ರಾಮೀಣ ಭಾಗದ ಜನರು ಈ ಗುರುತಿನ ಚೀಟಿ ಪಡೆಯುವುದರ ಮೂಲಕ ಸರಕಾರದ ಸೌಲಭ್ಯಗಳನ್ನು ಪಡೆಯಬೇಕು, ಹೆಚ್ಚಿನ ಮಾಹಿತಿಯ ಕೊರತೆಯ ಕಾರಣ ಕಡಿಮೆ ಪ್ರಮಾಣದಲ್ಲಿ ಗುರುತಿನ ಚೀಟಿ ಪಡೆದಿದ್ದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಈ ಗುರುತಿನ ಚೀಟಿಯ ಲಾಭಗಳ ಕುರಿತು ತಿಳಿಸಿ ಈ ಗುರುತಿನ ಚೀಟಿ ಹೆಚ್ಚು ಜನರಿಗೆ ತಲುಪಿಸುವ ಕೆಲಸ ಮಾಡಲಾಗುವುದು ಎಂದು ಹೇಳಿದರು.

ಪ್ರಭಾವಿಗಳು ಸರಕಾರಕ್ಕೆ ತಪ್ಪು ಮಾಹಿತಿ ನೀಡಿ ಬಂದೂಕು ಪಡೆದು ಅದರ ದುರ್ಬಳಕೆ ಮಾಡದಿರಲು ಹಾಗೂ ಪಶು ಆಸ್ಪತ್ರೆಗಳಲ್ಲಿ ಪಶು ವೈದ್ಯರು ಅನುಪಸ್ಥಿತಿ ಆಗದಂತೆ ಮಾನವೀಯತೆ ಆಧಾರದ ಮೇಲೆ ಪಶು ಸಂಗೋಪನೆ ಮಾಡುವವರಿಗೆ ಸವಲತ್ತು ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಪಶು ವೈದ್ಯಾಧಿಕಾರಿ ಶಶಿಕಿರಣ ಹಜಾರೆ, ಉಪನಿರ್ದೇಶಕರು ಶರಣಭೂಪಾಲರೆಡ್ಡಿ, ಸಂಜೀವ ರೆಡ್ಡಿ ಸಂಘದ ಅಧ್ಯಕ್ಷರು, ವಿಜಯಕುಮಾರ್ ಪಶು ವೈದ್ಯರು ಸೇ-ರಿದಂತೆ ಸಿಬ್ಬಂದಿಗಳು ಮತ್ತು ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಕುರಿಗಾಹಿಗಳು ಹಾಜರಿದ್ದರು.

**ವರದಿ: ಜಗದೀಶ್ ಕುಮಾರ್ ಭೂಮಾ**

---

# ಚಿಕ್ಕ ವಯಸ್ಸಿಗೆ ದೊಡ್ಡ ಸಾಧನೆ : ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್‌ಗೆ ಸೇರಿದ ದ್ವಿತಾ ಮೋಹನ್



**ಬಳ್ಳಾರಿ / ಕಂಪ್ಲಿ :** ಸ್ಥಳೀಯ ನಿವಾಸಿ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಸದಸ್ಯರಾದ ಮೋಹನ್ ಕುಮಾರ್ ದಾನಪ್ಪ ಮತ್ತು ಸೌಮ್ಯಶ್ರೀ ದಂಪತಿಯ ದ್ವಿತೀಯ ಪುತ್ರಿ ದ್ವಿತಾ ಮೋಹನ್ (6 ತಿಂಗಳು) ಅವರು ಮಹತ್ವದ ಸಾಧನೆ ಮಾಡಿದ್ದಾರೆ. ಯಾವುದೇ ಸಹಾಯ ಅಥವಾ ಬಾಹ್ಯ ಬೆಂಬಲವಿಲ್ಲದೆ ಅತ್ಯಂತ ಹೆಚ್ಚು ಸಮಯ ಕುಳಿತುಕೊಂಡಿರುವ ದಾಖಲೆಯನ್ನು ಸ್ಥಾಪಿಸಿ, ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್ ಪುಸ್ತಕದಲ್ಲಿ ಹೆಸರು ದಾಖಲಿಸಿದ್ದಾರೆ.

ಜೂನ್ 28, 2025 ರಂದು ಬೆಂಗಳೂರಿನಲ್ಲಿ ನಡೆದ ಈ ಘಟನೆ ಸಮಯದಲ್ಲಿ, ದ್ವಿತಾ ಮೋಹನ್ ಅವರು 44 ನಿಮಿಷ 8 ಸೆಕೆಂಡುಗಳ ಕಾಲ ಕುಳಿತುಕೊಂಡು ವಿಶಿಷ್ಟ ಶಾರೀ-ರಿಕ ಸಮತೋಲನ ಮತ್ತು ಶಕ್ತಿಯನ್ನು ಪ್ರದರ್ಶಿಸಿದರು. ಇದು ಶಿಶು ಹಂತದಲ್ಲಿನ ದೈಹಿಕ ಬೆಳವಣಿಗೆ ಹಾಗೂ ಸಾಮರ್ಥ್ಯಗಳ ಮೈಲಿಗಲ್ಲು ಸಾಧನೆಯಾಗಿದ್ದು, ಇದರ ಮೂಲಕ ಅವರು ಹೊಸ ವಿಶ್ವ ದಾಖಲೆಯನ್ನೇ ನಿರ್ಮಿಸಿದ್ದಾರೆ.

ಈ ಅಸಾಧಾರಣ ಸಾಧನೆಯ ಕುರಿತು ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್ಸ್ ಸಂಪಾದಕೀಯ ಹೇಳಿಕೆಯಲ್ಲಿ ಶ್ಲಾಘನೆ ವ್ಯಕ್ತಪಡಿಸಿ, ಅನೇಕ ಪೋಷಕರಿಗೆ ಪ್ರೇರಣೆಯಾಗಿದ್ದಾರೆ ಮತ್ತು ಶಿಶು ಸಾಮರ್ಥ್ಯದ ಪ್ರಭಾವಶಾಲಿ ಉದಾಹರಣೆಯಾಗಿದ್ದಾರೆ ಎಂದು ಹೇಳಿದರು.

ಈ ಹಿಂದೆ, ದ್ವಿತಾ ಅವರ ತಂದೆ ಮೋಹನ್ ಕುಮಾರ್ ದಾನಪ್ಪರು ರಾಷ್ಟ್ರಮಟ್ಟದಲ್ಲಿ ಮ್ಯಾರಥಾನ್ ಮೂಲಕ ದಾಖಲೆಯ ಸಾಧನೆ ಮಾಡಿದ್ದು, ಅವರ ಹಿರಿಯ ಪುತ್ರಿ ದಿಶಾ ಮೋಹನ್ ಫ್ಯಾನ್ಸಿ ಡ್ರೆಸ್ ಮತ್ತು ಭರತನಾಟ್ಯ ಕ್ಷೇತ್ರಗಳಲ್ಲಿ ದಾಖಲೆ ಗಳಿಸಿದ್ದಾರೆ. ಇಂತಹ ಪಟು ಕುಟುಂಬದಲ್ಲಿ ದ್ವಿತಾ ಅವರ ಈ ಸಾಧನೆಯು ಮತ್ತೊಂದು ಸ್ತರವನ್ನು ತಲುಪಿದೆ. ಈ ಬಗ್ಗೆ ಸಂತೋಷ ವ್ಯಕ್ತಪಡಿಸಿರುವ ಅಜ್ಜ ಎ.ಸಿ. ದಾನಪ್ಪ (ರಾಜ್ಯ ದಿಶಾ ಸಮಿತಿ ಸದಸ್ಯ), ತಂದೆ ಮೋಹನ್ ಕುಮಾರ್ ದಾನಪ್ಪ ಮತ್ತು ತಾಯಿ ಸೌಮ್ಯಶ್ರೀ, ದ್ವಿತಾ ಮೋಹನ್ ಅವರ ಭವಿಷ್ಯಕ್ಕಾಗಿ ಶುಭಾಶಯಗಳನ್ನು ಸಲ್ಲಿಸಿದ್ದಾರೆ.

**ವರದಿ : ಜಿಲಾನಸಾಬ್ ಬಡಿಗೇರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ಅಥಣಿ ಪುರಸಭೆ ಅಧಿಕಾರಿಗಳೇ ಎಲ್ಲಿದ್ದೀರಿ ?

## ಅನಾಹುತಕ್ಕೂ ಮುನ್ನ ಎಚ್ಚರಗೊಳ್ಳಿ

ಬೆಳಗಾವಿ/ ಅಥಣಿ : ನಗರದ ಸಾಯಿ ನಗರ ಮತ್ತು ವೈಭವ ನಗರದಲ್ಲಿರುವ ರಸ್ತೆಗಳು ನೋಡಿದರೆ ಇದು ಡಾಂಬರೀಕರಣವಾದ ರಸ್ತೆನಾ ಅಥವಾ ಮಣ್ಣಿನ ರಸ್ತೆನಾ ಎನ್ನುವುದೇ ಗೊತ್ತಾಗ್ತಾ ಇಲ್ಲ.


ಏಕೆಂದರೆ ನಳದ ಜೋಡಣೆಯ ಸಲುವಾಗಿ ರಸ್ತೆ ಬದಿ ಅಗೆದು ಪೈಪನ್ನು ಹಾಕಿ ಮುಚ್ಚಲಾಗಿದೆ, ಆದರೆ ರಸ್ತೆ ಮೇಲಿದ್ದ ಮಣ್ಣು ಹಾಗೆಯೇ ಇದ್ದು, ಅದು ಮಳೆ ಬಂದಾಗ ಕೆಸರಾಗಿ ವಾಹನಗಳು ಜಾರುತ್ತಿವೆ ಇದರಿಂದ ಅನಾಹುತಗಳಾಗುವ ಸಂಭವ ಬಹಳ ಇರುತ್ತದೆ. ದಿನಾಲೂ ಬೆಳಗ್ಗೆ ಎಲ್ಲಾ ಶಾಲೆಗಳ ವಾಹನಗಳು ಇದೇ ರಸ್ತೆಯಿಂದ ಬರುತ್ತವೆ. ಅಂದರೆ ಚರ್ಚ್ ಮುಂದಿರುವಂತಹ ರಸ್ತೆ ಹಾಗೂ ಬಸವ ಉದ್ಯಾನವನದಿಂದ ಆದರ್ಶ ಶಾಲೆಗೆ ಹೋಗುವ ರಸ್ತೆ ಪೂರ್ತಿ ಹಾಳಾಗಿದ್ದು





ಮಣ್ಣಿನ ರಸ್ತೆಯಾಗಿ ಪರಿವರ್ತನೆಗೊಂಡಿದೆ.

ಸಾಯಿ ನಗರ ಮತ್ತು ವೈಭವ ನಗರಗಳಲ್ಲಿ ಡಾಂಬರೀಕರಣ ಅಥವಾ ಸಿ ಸಿ ರಸ್ತೆನೆ ಇಲ್ಲ ಎಲ್ಲವೂ ಕೂಡ ಮಣ್ಣಿನ ರಸ್ತೆನೆ ಆಗಿವೆ. ಇದರಿಂದ ಬಹಳ ತೊಂದರೆಗಳಾಗುತ್ತಿದೆ, ಇದರಿಂದ ವೃದ್ಧರು ಬೆಳಿಗ್ಗೆ ಎದ್ದು ವಾಕಿಂಗ್ ಮಾಡಲು ಹೋಗಲು ಅವರಿಗೆ ಬಹಳ ಅನಾನುಕೂಲವಾಗುತ್ತಿದೆ. ಇಲ್ಲಿ ನೂರಾರು ಮನೆಗಳಿದ್ದು ಇಲ್ಲಿ ಗಟಾರದ ವ್ಯವಸ್ಥೆ ಕೂಡಾ ಇಲ್ಲ. ಇಲ್ಲಿ ಯಾವ ವ್ಯವಸ್ಥೆ ಇಲ್ಲದಿದ್ದರೂ ಕೂಡ ಪುರಸಭೆಯವರು ತೆರಿಗೆ ಮಾತ್ರ ವಸೂಲಿ ಮಾಡುತ್ತಾರೆ, ಇದರಿಂದ ತಕ್ಷಣ ಪುರಸಭೆಯವರು ಎಚ್ಚೆತ್ತುಕೊಂಡು ಇದರ ಕಡೆ ಗಮನಹರಿಸಿ ಯಾವುದೇ ಅನಾಹುತಗಳು ಆಗುವುದಕ್ಕೆ ಮುಂಚೆ ಎಚ್ಚೆತ್ತುಕೊಳ್ಳಬೇಕು.

**ವರದಿ ವಿಠ್ಠಲ ಖೋಕಾಟೆ**



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ಶ್ರೀ ಜೆ. ಬಿ. ನರಸಣ್ಣವರ ಅವರು " ಕರುನಾಡ ಕಂದ " ಪತ್ರಿಕೆ ಓದುತ್ತಿರುವ ಸಂದರ್ಭ.




ಸುರೇಶ್ ಪತ್ತಾರ
ಶೇಡಬಾಳ ಪಟ್ಟಣ ಪಂಚಾಯತಿಯ ಮುಖ್ಯ ಅಧಿಕಾರಿಗಳು ಅವರು
ಕರುನಾಡ ಕಂದ ಪತ್ರಿಕೆಯೊಂದಿಗೆ.
ತಾಲ್ಲೂಕು. ಕಾಗವಾಡ
ಜಿಲ್ಲೆ. ಬೆಳಗಾವಿ

## ನನ್ನವಳು



ನನ್ನವಳು ನನ್ನೆದೆಯೂರಿನ ಬೆಳದಿಂಗಳು
ಅವಳೆಂದರೆ ಬಲುಸೊಗಸು
ಜೇನು ಬೆರೆಸಿದ ಹಲಸು
ಹಣ್ಣಾಗೊವರೆಗೆ ಕಣ್ಣಾಗಿ ನನ್ನನೇ
ಕಾಯುವಳು

ನಕ್ಷತ್ರವ ಕಳಚಿ ತಂದು
ಅಂಗೈಯಲಿಡುವವಳು
ಅದರ ಬೆಳಕಿನಲೆ ಜೊತೆಗೆ ಹೆಜ್ಜೆ ಹಾಕಿ ನಡೆಸುವಳು
ನನ್ನ ನೋವ ಮರೆಸಿ ಎದೆಯ ಪಟ್ಟದರಸಿಯಾಗಿಹಳು
ಹನಿಗಣ್ಣಾಗದ ಹಣೆಬರಹಕೆ ಹಣೆಗಣ್ಣನ ಬೇಡುವಳು
ಮೆಲುದನಿಯ ಮಂತ್ರಾಕ್ಷತೆಯ ಮುತ್ತ ಪೋಣಿಸುವಳು

ತುಟಿಯ ಮೇಲೆ ನಗೆಯ ಮಿಂಚು ಮಾಸಲು ಬಿಡದವಳು
ಹನಿಮಳೆಯಲು ಬಿರುಬಿಸಿಲಲು ಕೈ ಬಿಡದವಳು
ಅವಳೇ ನನ್ನವಳು ನನ್ನೆದೆಯ ಹೊನ್ನಾಡನಾಳುವಳು.

**– ರಂಗರಾಜು ಎ ಸಿ, ಜಟ್ಟಿ ಅಗ್ರಹಾರ, ಕೊರಟಗೆರೆ.**

# ಮೈಲೇಶ್ವರ ಗ್ರಾಮದ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವ






ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಸುಕ್ಷೇತ್ರ ಮೈಲೇಶ್ವರ ಗ್ರಾಮದ ಶ್ರೀ ಆರಾಧ್ಯ ದೇವರಾದ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ದಿ. 11. 8. 2025 ರ ಸೋಮವಾರದಂದು ಸಾಯಂಕಾಲ 5:00 ಗಂಟೆಗೆ ಜೋಡು ಪಲ್ಲಕ್ಕಿ ಉತ್ಸವ ಪ್ರತಿ ವರ್ಷದಂತೆ ಈ ವರ್ಷವೂ ಸಕಲ ವಾದ್ಯಗಳೊಂದಿಗೆ ಅತಿ ವಿಜೃಂಭಣೆಯಿಂದ ನೆರವೇರುವುದು.

ಸದ್ಭಕ್ತರು ಈ ಜಾತ್ರೆಯಲ್ಲಿ ಪಾಲ್ಗೊಂಡು ಬಸವೇಶ್ವರ ಕೃಪೆಗೆ ಪಾತ್ರರಾಗಬೇಕೆಂದು ಮೈಲೇಶ್ವರ ಗ್ರಾಮದ ಸಮಸ್ತ ಗ್ರಾಮಸ್ಥರು ಪರವಾಗಿ ತಮ್ಮೆಲ್ಲರಿಗೂ ಹಾರ್ದಿಕವಾಗಿ ಸ್ವಾಗತವನ್ನು ಕೋರುತ್ತೇವೆ, ಈ ಜಾತ್ರಾ ನಿಮಿತ್ಯವಾಗಿ ಶ್ರೀ ಕಲಬುರಗಿಯ ಶರಣಬಸವೇಶ್ವರ ಮಹಾತ್ಮೆ ಪುರಾಣವನ್ನು ದಿನಾಂಕ 28.7.2025 ರಿಂದ ದಿನಾಂಕ 27. 8. 2025 ವರೆಗೆ ಶ್ರೀ ಸಿಂಧನೂರು ತಾಲೂಕಿನ ದದ್ದಗಿ ಗ್ರಾಮದ ಶ್ರೀ ಬಸವಲಿಂಗಯ್ಯ ಹಾಗೂ ಅವರ ತಬಲಾಸಾಥಿಗಳೊಂದಿಗೆ ಪ್ರತಿ ದಿನ ರಾತ್ರಿ 7:30 ರಿಂದ 8:30ರ ವರೆಗೆ ಪುರಾಣ ಕಾರ್ಯಕ್ರಮ ಇರುತ್ತದೆ, ಪುರಾಣದ ನಂತರ ಪ್ರಸಾದ ವ್ಯವಸ್ಥೆ ಕೂಡಾ ಇರುತ್ತದೆ. ಸುತ್ತಮುತ್ತಲಿನ ಗ್ರಾಮದ ಹಾಗೂ ದೂರದ ಊರುಗಳಿಂದ ಆಗಮಿಸುವ ಬಸವೇಶ್ವರನ ಸಕಲ ಸದ್ಭಕ್ತರಿಗೆ ಮೈಲೇಶ್ವರ ಗ್ರಾಮದ ಗ್ರಾಮಸ್ಥರು ಹಾಗೂ ಬಸವೇಶ್ವರ ಕಮಿಟಿಯವರು ಸ್ವಾಗತ ಕೋರಿದ್ದಾರೆ.

**ವರದಿಗಾರರು ಸಂಗಮೇಶ್ ಸಿ. ಚೌದ್ರಿ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ಚಾರ್ವಾಕ...!?

## ಚಾರ್ವಾಕ ಅಂದರೆ ಯಾರು? ಹಿನ್ನೆಲೆ ಏನು?



1.ಪಾಪ– ಪುಣ್ಯ, ಸ್ವರ್ಗ–ನರಕ, ಮೇಲು– ಕೀಳು... ಪರಲೋಕ ಇದೆ. ಪುನರ್ಜನ್ಮ ಇದೆ. ಆತ್ಮವಿದೆ. ಪರಮಾತ್ಮ ಇದೆ. ಈ ಭೂಮಿ ಮೇಲೆ ಇರುವದೆಲ್ಲವೂ ಆ ದೇವರ ಕೈಯಲ್ಲಿದೆ ಎಂದು ವೈದಿಕ–ಬ್ರಾಹ್ಮಣ ಧರ್ಮ ಹೇಳುತ್ತದೆ.

2. ಇಲ್ಲ... ದೇವರಿಲ್ಲ! ಪರಮಾತ್ಮ ಇಲ್ಲ...! ಅಜರಾಮರವಾದ ಆತ್ಮ ಇದೆ ಎಂದು ಜೈನ ಧರ್ಮ ಹೇಳುತ್ತದೆ.

3. ದೇವರು ಇಲ್ಲ ದೆವ್ವನೂ ಇಲ್ಲ! ನಿರ್ವಾಣ ಇದೆ ಎಂದು ಬೌದ್ಧ ಧರ್ಮ ಹೇಳುತ್ತದೆ.

ಈ ಮೇಲಿನ ಮೂರು ಧರ್ಮಗಳು ಒಂದೊಂದು ರೀತಿ ಬೇರೆ ಬೇರೆಯಾಗಿಯೇ ಹೇಳುತ್ತವೆ. ಹಾಗಾದರೆ ಈ ಮೂರರಲ್ಲಿ ಯಾವ ಧರ್ಮ ನಿಜ ಹೇಳುತ್ತಿದೆ...?

4. ಇಲ್ಲ... ಹಾಗೇನೂ ಇಲ್ಲ! ಎಲ್ಲಾ ಸುಳ್ಳು! ದೇವರು ಇಲ್ಲ, ಆತ್ಮ ಇಲ್ಲ, ಪರಮಾತ್ಮನೂ ಇಲ್ಲ. ಸ್ವರ್ಗ–ನರಕ ಇದು ಯಾವುದೂ ಇಲ್ಲ. ಪರಲೋಕ, ಪುನರ್ಜನ್ಮ, ಕರ್ಮಕಾಂಡ... ಇದು ಯಾವುದೂ ಸಹ ಇಲ್ಲವೇ ಇಲ್ಲ! ಎಂದು ಚಾರ್ವಾಕ ಹೇಳುತ್ತದೆ.

**ಈ ಚಾರ್ವಾಕ ಅಂದರೆ ಯಾರು? ಚಾರ್ವಾಕ ಸಿದ್ಧಾಂತದ ಹಿನ್ನೆಲೆ ಏನು? ಚಾರ್ವಾಕ ಪದದ ಅರ್ಥ ಮತ್ತು ಇತಿಹಾಸ ಏನು ?:** ಚಾರ್... (ಚಾರು) ಅಂದರೆ ನಾಲ್ಕು ಅಥವಾ ಮೋಹಕ; ವಾಕ್ ಅಂದರೆ ಮಾತು; ಚಾರ್ವಾಕ ಅಂದರೆ ಮನಮೋಹಕವಾದ ನಾಲ್ಕು ಮಾತುಗಳನ್ನಾಡುವವ ಎಂದರ್ಥ. ಮಣ್ಣು ನೀರು ಗಾಳಿ ಬೆಂಕಿ... ಎಂಬ ಈ ನಾಲ್ಕು ಮಹಾಭೂತಗಳ ಮೇಲೆ ನಂಬಿಕೆ ಇಟ್ಟವನೇ ಚಾರ್ವಾಕ. ಚಾರ್ವಾಕ ಅಂದರೆ ಅದೊಂದು ಧರ್ಮ ಅಲ್ಲ. ಚಾರ್ವಾಕ ಅಂದರೆ ಒಬ್ಬ ವ್ಯಕ್ತಿ ಅಲ್ಲ. ಚಾರ್ವಾಕ ಅಂದರೆ ನಾಸ್ತಿಕ. ಚಾರ್ವಾಕ ಅಂದರೆ ಎಚ್ಚರಗೊಂಡ ತಾರ್ಕಿಕವಾದಿ ಮಹಾ ಚಿಂತಕ. ಚಾರ್ವಾಕ ಅಂದರೆ ಈ ನಮ್ಮ ದೇಶದ ನೆಲದಲ್ಲಿ ಹುಟ್ಟಿ ಬಂದ ವಿಶಿಷ್ಟವಾದ – ವಿಭಿನ್ನವಾದ ವೈಚಾರಿಕ ವಿಚಾರಧಾರೆಯೇ ಚಾರ್ವಾಕ (ದರ್ಶನ–)ಸಿದ್ಧಾಂತ...



ಜಿ.ಎಲ್.ನಾಗೇಶ್
ಧನ್ನೂರ (ಆರ್.)
ಬಸವಕಲ್ಯಾಣ ತಾಲೂಕು
ಬೀದರ್ ಜಿಲ್ಲೆ 585330
ಮೊ.9945686234
glnagesh1985
@gmail.com

ಈ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಎರಡು ಸಂಸ್ಕೃತಿಗಳು ಬೆಳೆದು ಬಂದಿವೆ. ಬ್ರಾಹ್ಮಣ ಸಂಸ್ಕೃತಿ ಮತ್ತು ಶ್ರಮಣ ಸಂಸ್ಕೃತಿ. ಶ್ರಮಣ ಸಂಸ್ಕೃತಿಯೇ ಚಾರ್ವಾಕ. ಚಾರ್ವಾಕ ವಿಚಾರಧಾರೆಯನ್ನು ಕೊಲೆಗೈಯಲು ಪ್ರಯತ್ನಿಸಿದ ದುಷ್ಟ ಪಾಪಿಗಳು ಯಾರು...!? ದುಡಿದು ತಿನ್ನಲಾಗದ ದುಷ್ಟ ಪಾಪಿಗಳ ಪರಂಪರೆ ಯಾವಾಗ ಈ ನೆಲದಲ್ಲಿ ಹುಟ್ಟಿಕೊಂಡಿತ್ತೋ ಆವಾಗಿನಿಂದಲೇ ಈ ಚಾರ್ವಾಕ ಪರಂಪರೆ ಸಹ ಹುಟ್ಟಿಕೊಂಡಿತ್ತು ಎಂದು ಹೇಳಬಹುದು.

ಪ್ರಾಚೀನ ಕಾಲದಲ್ಲಿ ಮನುಷ್ಯ ಪ್ರಾಣಿಗಳಂತೆ ಕಾಡಿನಲ್ಲಿ ವಾಸಿಸುತ್ತಿದ್ದ. ಸೂರ್ಯ ಹೇಗೆ ಉದಯಿಸುತ್ತಾನೆ? ಕತ್ತಲೆ ಏಕೆ ಆವರಿಸುತ್ತದೆ? ಮಳೆ ಹೇಗೆ ಸುರಿಯುತ್ತದೆ? ಮಿಂಚು– ಗುಡುಗು ಹೇಗೆ ಉಂಟಾಗುತ್ತದೆ ? ಮಳೆ, ಬಿಸಿಲು, ಚಳಿ... ಹವಾಮಾನ– ಋತುಮಾನ ಹೇಗೆ ಬದಲಾಗುತ್ತದೆ? ರೋಗಗಳು ಹೇಗೆ ಉಂಟಾಗುತ್ತವೆ? ಸಾವು ಹೇಗೆ ಸಂಭವಿಸುತ್ತದೆ...? ಎಂಬುದರ ಬಗ್ಗೆ ಅರಿವಿರಲಿಲ್ಲ. ಪ್ರಕೃತಿ ಆರ್ಭಟ, ಮಿಂಚು ಗುಡುಗು, ಚಂಡಮಾರುತ, ಪ್ರವಾಹ, ಭೂಕಂಪದಂತಹ ಪ್ರಕೃತಿ ವಿಕೋಪಗಳನ್ನು ಕಂಡು ಮನುಷ್ಯ ಭಯ– ಭೀತನಾಗುತ್ತಿದ್ದ.

ಮನುಷ್ಯನ ಭಯಕ್ಕೆ ಮೂಲ ಕಾರಣ ಅಜ್ಞಾನ. ಅಜ್ಞಾನದ ಪರಿಕಲ್ಪನೆಯೇ ದೇವರು...!

ಆಕಾಶದಿಂದ ಭೂಮಿಗೆ ಸಿಡಿಲು ಏಕೆ ಅಪ್ಪಳಿಸುತ್ತದೆ ಎಂದು ಕೇಳಿದಕ್ಕೆ ಅಜ್ಞಾನಿ ಆಸ್ತಿಕ– " ದೇವರು ಕೋಪಿಸಿಕೊಂಡಿದ್ದರಿಂದ ಆಕಾಶದಿಂದ ಭೂಮಿಗೆ ಸಿಡಿಲು ಬೀಳಿಸುತ್ತಾನೆ, ಚಂಡಮಾರುತದ ಧಾರಾಕಾರವಾದ ಭಯಂಕರ ಮಳೆ ಸುರಿಸಿ ಪ್ರವಾಹ ಸೃಷ್ಟಿಸಿ ಜನ– ಜಾನುವಾರುಗಳಿಗೆ ತೊಂದರೆ ಉಂಟು ಮಾಡುತ್ತಾನೆ " ಎಂದು ಹೇಳಿದ. "ಮನುಷ್ಯರ ರೋಗಗಳಿಗೆ ಕಾರಣ?" ಕೇಳಿದ್ದಕ್ಕೆ ಪೂರ್ವಜನ್ಮದ ಪಾಪ ಕರ್ಮಗಳೆಂದು ಹೇಳಿದ. ಮನುಷ್ಯರ ಎಲ್ಲಾ ಆಗುಹೋಗುಗಳಿಗೆ ಮೂಲ ಕಾರಣ ದೇವರೆಂದು ಹೇಳುತ್ತಲೇ ಬಂದ ಮೂರ್ಖ ಜನ ನಂಬುತ್ತಲೇ ಬಂದರು.

ಮನುಷ್ಯ ಮೊದಲಿಗೆ ಪ್ರಕೃತಿಯನ್ನು ದೇವರೆಂದು ಪೂಜಿಸಿದ. ಅನಂತರ ಏನು ನಡೆಯಿತು? ದುಡಿದು ತಿನ್ನಲಾಗದ ದುಷ್ಟರೆಲ್ಲರೂ ಸೇರಿಕೊಂಡು ತಮ್ಮ ಸ್ವಾರ್ಥ ಸಾಧನೆಗಾಗಿ ಕಲ್ಲು ಮಣ್ಣಿನ ಕೊಳಕು ದೇವರುಗಳು, ವೇದ–ಪುರಾಣಗಳು, ಕಟ್ಟುಕಥೆಗಳು, ಮೇಲು– ಕೀಳು, ವರ್ಣ–ಅಸ್ಪೃಶ್ಯತೆ, ಸ್ವರ್ಗ – ನರ್ಕ, ಪಾಪ– ಪುಣ್ಯ... ಇತ್ಯಾದಿ ಮನಸ್ಸಿಗೆ ಬಂದಿದ್ದೆಲ್ಲವನ್ನೂ ರಚಿಸಿ ಇದೆಲ್ಲಾ ದೇವರ ಸೃಷ್ಟಿ ಎಂದು ಸುಳ್ಳುಗಳನ್ನು ಬೊಗಳುತ್ತಾ ಅಮಾಯಕ ಮುಗ್ಧ ಜನರನ್ನು ಮರಳು ಮಾಡುತ್ತಾ ಬಂದರು. ದುರ್ಬಲರನ್ನು ಮಹಿಳೆಯರನ್ನು ತಮ್ಮ ನಿಯಂತ್ರಣದಲ್ಲಿ ಇರಿಸಿಕೊಂಡು ಕಾಣದ ದೇವರುಗಳನ್ನೇ ಗೂಂಡಾಗಳನ್ನಾಗಿಸಿ ಧಾರ್ಮಿಕ ಭಯೋತ್ಪಾದನೆ ನಡೆಸುತ್ತಾ ಅಟ್ಟಹಾಸದಿಂದ ಮೆರೆಯ ತೊಡಗಿದರು. ಅಮಾಯಕರು, ಮುಗ್ಧರು, ಮಹಿಳೆಯರು ಧಾರ್ಮಿಕ ಭಯೋತ್ಪಾದನೆಗೆ ಒಳಗಾಗಿ ಅಜ್ಞಾನದ ಅಂಧಕಾರದಲ್ಲಿ ಮುಳುಗಿ ತತ್ತರಿಸಿ ಹೋಗುತ್ತಿದ್ದಾಗ ಪ್ರತಿರೋಧವಾಗಿ ಹುಟ್ಟಿಕೊಂಡ ವಿಚಾರಧಾರೆಯೇ ನಾಸ್ತಿಕವಾದ, ಭೌತಿಕವಾದ, ತಾರ್ಕಿಕವಾದ, ವಿಕಾಸವಾದವೇ ಈ ಚಾರ್ವಾಕ ದರ್ಶನ.

**ಚಾರ್ವಾಕ ದರ್ಶನದ ಸಾರಾಂಶ:** ದೇವರು... ದೇವರಲ್ಲಿ ಎರಡು ವಿಧಗಳಿವೆ. ಎರಡು ಪ್ರಕಾರದ ದೇವರುಗಳಿವೆ. ಒಂದು ಪ್ರಕಾರದ ದೇವರುಗಳನ್ನು ಆಸ್ತಿಕರು ನಂಬುತ್ತಾರೆ. ಮತ್ತೊಂದು ಪ್ರಕಾರ ದೇವರುಗಳನ್ನು ನಾಸ್ತಿಕರು ನಂಬುತ್ತಾರೆ. ಕಣ್ಣಿಗೆ ಕಾಣುವ ದೇವರುಗಳನ್ನು ನಾಸ್ತಿಕರು ನಂಬಿದರೆ, ಕಣ್ಣಿಗೆ ಕಾಣದ ದೇವರುಗಳನ್ನು ಆಸ್ತಿಕರು ನಂಬುತ್ತಾರೆ.

1. ಕಣ್ಣಿಗೆ ಕಾಣಿಸುವ ದೇವರುಗಳು.

2. ಕಣ್ಣಿಗೆ ಕಾಣದ ಇಲ್ಲದ ದೇವರುಗಳು. ಸೂರ್ಯ ಚಂದ್ರ ಮರ ಗಿಡ ನೆಲ ಜಲ ನದಿ ಬೆಟ್ಟ ಗುಡ್ಡ... ಕಣ್ಣಿಗೆ ಕಾಣುವ ಪ್ರಕೃತಿಯೇ ನಿಜವಾದ ದೇವರಾಗಿದೆ. ಈಶ್ವರ ಅಲ್ಲಾ ಗಾಡ್... ಮಾನವ ನಿರ್ಮಿತ ಕಲ್ಲು, ಮಣ್ಣಿನ ದೇವರುಗಳಿಗೆ ಹೆದರುವ ಅವಶ್ಯಕತೆ ಇಲ್ಲ. ಯಾಕೆ ಅಂದರೆ ಇಂತಹ ದೇವರುಗಳಿಗೆ ನಂಬಿ ಪೂಜಿಸುವ– ಆರಾಧಿಸುವ ವ್ಯಕ್ತಿಗಳಿಗೂ ಕಾಯಿಲೆ ಬರುತ್ತದೆ. ಪೂಜಿಸದೆ ಇರುವ ವ್ಯಕ್ತಿಗಳಿಗೂ ಸಹ ಕಾಯಿಲೆ ಬರುತ್ತದೆ. ಕಾಯಿಲೆ ಕೆಟ್ಟವರಿಗೂ ಬರುತ್ತದೆ ಒಳ್ಳೆಯವ–ರಿಗೂ ಬರುತ್ತದೆ. ಕಾಯಿಲೆ ದೇವರುಗಳಿಂದ ಬರುವುದಿಲ್ಲ. ಪ್ರಕೃತಿಯ ಅಸಮತೋಲನದಿಂದಾಗಿ ಬ್ಯಾಕ್ಟೀರಿಯಾ– ವೈರಸ್ ಗಳಿಂದ ಕಾಯಿಲೆ ಬರುತ್ತವೆ ದೇವರಿಂದಲ್ಲ...! ಆದ–್ದರಿಂದ ಕಲ್ಲು ಮಣ್ಣಿನ ಕೊಳಕು ದೇವರಿಗಳಿಗೆ ಪೂಜಿಸುವ– ಆರಾಧಿಸುವ ಅಗತ್ಯ ಇಲ್ಲ. ಆತ್ಮ... ಪರಮಾತ್ಮ ಕಣ್ಣಿಗೆ ಕಾಣಿಸುವುದಿಲ್ಲ. ಪ್ರತ್ಯಕ್ಷವಾಗಿ ಕಣ್ಣಿಗೆ ಕಂಡಿದ್ದನ್ನು, ತ್ವಚೆಗೆ ಸ್ಪರ್ಶಿಸಿದ್ದನ್ನು, ಕಿವಿಗೆ ಕೇಳಿಸಿದ್ದನ್ನು ಸತ್ಯವನ್ನೇ ನಂಬಬೇಕು. ದೇಹವೇ ಆತ್ಮವಾಗಿದೆ. ಮರಣವೇ ಮೋಕ್ಷವಾಗಿದೆ. ಸ್ವರ್ಗ–ನರಕ ಪರಲೋಕದಲ್ಲಿ ಇದೆ ಎಂದು ಹೇಳುವುದು ಅರ್ಥ ಇಲ್ಲದ ನಂಬಿಕೆಯಾಗಿದೆ. ಯಾಕೆ ಅಂದರೆ ಪರಲೋಕಕ್ಕೆ ಹೋಗಿ ಅದನ್ನು ಅನುಭವಿಸಿ ಮರಳಿ ಬಂದವರು ಈ ಲೋಕದಲ್ಲಿ ಯಾರೂ ಇಲ್ಲ. ಇರುವುದು ಇದು ಒಂದೇ ಲೋಕ. ಇರುವುದು ಇದು ಒಂದೇ ಬದುಕು. ಬದುಕು ಮತ್ತೊಮ್ಮೆ ಸಿಗಲಾರದು. ಅದಕ್ಕಾಗಿ ಬದುಕಿರುವವರೆಗೂ ಸುಖವಾಗಿ, ಸಂತೋಷವಾಗಿ, ಆನಂದವಾಗಿ, ಬದುಕಿ ಬಾಳಬೇಕು ಎಂದು ಹೇಳುವುದು ಚಾರ್ವಾಕ ಅನುಯಾಯಿಗಳಾದ ಇಂದಿನ ತಾರ್ಕಿಕ, ಭೌತಿಕ,ನಾಸ್ತಿಕ, ವಾಸ್ತವಿಕವಾದಿಗಳೆಲ್ಲರ ವಿಚಾರವಾಗಿದೆ.

**ವಿಶೇಷ ಸೂಚನೆ:** ಚಾರ್ವಾಕ ವಿಚಾರಧಾರೆಯ ಇಂದಿನ ನಾಸ್ತಿಕರಿಂದ ಪ್ರಪಂಚಕ್ಕೆ ಯಾವುದೇ ರೀತಿ ಹಾನಿ ಉಂಟಾಗಿಲ್ಲ. ಆದರೆ ಆಸ್ತಿಕರ ದೇವರು – ಧರ್ಮಗಳಿಂದಾಗಿ ಪ್ರಪಂಚದಲ್ಲಿ ಅನ್ಯಾಯ, ಅತ್ಯಾಚಾರ ನಡೆದಿವೆ. ಯುದ್ಧಗಳು ನಡೆದಿವೆ, ರಕ್ತದ ಕಾಲುವೆ ಹರಿದಿದೆ, ಲಕ್ಷಾಂತರ ಜನರ ಮಾರಣ ಹೋಮ ನಡೆದಿದೆ ಮನುಕುಲ ಉಳಿಯಬೇಕು, ಬೆಳೆಯಬೇಕು ಅಂದರೆ ಪ್ರಪಂಚದ ಮನುಷ್ಯರೆಲ್ಲರೂ ಜಾತಿ, ಧರ್ಮ ಎಂಬ ಅನಿಷ್ಟವನ್ನು ಮರೆತು ನಾವೆಲ್ಲರೂ ಬೇರೆ ಬೇರೆ ಜಾತಿ ಧರ್ಮದವರು ಅಲ್ಲ, ನಾವೆಲ್ಲರೂ ಒಂದೇ ಮನುಷ್ಯ ಜಾತಿಗೆ ಸೇರಿದವರು ಎಂದು ಅರಿತುಕೊಳ್ಳಬೇಕು, ಆಗ ಮಾತ್ರ ಮನುಕುಲ ಉಳಿಯುತ್ತದೆ– ಬೆಳೆಯುತ್ತದೆ. ಈ ಲೇಖನದಲ್ಲಿ ಉಲ್ಲೇಖಿಸಿದ ವಿಚಾರಗಳು ನನ್ನ ವೈಯಕ್ತಿಕವಾದ ವಿಚಾರಗಳಾರುವುದಿಲ್ಲ. ಈ ಹಿಂದೆ ಅನೇಕ ಜನ ಮಹಾ ಚಿಂತಕರು ಚರ್ಚಿಸಿದ ವಿಚಾರಗಳನ್ನೇ ನಾನು ಇಲ್ಲಿ ನನ್ನದೇ ಆದ ಶೈಲಿಯಲ್ಲಿ ಪ್ರತಿಪಾದಿಸಿರುತ್ತೇನೆ. ಇಲ್ಲಿ ಯಾವುದೇ ಜಾತಿ– ಧರ್ಮದ ಜನಗಳ ನಂಬಿಕೆಗಳಿಗೆ ಆಘಾತ ಉಂಟು ಮಾಡುವ ದುರುದ್ದೇಶ ಇರುವುದಿಲ್ಲ. ಮನುಷ್ಯನ ವ್ಯಕ್ತಿತ್ವ ವಿಕಾಸನಕ್ಕೆ ಮತ್ತು ವಿಜ್ಞಾನದ ಬೆಳವಣಿಗೆಗೆ ಅಡ್ಡಿ ಉಂಟು ಮಾಡುತ್ತಿರುವ ಧಾರ್ಮಿಕ ಭಯೋತ್ಪಾದನೆ, ಕಂದಾಚಾರ, ಅಂಧಶ್ರದ್ಧೆ, ಅಂಧವಿಶ್ವಾಸ, ಅಂಧಾನುಕರಣೆ, ಅಂಧಭಕ್ತಿ, ಮೂಢನಂಬಿಕೆಗಳು ಅಳಿಸಿ ಜ್ಞಾನದ ಜ್ಯೋತಿ ಅರಳಲಿ–ವಿಜ್ಞಾನ ಬೆಳೆಯಲಿ ಎಂಬುವುದೇ ಈ ಲೇಖನದ ಆಶಯವಾಗಿರುತ್ತದೆ. ಈ ಲೇಖನವನ್ನು ತಾಳ್ಮೆಯಿಂದ ಓದಿ ಮುಗಿಸಿದ ತಮ್ಮೆಲ್ಲರಿಗೂ ನನ್ನ ಅನಂತ ಧನ್ಯವಾದಗಳು ಸಲ್ಲುತ್ತವೆ. ತಮ್ಮ ಅಮೂಲ್ಯವಾದ ಸಲಹೆ, ಸೂಚನೆ, ವಿಮರ್ಶೆಗೆ ಸದಾ ಸ್ವಾಗತ ಕೋರುತ್ತೇನೆ. ಥ್ಯಾಂಕ್ ಯೂ ಸೋ ಮಚ್.. ನಮಸ್ಕಾರ...




ಬಳ್ಳಾರಿ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ. ಜೆ. ಅವರೊಂದಿಗೆ "ಕರುನಾಡ ಕಂದ" ಪತ್ರಿಕೆ.

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ವಿದ್ಯಾರ್ಥಿಗಳಿಗೆ ಅಸಾಧ್ಯವಾದುದು ಯಾವುದೂ ಇಲ್ಲ, ಮನಸ್ಸು ಮಾಡಿದರೆ ಎಲ್ಲವೂ ಸಾಧಿಸಬಹುದು :ಚಂದ್ರಕಾಂತ ಶಾಬಾದಕರ್

## "ಸಪ್ತಗಿರಿ ಪದವಿ ಪೂರ್ವ ವಿಜ್ಞಾನ ಕಾಲೇಜಿನ ಐಐಟಿ, ಎನ್ಐಟಿ, ನೀಟ್ ಸಾಧಕ ವಿದ್ಯಾರ್ಥಿಗಳಿಗೆ ಸತ್ಕಾರ"

**ಬೀದರ್** : ಸಪ್ತಗಿರಿ ಪದವಿ ಪೂರ್ವ ಕಾಲೇಜಿನಲ್ಲಿ ಆಲೋಕ ಸಂತೋಷಕುಮಾರ ಜೆಇಇ ಅಡ್ವಾನ್ಸ್‌ನಲ್ಲಿ ಎಐಆರ್-477 ರಾಂಕ್ ಪಡೆದು ಚೆನ್ನೈ ಐಐಟಿ ನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿ ಹಾಗೂ ಸಂದೀಪ ಎಮ್. ಎನ್ಐಟಿ ತಿರುಚರಾಪಲ್ಲಿ, ಅಭಿಷೇಕ ಎಸ್. ಎನ್ಐಟಿ ತಿರುಚರಾಪಲ್ಲಿ, ಭವಾನಿ ವಿ. ಎನ್ಐಟಿ ಔರಂಗಬಾದ, ಮಾರುತಿ ವಿ. ಎನ್ಐಟಿ ಸುರತಕಲ್ ಅದೇ ರೀತಿ ನೀಟ್‌ನಲ್ಲಿ ರ್ಯಾಂಕ್ ಪಡೆದ 10 ವಿದ್ಯಾರ್ಥಿಗಳನ್ನು ಮತ್ತು ಮಾರ್ಚ್-2025ರ ವಾರ್ಷಿಕ ಪರೀಕ್ಷೆಯಲ್ಲಿ ಶೇ. 95ರಷ್ಟು ಪಡೆದ ವೈಷ್ಣವಿ ಎಸ್. ಇವರುಗಳಿಗೆ ಲ್ಯಾಪ್‌ಟಾಪ್ ನೀಡಿ ದಿ. 12-07-2025 ರಂದು ಸತ್ಕಾರ ಸಮಾರಂಭ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀ ಚಂದ್ರಕಾಂತ ಶಾಬಾದಕರ್, ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೀದರ ಇವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ " ವಿದ್ಯಾರ್ಥಿಗಳು ಓದುವುದರಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು, ಕಷ್ಟಪಟ್ಟು ಓದಬೇಡಿ ಇಷ್ಟಪಟ್ಟು ಓದಬೇಕು, ವಿದ್ಯಾರ್ಥಿಗಳಿಗೆ ಅಸಾಧ್ಯವಾದುದು ಯಾವುದೂ ಇಲ್ಲ, ಮನಸ್ಸು ಮಾಡಿದರೆ ಎಲ್ಲವೂ ಸಾಧಿಸಬಹುದು ಎಂದು ಕರೆ ನೀಡುತ್ತಾ, ಸತತ ಪ್ರಯತ್ನದಿಂದ ಗುರಿ ತಲುಪಬಹುದು ಮತ್ತು ವಿದ್ಯಾರ್ಥಿಗಳು ಮೊಬೈಲ್‌ದಿಂದ ದೂರವಿದ್ದು ಜೀವನವನ್ನು ಸುಂದರವಾಗಿ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಅದೇ ರೀತಿ ಅತಿಥಿಗಳಾಗಿ ಆಗಮಿಸಿದ ಶ್ರೀ ಪ್ರಭು ಎಸ್. ಪ್ರಾಂಶುಪಾಲರು, ಸಿದ್ಧಾರ್ಥ ಪದವಿ ಪೂರ್ವ ಕಾಲೇಜು ಹಾಗೂ ಬೀದರ ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷರು ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ " ವಿದ್ಯಾರ್ಥಿಗಳು ಯಾವಾಗಲೂ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಅದರಲ್ಲಿ ಅಬ್ದುಲ್ ಕಲಾಂ, ಡಾ॥ ಬಿ.ಆರ್. ಅಂಬೇಡ್ಕರ್, ಸ್ವಾಮಿ ವಿವೇಕಾನಂದ ಅವರಂತೆ ಆಗಲು ಪ್ರಯತ್ನಿಸಬೇಕು ಮತ್ತು ಕೆಸರಿನಲ್ಲಿ ಯಾವ ತರಹ ಕಮಲ ಅರಳುತ್ತದೆ ಅದೇ ತರಹ ಅರಳಬೇಕು. ನಮ್ಮ ಹಣೆಬರಹ ಯಾರೂ ಬದಲಿಸಲು





ಸಾಧ್ಯವಿಲ್ಲ. ನಾವೇ ಬದಲಾಯಿಸಬೇಕು, ಅದು ನಮ್ಮ ಶ್ರಮದಿಂದ ಸಾಧ್ಯ" ಎಂದು ತಿಳಿಸಿದರು.

ಇನ್ನೋರ್ವ ಅತಿಥಿಯಾದ ಶ್ರೀ ದಯಾನಂದ ಮಮದೆ ದೈಹಿಕ ಶಿಕ್ಷಕರು ಶ್ರೀ ಸಾಯಿ ಆದರ್ಶ ಪ್ರೌಢ ಶಾಲೆ ಹಾಗೂ ಅನುದಾನಿತ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷರು ರವರು ಮಕ್ಕಳನ್ನು ಉದ್ದೇಶಿಸಿ ಮಾತನಾಡಿ " ಸಪ್ತಗಿರಿ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ಮಕ್ಕಳಿಗೆ ವಿದ್ಯೆಯ ಜೊತೆಗೆ ನೈತಿಕ ಶಿಕ್ಷಣ ನೀಡುತ್ತಾ ಬೀದರ ಜಿಲ್ಲೆಯಲ್ಲಿ ಕಡಿಮೆ ಶುಲ್ಕದಲ್ಲಿ ಬಡಮಕ್ಕಳಿಗೆ ಜೆಇಇ. ನೀಟ್ ಹಾಗೂ 100% ರಷ್ಟು ಫಲಿತಾಂಶವನ್ನು ನೀಡುತ್ತಾ ಬರುತ್ತಿದ್ದ" ಎಂದು ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷೀಯ ಸ್ಥಾನವನ್ನು ವಹಿಸಿಕೊಂಡಂತಹ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಗೋವಿಂದ ಡಿ. ತಾಂದಳೆ ಅವರು ಪ್ರತಿ ವರ್ಷದಂತೆ ಈ ವರ್ಷವೂ ನಮ್ಮ ಸಂಸ್ಥೆ ಮಾರ್ಚ-2025ರ ಪರೀಕ್ಷೆಯಲ್ಲಿ 98.46 ರಷ್ಟು ಫಲಿತಾಂಶ ತಂದಿದ್ದು ಮತ್ತು ಈ ವರ್ಷ ಐಐಟಿ, ಎನ್ಐಟಿಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಅದೇ ರೀತಿ ಈ ವರ್ಷ ನೀಟ್‌ನಲ್ಲಿ 10 ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಪಡೆದು ಸರಕಾರಿ ಕೋಟಾದಲ್ಲಿ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ ಎಂದು ಲ್ಯಾಪ್ಟಾಪ್ ವಿತರಿಸಿ ಮಾತನಾಡಿ "ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮದಿಂದ ಓದಿ ಉತ್ತಮ ರ್ಯಾಂಕ್ ತರಲು ಪ್ರಯತ್ನಿಸಬೇಕು" ಎಂದು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀನಿವಾಸ ಡಿ. ತಾಂದಳೆ, ಕಾರ್ಯದರ್ಶಿ ಗೋಪಾಲ ಡಿ. ತಾಂದಳೆ ಮತ್ತು ಕಾಲೇಜಿನ ಗಣಿತ ಉಪನ್ಯಾಸಕರಾದ ಶ್ರೀ ಸಲಾಉದ್ದೀನ, ಕನ್ನಡ ಉಪನ್ಯಾಸಕರಾದ ಶ್ರೀ ಬಿರೇಶ ಯಾತನೂರ, ಶ್ರೀ ಡಾ॥ ಆಸಿಫ್, ಭೌತಶಾಸ್ತ್ರ ಉಪನ್ಯಾಸಕರಾದ ಆಸಿಫ್ ಅಲಿ, ಆಂಗ್ಲ ಉಪನ್ಯಾಸಕರಾದ ಶ್ರೀ ಸಾಗರ ಪಡಸಲೆ, ಗಣಿತ ಉಪನ್ಯಾಸಕರಾದ ಶ್ರೀ ಚಂದ್ರಕಾಂತ ಝಬಾಡೆ, ಕನ್ನಡ ಉಪನ್ಯಾಸಕಿಯರಾದ ಶ್ರೀಮತಿ ಮಮತಾ, ಶ್ರೀ ಬಸವಕಿರಣ, ಶ್ರೀ ನಾಗರಾಜ , ಶ್ರೀ ಪ್ರೇಮಕುಮಾರ, ಡಾ॥ ರಮೇಶ, ಕು. ದಿವ್ಯ, ಕು. ಅಶ್ವಿನಿ ಹಿಪ್ಪಳಗಾವ, ಕು.ಪಲ್ಲವಿ ಚಿಟಗುಪ್ಪೆ, ಶ್ರೀ ರಾಹುಲ ಚುಕ್ಕಾಣಿ, ಕು. ನಾಗರತ್ನ , ಶ್ರೀ ಶಿದ್ದಲಿಂಗ ಮಲ್ಹಾರೆ, ಕು. ನಿಕಿತಾ ರಾಯಕೊಡೆ, ಮಹೇಶ ಸಾವಳೆ, ಐಶ್ವರ್ಯ ಬೆಂಬುಳ್ಗೆ, ಶ್ರೀಮತಿ ಲತಾ ಮಾಶೆಟ್ಟಿ, ಶ್ರೀ ಜಗನಾಥ, ಶ್ರೀನಿವಾಸ ಗುತ್ತೆದಾರ ಸೇರಿದಂತೆ ಇತರೆ ಉಪನ್ಯಾಸಕರು, ಪಿ.ಯು.ಸಿ. ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳು ಹಾಜರಿದ್ದರು.

ಶ್ರೀ ಅನಿಲಕುಮಾರ ಜಾಧವ ಜೀವಶಾಸ್ತ್ರ ಉಪನ್ಯಾಸಕರು ಮತ್ತು ಶ್ರೀ ರಜನಿಕಾಂತ ಗಣಿತ ವಿಷಯದ ಉಪನ್ಯಾಸಕರು ಇವರು ನಿರೂಪಿಸಿದರು. ಮತ್ತು ಕು. ಸೀಮಾ ಕಟ್ಟೊಳೆ ಭೌತಶಾಸ್ತ್ರ ಉಪನ್ಯಾಸಕರು ವಂದಿಸಿದರು.

**ವರದಿ: ಸಾಗರ ಪಡಸಲೆ**

# ಶಾಸಕ ಶ್ರೀಬಾಬಾ ಸಾಹೇಬ ಪಾಟೀಲರ ಜನ್ಮದಿನ ಆಚರಣೆ


ಬೆಳಗಾವಿ ಜಿಲ್ಲೆಯ ಕಿತ್ತೂರು ಮತ ಕ್ಷೇತ್ರದ ಶಾಸಕರಾದ ಶ್ರೀ ಬಾಬಾ ಸಾಹೇಬ ಪಾಟೀಲ ರವರ 53ನೇ ಜನ್ಮದಿನದ ನಿಮಿತ್ಯವಾಗಿ ಅಭಿಮಾನಿಗಳು, ಸಾರ್ವಜನಿಕರು ಗ್ರಾಮಸ್ಥರು ನೇಗಿನಾಳ ಗ್ರಾಮದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರ ಅದ್ದೂರಿಯಾಗಿ ನೆರವೇರಿತು. ಇದೇ ಸಂದರ್ಭದಲ್ಲಿ ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಣಾ ಕಾರ್ಯಕ್ರಮವನ್ನು ಶಾಸಕರು ನೆರವೇರಿಸಿ ಕಾರ್ಯಕರ್ತರು ಹಾಗೂ ಮತಕ್ಷೇತ್ರ ಜನಗಳ ಮಧ್ಯೆ ಶಾಸಕರಾದ ಶ್ರೀ ಬಾಬಾ ಸಾಹೇಬ ಪಾಟೀಲರು ಮಾತನಾಡಿ ನನ್ನ ಮತ ಕ್ಷೇತ್ರದಲ್ಲಿ ಎರಡು ವರ್ಷದಲ್ಲಿ ಸಾಧ್ಯವಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವೆ ಇನ್ನೂ ಮೂರು ವರ್ಷ ಅವಧಿ ಇದೆ ಕಲ್ಪನೆ ಮೀರಿ ಕೆಲಸ ಮಾಡುವ ಭರವಸೆ ಇದೆ, ಕ್ಷೇತ್ರದ ಜನರು ತಮ್ಮ ಫೋನ್ ಕರೆ ಸ್ವೀಕರಿಸಿಲ್ಲ ಅಂತ ತಪ್ಪು ಭಾವಿಸಬಾರದು, ಪ್ರತಿಯೊಬ್ಬರ ಭಾವನೆಗೆ ಸ್ಪಂದಿಸಿ ಸೇವೆ ಮಾಡುವೆ ನೀವೆಲ್ಲರೂ ಸೇರಿ ಕಷ್ಟಪಟ್ಟು ಗೆಲುವು ತಂದು ಕೊಟ್ಟಿದ್ದರ ಅರಿವು ನನಗಿದೆ ಆದ್ದರಿಂದ ಎಲ್ಲರೂ ತಾಳ್ಮೆಯಿಂದ ವರ್ತಿಸಿದರೆ ಕ್ಷೇತ್ರದ ಅಭಿವೃದ್ಧಿಗೆ ಅನುಕೂಲವಾಗುವುದು ಜನರಿದ್ದರೆ ಅಧಿಕಾರ, ಅಭಿವೃದ್ಧಿ ಸಾಧ್ಯವೆಂಬ ತಿಳುವಳಿಕೆ ಇದೆ ಎಂದು ಶಾಸಕರು ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು.

**ದೊಡ್ಡಮಟ್ಟದ ಅಭಿವೃದ್ಧಿ:**

ಯುವ ಧುರೀಣ ಮೃಣಾಲ್ ಹೆಬ್ಬಾಳಕರ್ ಮಾತನಾಡಿ ಬಾಬಾ ಸಾಹೇಬರು ಮೊದಲ ಬಾರಿಗೆ ಶಾಸಕರಾಗಿದ್ದರೂ ಅವರಿಗೆ 20 ವರ್ಷಗಳಿಂದ ಸಾರ್ವಜನಿಕ ಸೇವೆಯ ಅನುಭವ ಇದೆ ಈ ಕಾರಣದಿಂದ ಚೆನ್ನಮ್ಮನ ಕಿತ್ತೂರು ದೊಡ್ಡ ಮಟ್ಟದಲ್ಲಿ ಅಭಿವೃದ್ಧಿ ಕಾಣುತ್ತಿದೆ ಎಂದರು. ಇದೇ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಹಾಗೂ ಶಾಸಕರ ಪತ್ನಿ ಶ್ರೀಮತಿ ರೋಹಿಣಿ ಬಾ ಪಾಟೀಲ ಮಾವನವರಾದ ದಿ: ದೇವನಗೌಡ್ರ ಪಾಟೀಲ ನಿಷ್ಠೆ ಹಾಗೂ ಪ್ರಾಮಾಣಿಕತೆಗೆ ಹೆಸರಾಗಿದ್ದರು



ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಹಾಗೂ ಪೂಜ್ಯರ ಜನರ ಆಶೀರ್ವಾದದಲ್ಲಿ ಈ ಮತಕ್ಷೇತ್ರದಲ್ಲಿ ಮುನ್ನಡೆಯುತ್ತೇವೆ, ಬಾಬಾ ಸಾಹೇಬ ಸಹೋದರ ನಾನಾ ಸಾಹೇಬ್ ಪಾಟೀಲರು ಈ ವರ್ಷ ಬಿ. ಡಿ. ಸಿ. ಸಿ ಬ್ಯಾಂಕ್ ಚುನಾವಣೆಗೆ ಸ್ಪರ್ಧಿಸಲಿದ್ದಾರೆ ಅವರಿಗೆ ತಮ್ಮೆಲ್ಲರ ಆಶೀರ್ವಾದ ಬೇಕೆಂದು ವಿನಂತಿಸಿದರು.




**ನಾನಾ ಕಾರ್ಯಕ್ರಮ:** ಬಾಬಾ ಸಾಹೇಬ್ ಪಾಟೀಲರು ಅವರ ಬಂಧುಗಳು, ಅಭಿಮಾನಿಗಳು, ಗಣ್ಯರು, ಗ್ರಾಮಸ್ಥರು ಮಹಿಳೆಯರು, ನಾಗರಿಕರು, ಅಧಿಕಾರಿಗಳು, ಜನಪ್ರತಿನಿಧಿಗಳು ತಂಡೋಪ ತಂಡವಾಗಿ ಆಗಮಿಸಿ ಶುಭ ಕೋರಿದರು. ರುದ್ರ ಸ್ವಾಮಿ ಮಠದ ಶರಣಬಸವ ದೇವರುತುರುಮರಿಯ ಶಾಂತಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸವದತ್ತಿ ಶಾಸಕರಾದ ಶ್ರೀವಿಶ್ವಾಸ್ ವೈದ್ಯ ಹಾಗೂ ಎಂ ಎಲ್ ಸಿ ಚನ್ನರಾಜ ಹಟ್ಟಿ ಹೋಳಿ ಆಗಮಿಸಿದ್ದರು. ಯುವಧುರೀಣ ನಾನಾಸಾಹೇಬ ಪಾಟೀಲ, ಕಿತ್ತೂರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಗನಗೌಡ ಪಾಟೀಲ, ನೇಸರ್ಗಿ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ನಿಂಗಪ್ಪ ಅರಕೇರಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಇದೇ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು, ಕಾರ್ಯಕರ್ತರು ರಕ್ತದಾನ ಮಾಡಿದರು.

ಮತಕ್ಷೇತ್ರದ ನಾನಾ ಹಳ್ಳಿಗಳ ಶಾಲೆಗಳಿಗೆ ಒಟ್ಟು 15,000 ನೋಟ್ ಬುಕ್ ವಿತ-ರಿಸಲಾಯಿತು.

ಮಕ್ಕಳ ಶಿಕ್ಷಣಕ್ಕಾಗಿ ಐದು ಸರ್ಕಾರಿ ಶಾಲೆಗಳಿಗೆ ಐದು ಸ್ಮಾರ್ಟ್ ಟಿವಿಗಳನ್ನು ಶಾಸಕರು ವೈಯಕ್ತಿಕ ಹಣದಿಂದ ವಿತರಿಸಿ, ನೇಗಿನಾಳ ಗ್ರಾಮದಲ್ಲಿ ನೂತನ ಬಸ್ ನಿಲ್ದಾಣವನ್ನು ಶಾಸಕ ಶ್ರೀ ಬಾಬಾ ಸಾಹೇಬ ಪಾಟೀಲ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಶಾಲಾ ಮಕ್ಕಳಿಂದ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಹಿರಿಯರು, ಗಣ್ಯರು, ಯುವಕರು, ಕಾರ್ಯಕರ್ತರು, ಮಾಜಿ ಸೈನಿಕ ಸಂಘದ ಸದಸ್ಯರು ಭಾಗವಹಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದರು. ಕಿತ್ತೂರ ಅರಳಿ ಕಟ್ಟಿ ಸರ್ಕಲ್ ದಲ್ಲಿ ಊಟದ ವ್ಯವಸ್ಥೆ ಹಾಗೂ ಕಿತ್ತೂರು ಬಸ್ ನಿಲ್ದಾಣದ ಅಕ್ಕಪಕ್ಕ ಕಾರ್ಯಕರ್ತರಿಂದ ಸ್ವಚ್ಛತಾ ಕಾರ್ಯಕ್ರಮ ಕೂಡಾ ನಡೆಯಿತು.

**ವರದಿ ಮಂಜು.ಎಮ್.ಚಿಕ್ಕಣ್ಣವರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ಶುಚಿತ್ವವನ್ನು ಅಳವಡಿಸಿಕೊಳ್ಳಿ ಮತ್ತು ರೋಗವನ್ನು ಓಡಿಸಿ




**ಬೆಳಗಾವಿ:** ದಿ.23-07-2025 ರಂದು ಬೈಲಹೊಂಗಲ ಪುರಸಭೆ ವ್ಯಾಪ್ತಿಯ ಶಾಸಕರ ಮತಕ್ಷೇತ್ರ ಕನ್ನಡ ಮಾದರಿ ಶಾಲೆ ನಂ.04 ರಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಶುಚಿತ್ವ ಹಾಗೂ ರೋಗಗಳು ಹರಡುವ ಮೊದಲು ಮುಂಜಾಗ್ರತಾ ಕ್ರಮಗಳನ್ನು ವಹಿಸುವ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಶ್ರೀ ಸೋಮಶೇಖರ ಮುತ್ನಾಳ ರವರು ಮಾತನಾಡಿ ಸಾಮಾನ್ಯವಾಗಿ ಮಳೆಗಾಲದಲ್ಲಿ ರೋಗವಾಹಕಗಳಿಂದ ಹರಡುವ ಮತ್ತು ನೀರಿನಿಂದ ಹರಡುವ ಡೆಂಗ್ಯೂ, ಮಲೇರಿಯಾ ಮತ್ತು ಚಿಕನಗುನ್ಯಾ ಹಾಗೂ ಡಯೇರಿಯಾದಂತಹ ರೋಗಗಳ ಲಕ್ಷಣ, ಕೈಗೊಳ್ಳಬೇಕಾದ ಮುಂಜಾಗ್ರತೆ, ಅನುಸರಿಸಬೇಕಾದ ಕ್ರಮಗಳ ಕುರಿತು ಆರೋಗ್ಯ ಶಿಕ್ಷಣ ನೀಡಿದರು.

ಶ್ರೀ ಎಮ್. ಆಯ್. ಕುಟ್ರಿ ಕಛೇರಿ ವ್ಯವಸ್ಥಾಪಕರು ಮಾತನಾಡಿ ಸಾರ್ವಜನಿಕರು ಮನೆ, ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಿ ಶುಚಿತ್ವವನ್ನು ಅಳವಡಿಸಿಕೊಂಡು ರೋಗಗಳು ಬರದಂತೆ ಮುಂಜಾಗೃತೆ ವಹಿಸಲು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಅರ್ಜುನ ಕಲಕುಟಕರ ಪುರಸಭೆ ಸದಸ್ಯರು ಹಾಗೂ ಎಸ್.ಡಿ.ಎಮ್.ಸಿ. ಅಧ್ಯಕ್ಷರು ಶಾಸಕರ ಮತಕ್ಷೇತ್ರ ಕನ್ನಡ ಮಾದರಿ ಶಾಲೆ ನಂ.04 ರವರು ಮಾತನಾಡಿ ವಿದ್ಯಾರ್ಥಿಗಳು ತಮ್ಮ ಶಾಲೆ, ಮನೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಸ್ವಚ್ಛತೆ ಕಾಪಾಡುವಂತೆ ಹಾಗೂ ಇತರರಿಗೂ ಅರಿವು ಮೂಡಿಸುವಂತೆ ತಿಳಿಸಿದರು. ಶಾಲಾ ಶಿಕ್ಷಕಿಯಾದ ಶ್ರೀಮತಿ ಎಸ್.ಬಿ. ಮರಲಿಂಗನ್ನವರ ಇವರು ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಡಿ. ಎನ್. ಹಲ್ಕಿ ಮುಖ್ಯೋಪಾಧ್ಯಾಯರು, ಶ್ರೀ ಎಸ್. ಎನ್. ಪಾಟೀಲ ಕಿರಿಯ ಆರೋಗ್ಯ ನಿರೀಕ್ಷಕರು, ಶ್ರೀ ಬಸವರಾಜ ನೇಸರಗಿ, ಶ್ರೀ ರುದ್ರಯ್ಯಾ ಚಿಕ್ಕಮಠ, ಸಮುಧಾಯ ಸಂಚಾಲಕರಾದ ಶ್ರೀಮತಿ ಮಾಧುರಿ ರಾಮಗುಂಡಿ, ಕುಮಾರಿ. ಕಾವ್ಯಾ ಪಾಟೀಲ ಹಾಗೂ ಶಾಲಾ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

**ವರದಿ ಮಂಜು .ಎಮ್.ಚಿಕ್ಕಣ್ಣವರ**

# ಕಾನೂನಿನ ಕಣ್ತಾವಲಿದ್ದರೂ ಮಾನವ ಕಳ್ಳ ಸಾಗಾಣಿಕೆಗಿಲ್ಲ ನಿಯಂತ್ರಣ: ನ್ಯಾ.ರೋಹಿಣಿ ಬಸ್ಸಾಪೂರ



**ಬೆಳಗಾವಿ/ ಬೈಲಹೊಂಗಲ:** ಮಾನವ ಕಳ್ಳ ಸಾಗಾಣಿಕೆ ಅಂತರ ರಾಜ್ಯ ಮತ್ತು ರಾಷ್ಟ್ರಗಳ ಮಟ್ಟದಲ್ಲಿ ನಿರಾತಂಕವಾಗಿ ನಡೆಯುತ್ತಿರುವ ಮಾನವ ಕಳ್ಳ ಸಾಗಾಣಿಕೆ ಇಂದಿನ ಯುವಶಕ್ತಿ ಪ್ರೇಮದ ಜಾಲ, ಹಣದ ಆಮಿಷ, ಉದ್ಯೋಗದ ಸುಳ್ಳು ಭರವಸೆ ನಂಬದೆ ಜಾಗೃತರಾಗಿ ಈ ಪಿಡಗನ್ನು ತಡೆಗಟ್ಟಲು ಸಾರ್ವಜನಿಕವಾಗಿ ಕೈ ಜೋಡಿಸಬೇಕೆಂದು ನ್ಯಾಯಾಧೀಶೆ ರೋಹಿಣಿ ಬಸ್ಸಾಪೂರ ಯುವಕರಿಗೆ ಕರೆ ನೀಡಿದರು.

ನಗರದ ಗಣಾಚಾರಿ ಶಿಕ್ಷಣ ಸಂಸ್ಥೆಯ ಪ್ರಥಮ ಪಿಯುಸಿ ವರ್ಗದ ವಿದ್ಯಾರ್ಥಿಗಳ ಸ್ವಾಗತ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಮತ್ತು ಮಾನವ ಕಳ್ಳ ಸಾಗಾಣಿಕೆಯ ಜಾಗೃತಿ ಸಮಾರಂಭ ಉದ್ಘಾಟಿಸಿ ಮಾತನಾಡಿ, ಮಾನವ ಕಳ್ಳ ಸಾಗಾಣಿಕೆಗೆ ಮಹಿಳೆಯರು, ಅಪ್ರಾಪ್ತರು, ಮಕ್ಕಳು ಹಾಗೂ ಬಡವರು ಬಲಿಯಾಗುತಿದ್ದಾರೆ,

ಇದೊಂದು ಪ್ರಪಂಚದಲ್ಲಿ ಹಣ ಗಳಿಸುವ ಎರಡನೇ 'ಅತಿ ದೊಡ್ಡ ದಂಧೆ' ಎಂದೇ ಪರಿಗಣಿಸಲಾಗುತ್ತಿದೆ. ಈ ಬಗ್ಗೆ ಪ್ರಕರಣಗಳು ದಾಖಲಾದರೂ ಕೆಲ ಸಮಾಜಘಾತಕ ಜನರು ಕಾನೂನಿನ ಕಣ್ಣು ತಪ್ಪಿಸಿ ದೊಡ್ಡ ಮಟ್ಟದಲ್ಲಿ ಈ ಜಾಲ ಕಾರ್ಯ ಪ್ರವೃತ್ತವಾಗಿರುವುದು ಕಳವಳಕಾರಿಯಾಗಿದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಎಮ್. ಆರ್. ಮೆಳವಂಕಿ ಮಾತನಾಡಿ, ಹಲವು ಕಾರಣಗಳಿಂದಾಗಿ ನಡೆಯುತ್ತಿರುವ ಮಾವನ ಕಳ್ಳ ಸಾಗಾಣಿಕೆಗೆ ಮಹಿಳೆಯರು, ಅಪ್ರಾಪ್ತರು, ಬಡವರು ಬಲಿಯಾಗುತ್ತಿದ್ದಾರೆ ಮಾನವ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ರಾಜ್ಯ ಸಿಐಡಿ ಘಟಕದಲ್ಲಿ ಆಂಟಿ ಹ್ಯೂಮನ್ ಟ್ರಾಫಿಕಿಂಗ್ ಸೆಲ್ ಸ್ಥಾಪಿಸಲಾಗಿದ್ದರೂ ಪೊಲೀಸರು ಕಣ್ಣು ತಪ್ಪಿಸಿ ವ್ಯವಸ್ಥಿತವಾಗಿ ಈ ದಂಧೆ ನಡೆಯುತ್ತಿದೆ ಮಾನವ ಕಳ್ಳ ಸಾಗಾಣಿಕೆ ನಿಯಂತ್ರಣ ಸರ್ಕಾರ ಹಾಗೂ ಪೊಲೀಸ್ ಇಲಾಖೆಗೂ ಸವಾಲಾಗಿದೆ ದೇಶದಲ್ಲಿ ಶೇ. 70 ರಷ್ಟು ನಡೆದರೆ ಹೊರಗಡೆ ಶೇ. 30 ರಷ್ಟು ನಡೆಯುತ್ತಿದೆ. ಈ ಪೈಕಿ ಶೇ. 46 ಪ್ರಮಾಣದಲ್ಲಿ ವೈಶ್ಯಾವಾಟಿಕೆ ಕಾರಣಕ್ಕಾಗಿ, ಶೇ. 26 ರಷ್ಟು ಭಿಕ್ಷಾಟನೆ ಹಾಗೂ ಶೇ 26 ರಷ್ಟು ಬಾಲಕಾರ್ಮಿಕ ಪದ್ದತಿಗಾಗಿ ನಡೆಯುತ್ತಿರುವ ಮಾನವ ಕಳ್ಳ ಸಾಗಾಣಿಕೆ ಒಂದು ಸಾಮಾಜಿಕ ಪಿಡಗಾಗಿದೆ ಎಂದರು.

ನ್ಯಾಯವಾದಿ ಎಫ್.ಎಸ್.ಸಿದ್ದನಗೌಡರ ಮಾತನಾಡಿ, ವಿದ್ಯಾರ್ಥಿ ಜೀವನ ಬಂಗಾರದ ಜೀವನವಿದ್ದಂತೆ ಬಂಗಾರವನ್ನು ಕಾಯಿಸಿ ಕರಗಿಸಿ ಸುತ್ತಿಗೆಯ ಪೆಟ್ಟು ತಿಂದು ನಂತರ ಉತ್ತಮ ಆಕರ್ಷಕವಾಗಿ ಎಲ್ಲರ ಮನಸ್ಸು ಗೆಲ್ಲುವ ಆಭರಣವಾಗುವಂತೆ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಕಷ್ಟಪಟ್ಟು ಹಗಲಿರುಳು ಓದು ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮ ಗಮನ ಕೇಂದ್ರಿಕರಿಸಿದರೆ ನಿಮ್ಮ ಭವಿಷ್ಯ ಉಜ್ವಲವಾಗಲಿದೆ ಆ ನಿಟ್ಟಿನಲ್ಲಿ ಸತತ ಅಧ್ಯಯನ ಮತ್ತು ಪ್ರಯತ್ನ ಇರಲೆಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಪ್ರಾ. ಡಾ.ಸಿ.ಬಿ.ಗಣಾಚಾರಿ ಮಾತನಾಡಿ, ಕಾನೂನು ಬಲಿಷ್ಠವಾದಂತೆ ಬಾಲ್ಯವಿವಾಹ ಕಡಿಮೆಯಾಗಿ ವಿದ್ಯಾರ್ಥಿನಿಯರು ಓದು ಹೆಚ್ಚುತ್ತಿದೆ ವಿದ್ಯಾರ್ಥಿಗಳು ಓದಿನ ಜೊತೆಗೆ ಮೌಲ್ಯಗಳು ಮತ್ತು ಸಂಸ್ಕಾರ ಬೆಳಸಿಕೊಂಡಾಗ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಲಿಕ್ಕೆ ಸಾಧ್ಯ ಎಂದರು.

ಕಿರಿಯ ಶ್ರೇಣಿ ನ್ಯಾಯಾಧೀಶ ಬಸವರಾಜ ನಾಯ್ಕ್ ಮಾತನಾಡಿದರು. ವೇದಿಕೆಯ ಮೇಲೆ ನ್ಯಾಯವಾದಿ ಸಂಘದ ಉಪಾಧ್ಯಕ್ಷ ಅಶೋಕ ಸಿದ್ರಾಮನಿ, ಪ್ರಧಾನ ಕಾರ್ಯದರ್ಶಿ ವಿ.ಜಿ.ಕಟದಾಳ, ಅಪರ ಸರ್ಕಾರಿ ವಕೀಲ ರಮೇಶ ಕೊಲಕಾರ ಇದ್ದರು. ಕಾರ್ಯಕ್ರಮದಲ್ಲಿ ಚುನಾಯಿತ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಪ್ರಮಾಣ ಪತ್ರ ವಿತರಿಸಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳನ್ನು ಹೂ ನೀಡಿ ಬರಮಾಡಿಕೊಂಡರು. ಪಿಯುಸಿ ವಿಭಾಗದ ಪ್ರಾಚಾರ್ಯೆ ಸಿ.ಟಿ. ಕಲ್ಲೂರ ಸ್ವಾಗತಿಸಿದರು. ಶಿಕ್ಷಕಿ ಎಸ್.ಎಮ್.ತಲ್ಲೂರ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ಪಿ.ಎಸ್.ಭರಮಣ್ಣವರ ವಂದಿಸಿದರು.

**ವರದಿ ಮಂಜು . ಎಮ್. ಚಿಕ್ಕಣ್ಣವರ**

# ಗ್ರಾಮ ಪಂಚಾಯತಿ ಮುಂದೆ ಕ.ರ.ವೇ ಪ್ರತಿಭಟನೆ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕ ಹೂವನೂರ ಗ್ರಾಮದಲ್ಲಿ ಇತ್ತೀಚಿಗೆ ಕರ್ನಾಟಕ ರಕ್ಷಣಾ ವೇದಿಕೆಯ ( ಟಿ.ಎ ನಾರಾಯಣ ಗೌಡ ಬಣ) ವತಿಯಿಂದ ಹೂವನೂರು ಗ್ರಾಮದ ಗುರಿಕಾರ ಓಣಿಯ ರಸ್ತೆಯನ್ನು ಸುಧಾರಣೆ ಮಾಡುವ ಸಲುವಾಗಿ ಕೂಡಲಸಂಗಮ ಘಟಕದ ಪದಾಧಿಕಾರಿಗಳು ಮತ್ತು ಹೂವನೂರು ಗ್ರಾಮ ಘಟಕದ ಪದಾಧಿಕಾರಿಗಳು ಸೇರಿದಂತೆ 60ಕ್ಕೂ ಹೆಚ್ಚು ಕಾರ್ಯಕರ್ತರು ಸೇರಿ ಬೆಳಗಲ್ಲ ಗ್ರಾಮ ಪಂಚಾಯತಿಯ ಮುಂದೆ ತಾಲೂಕು ಅಧ್ಯಕ್ಷರ ಸಮ್ಮುಖದಲ್ಲಿ ಪ್ರತಿಭಟನೆಯನ್ನು ನಡೆಸಿದರು.

**ವರದಿ.ಅಬ್ದುಲಸಾಬ ನಾಯ್ಕರ**



ಸಂಪುಟ 04 । ಸಂಚಿಕೆ 18
ದಿನಾಂಕ: 01-08-2025 ಪುಟಗಳು:16

# ಸಮಸ್ಯೆಗಳ ಸುಳಿಯಲ್ಲಿ ತಾಲ್ಲೂಕು ಆಸ್ಪತ್ರೆ !?




ವಿಜಯಪುರ ಜಿಲ್ಲೆಯ ಇಂಡಿಯ ತಾಲೂಕು ಸರ್ಕಾರಿ ಆಸ್ಪತ್ರೆಗೆ ಹೋಗುವ ರಸ್ತೆ ಹಲವಾರು ವರ್ಷಗಳಿಂದ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ. ಆಸ್ಪತ್ರೆಯ ಒಳಗೆ ದೂರ ದೂರದ ಊರುಗಳಿಂದ ಬಂದ ಸಾರ್ವಜನಿಕ-ರಿಗೆ ಸರಿಯಾದ ಶುದ್ಧ ಕುಡಿಯುವ ನೀರಿನ ಹಾಗೂ ಶುಚಿ-ರುಚಿಯಾದ ಊಟ, ಉಪಹಾರದ ಕ್ಯಾಂಟೀನ್ ವ್ಯವಸ್ಥೆ ಕೂಡಾ ಇರುವುದಿಲ್ಲ ಡಾಕ್ಟರ್ಸ್ ಗಳಿಗೆ ಸರಿಯಾದ ನಿಗದಿತ ಸಮಯವೂ ಇಲ್ಲ ಎಷ್ಟೋ ಬಾರಿ ವೈದ್ಯರಿಗಾಗಿ ಕಾದು ಕಾದು ಸುಸ್ತಾಗಿ ಕೊನೆಗೆ ಪಟ್ಟಣದ ಖಾಸಗಿ ಆಸ್ಪತ್ರೆಗಳಲ್ಲಿ ಸಾವಿರಾರು ರೂಪಾಯಿ ಖರ್ಚು ಮಾಡಿ ಚಿಕಿತ್ಸೆ ಪಡೆದ ಘಟನೆಗಳೂ ಜರುಗಿವೆ.

ಹೀಗಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆ ಆಗುತ್ತಿದೆ, ತುರ್ತು ಸಂದರ್ಭಗಳಿಗಾಗಿ ಅಂಬುಲೆನ್ಸ್ ಕೂಡ ಒಂದರಿಂದ ಎರಡು ಅಷ್ಟೇ ಇರುವುದರಿಂದ ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳಿಗೆ ತುಂಬಾ ತೊಂದರೆ ಉಂಟಾಗಿದೆ ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳಾಗಲಿ ಹಾಗೂ ತಾಲೂಕಾ ಸಾರ್ವಜನಿಕ ಮುಖ್ಯ ಅಧಿಕಾರಿಯಾಗಲೀ ಈ ಸಮಸ್ಯೆಗಳನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕೆನ್ನುವುದು ಇಂಡಿ ತಾಲೂಕಿನ ಸಾರ್ವಜನಿಕರ ಆಕ್ರೋಶವಾಗಿದೆ.

**ವರದಿ. ಅರವಿಂದ ಕಾಂಬಳೆ**

## ಕರುನಾಡ ಕಂದ ವರದಿಯ ಫಲಶ್ರುತಿ

# ವರದಿಯ ಹಿನ್ನಲೆಯಲ್ಲಿ ಮುಸ್ಲೇಪಲ್ಲಿ ಅಂಗನವಾಡಿ ಕೇಂದ್ರಕ್ಕೆ ಅಧಿಕಾರಿಗಳ ಭೇಟಿ, ಸಮಸ್ಯೆಗೆ ಪೂರ್ಣವಿರಾಮ.




ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ಮೀನಸಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಮುಸ್ಲೇಪಲ್ಲಿ ಗ್ರಾಮದ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರ ಕಿತ್ತಾಟದಿಂದ ಬೇಸತ್ತ ಗ್ರಾಮಸ್ಥರು ಒಂದು ವಾರದ ಕಾಲ ಅಂಗನವಾಡಿ ಕೇಂದ್ರಕ್ಕೆ ಬೀಗ ಜಡಿದಿದ್ದರು. ಕಾರ್ಯಕರ್ತೆಯರ ನೇಮಕಾತಿ ಆದೇಶ ಹಾಗೂ ಉಸ್ತುವಾರಿ ಜವಾಬ್ದಾರಿ ಹಸ್ತಾಂತರವೇ ಕಾರ್ಯಕರ್ತೆಯರ ಕಿತ್ತಾಟಕ್ಕೆ ಕಾರಣವಾಗಿತ್ತು.

ಈ ಕುರಿತು ದಿ. 21/7/2025 ರಂದು ಕರುನಾಡ ಕಂದ. ಕಾಮ್ ನಲ್ಲಿ ವರದಿ ಪ್ರಕಟ ಮಾಡಿ ಸಂಬಂಧ ಪಟ್ಟವರ ಗಮನಕ್ಕೆ ತರಲಾಯಿತು. " ಗಡಿ ಭಾಗದ ಮುಸ್ಲೇಪಲ್ಲಿ ಅಂಗನವಾಡಿ ಶಾಲೆಗೆ ಹಿಡಿದ ಗ್ರಹಣ " ಎಂಬ ವರದಿಯ ಹಿನ್ನಲೆಯಲ್ಲಿ ದಿ.23/7/2025 ರಂದು ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶರಣಬಸಪ್ಪ, ಮೇಲ್ವಿಚಾರಕರಾದ ಗೌರಮ್ಮ ಹಿರೇಮಠ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸರೋಜ ಮತ್ತು ಗ್ರಾಮ ಲೆಕ್ಕಾಧಿಕಾರಿ ಸಿದ್ದು ಅವರು ಭೇಟಿ ನೀಡಿ ಅಂಗನವಾಡಿ ಕೇಂದ್ರದ ಬೀಗ ತೆಗೆದು ಅಲ್ಲಿನ ಸಮಸ್ಯೆಗೆ ಪರಿಷ್ಕಾರ ನೀಡಿದ್ದಾರೆ.

**ವರದಿ ಜಗದೀಶ್ ಕುಮಾರ್ ಭೂಮಾ**

**" ಇಂದು ಅಂಗನವಾಡಿ ಕೇಂದ್ರದ ಬೀಗ ಹಾಗೂ ಅಂಗನವಾಡಿ ಸೀಲ್ ತೆಗೆದು ಮೊಬೈಲ್ ನೀಡಿ ಕೆಲಸ ನಿರ್ವಹಿಸಲು ಸೂಚಿಸಿದ್ದಾರೆ, "ಕರುನಾಡ ಕಂದ ಪತ್ರಿಕೆ" ಯ ವರದಿಯಿಂದಾಗಿ ಮೇಲಾಧಿಕಾರಿಗಳು ಭೇಟಿ ನೀಡಿ ಸಮಸ್ಯೆ ಬಗೆಹರಿಸಲು ಕಾರಣೀಕರ್ತರಾದ ಶರಣಬಸಪ್ಪ ಎಲ್ಹೇರಿ ( ಕ.ರ.ವೇ ತಾಲ್ಲೂಕು ಅಧ್ಯಕ್ಷರು ಗುರುಮಠಕಲ್) ಕರುನಾಡ ಕಂದ ಸಂಪಾದಕರಿಗೆ, ವರದಿಗಾರರಿಗೆ ಧನ್ಯವಾದಗಳು. "**

**– ಶ್ರೀಮತಿ ಚೌಡಮ್ಮ,**
**ಅಂಗನವಾಡಿ ಕಾರ್ಯಕರ್ತೆ**

# ಸರಕಾರಿ ಆದರ್ಶ ವಿದ್ಯಾಲಯಕ್ಕೆ ಮೂಲಭೂತ ಸೌಲಭ್ಯ ನೀಡಲು ಶಾಸಕ ನಾಡಗೌಡರಿಗೆ ಮನವಿ



**ವಿಜಯಪುರ/ ಮುದ್ದೇಬಿಹಾಳ** :ತಾಲೂಕಿನ ಬಿದರಕುಂದಿ ಗ್ರಾಮದ ಸರಕಾರಿ ಆರ್ ಎಂ ಎಸ್ ಎ ಶಾಲೆಗೆ ಮೂಲಭೂತ ಸೌಕರ್ಯಗಳನ್ನು ನೀಡುವಂತೆ ಎಸ್. ಡಿ. ಎಂ. ಸಿ ಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷರು, ಸದಸ್ಯರು, ಶಾಲಾ ಸಿಬ್ಬಂದಿ ಪಟ್ಟಣದ ಗೃಹಕಚೇರಿಯಲ್ಲಿ ಶಾಸಕ ಸಿ. ಎಸ್. ನಾಡಗೌಡರಿಗೆ ಭೇಟಿಯಾಗಿ ಮನವಿಯನ್ನು ಸಲ್ಲಿಸಿದರು.

ಈ ವೇಳೆ ಶಾಲಾ ಎಸ್ ಡಿ ಎಂ ಸಿ ಸದಸ್ಯರಾದ ಬಂದೇನವಾಜ ಕುಮಸಿ ಮಾತನಾಡಿ ಶಾಲೆಯು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದ್ದು , ಶಾಲೆಯಲ್ಲಿ 550 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ಖಾಯಂ ಶಿಕ್ಷಕರ ನೇಮಕಾತಿ ಮಾಡಬೇಕು, ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹೈಟೆಕ್ ಶೌಚಾಲಯ, ಬಿಸಿ ಊಟದ ಕೋಣೆ , 600 ಮಕ್ಕಳು ಒಂದೇ ಬಾರಿಗೆ ಕುಳಿತು ಊಟ ಮಾಡುವಷ್ಟು ಭೋಜನಾಲಯ ನಿರ್ಮಾಣ ಮಾಡಬೇಕು, ಮಕ್ಕಳಿಗೆ ಕುಡಿಯುವ ನೀರಿಗಾಗಿ ಒಂದೆ ಕೊಳವೆ ಬಾವಿ ಇದ್ದು ಇನ್ನೊಂದು ಕೊರೆಸಿ ಕೊಡಬೇಕು, ಇಲ್ಲವೇ ಪಟ್ಟಣದಿಂದ ಕೃಷ್ಣಾ ನದಿಯ ಸಿಹಿ ನೀರಿನ ಸಂಪರ್ಕವನ್ನು ಒದಗಿಸಬೇಕು, ಶಾಲೆಯ ಅಡುಗೆಕೋಣೆಯ, ಶೌಚಾಲಯಗಳ ನೀರು ಹರಿದು ಹೋಗಲು ಅವಕಾಶ ಇಲ್ಲದಿರುವುದರಿಂದ ಮಲಿನತೆ ಉಂಟಾಗಿದೆ, ಆದ್ದರಿಂದ ಒಳಚರಂಡಿ ಸೌಲಭ್ಯ ಒದಗಿಸಬೇಕು, ಮಕ್ಕಳಿಗೆ ಆಟವಾಡಲು ಸಮತಟ್ಟಾದ ಮೈದಾನ ಮತ್ತು ಶಾಲಾ ಸೌಂದರ್ಯ ಹೆಚ್ಚಿಸಲು ಉದ್ಯಾನವನ ನಿರ್ಮಾಣ ಮಾಡಬೇಕು ಶಾಲೆಗೆ ರಸ್ತೆಗಳು ಸಂಪೂರ್ಣ ಹದಗೆಟ್ಟು ಹೋಗಿದ್ದು ದುರಸ್ಥಿಗೊಳಿಸಬೇಕು ಎಂದು ಶಾಸಕ ನಾಡಗೌಡರಲ್ಲಿ ವಿಶೇಷ ಮನವಿ ಮಾಡಿಕೊಂಡರು.

ಮನವಿಯನ್ನು ಸ್ವೀಕರಿಸಿದ ಶಾಸಕರು ನೂತನ ಅಧ್ಯಕ್ಷರಾದ ಪೂರ್ಣಿಮಾ ಬೆಳಗಲ್ಲ ಇವರನ್ನು ಸನ್ಮಾನಿಸಿ ಮತ್ತು ಬೇಡಿಕೆಗಳು ಅತ್ಯಂತ ಮಹತ್ವದ್ದವುಗಳಾಗಿದ್ದು ಎಲ್ಲಾ ಬೇಡಿಕೆಗಳನ್ನು ನೀಡುತ್ತೇವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸದಸ್ಯರಾದ ಮನೋಹರ ಪಾಟೀಲ, ನಿಂಗನಗೌಡ ಬಿರಾದಾರ, ಯಲ್ಲಪ್ಪ ಮ್ಯಾಗೇರಿ, ಮಂಜುಳಾ ಹಡಗಲಿ, ನಿಂಗನಗೌಡ ಬಿರಾದಾರ (ಅಪ್ಪು), ಗೀತಾ ನಾಲತವಾಡ, ಬಿಸಿಯೂಟದ ಸಹಾಯಕ ನಿರ್ದೇಶಕರಾದ ಎಂ.ಎಂ. ಬೆಳಗಲ್, ಮುಖ್ಯೋಪಾಧ್ಯಾಯರಾದ ಅನಿಲಕುಮಾರ ರಾಠೋಡ, ಸಿಬ್ಬಂದಿ ಎನ್ ಎಸ್. ಬಿರಾದಾರ, ಸಂಗಮೇಶ ಸಜ್ಜನ ಸೇ-ರಿದಂತೆ ಮುಂತಾದವರು ಇದ್ದರು.

**ವರದಿ ನಜೀರ ಚೋರಗಸ್ತಿ**

"ಕರುನಾಡ ಕಂದ ಪತ್ರಿಕೆ"
ನ್ಯೂಸ್ ಪೋರ್ಟಲ್
ಹಾಗೂ ಯೂಟ್ಯೂಬ್ ಚಾನೆಲ್ ಗೆ
ಪಾರ್ಟ್/ಫುಲ್ ಟೈಮ್ ನಲ್ಲಿ
ಕಾರ್ಯ ನಿರ್ವಹಿಸಲು
ರಾಜ್ಯಾದ್ಯಂತ ಎಲ್ಲಾ ಜಿಲ್ಲೆ, ತಾಲೂಕು
ಮಟ್ಟದಲ್ಲಿ ಸ್ಥಳೀಯ ವರದಿಗಾರರು
ಬೇಕಾಗಿದ್ದಾರೆ.

18 ವರ್ಷದಿಂದ 45 ವರ್ಷದವರೆಗಿನ
ಆಸಕ್ತರು ಸಂಪರ್ಕಿಸಬಹುದು.

TARGET ಇರುವುದಿಲ್ಲ

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹೆಸರು,
ತಾಲ್ಲೂಕು ವಾಟ್ಸ್ ಆಪ್ ಮಾಡಿ ಅಥವಾ
ಕರೆ ಮಾಡಿ:

ಬಸವರಾಜ ಬಳಿಗಾರ, ಸಂಪಾದಕರು
Call & WhatsApp:
9986366909
www.karunadakanda.com




KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR